12th Century's
Enlightment Technic
and Evolution

ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ವಿರಚಿತ

ಸ್ವರೂಪಸಿದ್ಧಿ



ಸಂಪಾದಕರು

ಬಸವರಾಜ ಸ್ವಾಮಿ

12th Century's
Enlightment Technic
and Evolution

ಸ್ವರೂಪ ಸಿದ್ಧಿ

ಲೇಖಕರು
ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು
ಡಬ್ಬೇರು ಮಡುವು

ಸಂಪಾದಕರು
ಬಸವರಾಜಸ್ವಾಮಿ
ರಾಯಚೂರು

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12-7-196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು-584102

ಸ್ವರೂಪ ಸಿದ್ಧಿ
ಸ್ವರಚಿತ ವಚನಗಳು
Swaoopa Siddhi Swarachita Vachanagalu Authour : Sadguru Sri Vidyananda Saharanaru Dabberumaduvu Tq. Lingsugur, Dt. Raichur
Edited by : Basavaraj Swamy, Raichur
Mobile : 9980553750

ಲೇಖಕರು:
ಪರಮಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು

ಸಂಪಾದಕರು
ಬಸವರಾಜ ಸ್ವಾಮಿ,
ರಾಯಚೂರು

ಮಿಂಚಂಚೆ
suddimoola@gmail.com

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12–7–196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು– 584102

ಹಕ್ಕುಗಳು : ಪ್ರಕಾಶಕರು

ಬೆಲೆ: 150/–

ಪ್ರತಿಗಳು : 500

ಮುದ್ರಣ : ಪ್ರಥಮ ಮುದ್ರಣ ಮೇ 2023

ಬಳಸಿದ ಕಾಗದ: 70 ಜಿ.ಎಸ್.ಎಂ.ಎಸ್ ಮ್ಯಾಪಲಿತೋ

ಆಕಾರ : ಡೆಮಿ 1/8

ಪುಟಗಳು: 145+ viii

ಮುಖ ಪುಟ
ಮುರಳೀಧರ ವಿ. ರಾಠೋಡ್ ಬೆಂಗಳೂರು

ಮುದ್ರಣ
ಟ್ರಿನಿಟಿ ಅಕಾಡೆಮಿ – ಬೆಂಗಳೂರು

ಓದುವ ಮುನ್ನ ....

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು . ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರ ಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು . ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು . ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು . ಜಾತಿ ಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮ ಗ್ರಂಥಗಳಾದವು . ಅವು ಪೂಜೆಗೆ , ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು .

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟು ಕೊಂಡು **ಸ್ವರೂಪಸಿದ್ಧಿ** (ಸ್ವರಚಿತ ವಚನಗಳು) ಗ್ರಂಥವನ್ನು ಬರೆದರು . **ಸ್ವರೂಪ ಸಿದ್ದಿಯಲ್ಲಿ** ಶ್ರೀ ವಿದ್ಯಾನಂದ ಶರಣರ 564 ಸ್ವರಚಿತ ವಚನಗಳಿವೆ .

ಭರಿತಭಾವದಲ್ಲಿ – 180 ವಚನಗಳಿವೆ ,ಭೋದರತ್ನದಲ್ಲಿ – 101 ವಚನಗಳಿವೆ ,ಜ್ಞಾನಾ ಮೃತದಲ್ಲಿ –94 ವಚನಗಳಿವೆ ,ನಿರ್ವಾಣದಲ್ಲಿ – 34 ವಚನಗಳಿವೆ ,ಸಮಸ್ವರೂಪದಲ್ಲಿ – 70 ವಚಗಳಿವೆ , ಸರ್ವಮಂಗಳದಲ್ಲಿ – 41 ವಚನಗಳಿವೆ ,ಪರಮಸತ್ಯದಲ್ಲಿ – 20 ವಚನಗಳಿವೆ , ಘನಗಂಭೀರದಲ್ಲಿ –17 ವಚನಗಳಿವೆ .

ಹೀಗೆ ಒಟ್ಟು 564 ವಚನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಮೂಲಕ ಅನುಭಾವ ಶಕ್ತಿಯನ್ನು ಓದುವ ತನುವಿಗೆ ಮನದಟ್ಟಾಗುವಂತೆ " **ಸ್ವರೂಪ ಸಿದ್ಧಿ** " ಗ್ರಂಥ ಸಿದ್ಧಪಡಿಸಿ ಸ್ವಾನು ಭಾವದ ಕೃಷಿಯಲ್ಲಿ ತೊಡಗಿದ ಓದುಗನಿಗೆ ದಾಸೋಹ ರೂಪದಲ್ಲಿ ಉಣ ಬಡಿಸಿದ್ದಾರೆ.

ಸರ್ವರಿಂಗೆ ಅದ್ವೈತ ವಾಸನೆ ಅದೆಂತು ಸಾಧ್ಯ
ಗುರು ಈಶ್ವರರ ಕೃಪೆಯುಳ್ಳವರಿಂಗಿದು ಸಾಧ್ಯ
ಸಂಸಾರ ಪಾಶದಿಂದ ಪಾರಾಗಬೇಕೆಂಬುವದಾದರೂ ಎಲ್ಲರಿಗೆಲ್ಲಿಯದೊ
ನಿರಂಜನ ಪ್ರಭು ನಾಗೇಶ್ವರಾ
ವಚನದಿಂದ ಹಿಡಿದು
ತೋರದಡಗದ ಘನವು ತೋರಿದುದದೆಂತೊ
ತೋರಿಬರುವ ವಿಷಯ ರೂಪ ಜಗವಾಗಲಿ
ತೋರಿಬರುವ ಪರಮಾರ್ಥವಾಗಲಿ ಸತ್ಯವೆ
ಅಲ್ಲಲ್ಲ ಕೇವಲ ಚಿನ್ಮಯ ಒಂದೆ ಸತ್ಯ
ಸರ್ವಸಮರಸವಾಗದ ತನ್ನಂ ಬಿಟ್ಟು ಅನ್ಯವಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ . ವಚನದವರೆಗೆ 564 ವಚನಗಳಿವೆ .

ಸತ್ಯವನ್ನು ಲೋಕೋಪಯೋಗಿ ದೃಷ್ಟಿಯಿಂದ ಹೇಳುವವರೇ ಆಪ್ತರು. ಲೋಕೋದ್ಧಾರವೆಂದರೇನು? ಅದು ಯಾವುದರಿಂದ ಆಗುತ್ತದೆ? ಎಂಬುದನ್ನು ಸ್ಪಷ್ಟವಾಗಿ ತಿಳಿದು ಸ್ವಾರ್ಥದ ಲವಲೇಶವೂ ಇಲ್ಲದೆ ಉಸಿರಾಟದಷ್ಟೇ ಸಹಜವಾಗಿ ಆ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಡಬ್ಬೇರುಮಡುವಿನ ಪರಮಪೂಜ್ಯ ಶ್ರೀ ವಿದ್ಯಾನಂದ ಶರಣರು.

ಶರಣರ ಮಾತೆಲ್ಲಾ ಅಮೃತವಾಯಿತು. ಪೂಜ್ಯರ ವ್ಯಕ್ತಿತ್ವವನ್ನು ವರ್ಣಿಸುವುದು ಕಷ್ಟವೇ. ಅವರನ್ನು ಕಣ್ಣಾರೆ ಕಂಡ, ಅವರೊಡನಾಡಿದ ಶಿಷ್ಯವರ್ಗ, ಅವರ ಪ್ರವಚನಗಳನ್ನು ಕೇಳಿದವರಿಗೆ ಅವರ ಬಗ್ಗೆ ಹೇಳಬೇಕಾಗಿಲ್ಲ . ಯಾರು ಅವರನ್ನು ನೋಡಿಲ್ಲವೋ, ಕೇಳಿಲ್ಲವೋ ಅಂಥವರನ್ನು ಇಂಥ ಒಬ್ಬ ಶರಣರಿದ್ದರು ಎಂದು ನಂಬಿಸುವುದು ಕಷ್ಟದ ಕೆಲಸ ಅಂತಹ ವ್ಯಕ್ತಿತ್ವ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದಶರಣರದು.

ಮಗುವಿನಂಥ ನಿಷ್ಕಲ್ಮಷ ಹೃದಯ , ನಿರ್ಮಲ ನಗೆ, ವಾತ್ಸಲ್ಯಪೂರ್ಣ ನೋಟ. ಸದಾ ಶರಣರ ಗುರುಗಳಾದ ಸದ್ಗುರು ನಾಗಭೂಷಣರ ಸ್ಮರಣೆ, ಒಂದೇ ಮಾತಿನಲ್ಲಿ ಹೇಳುವುದಾದರೆ ಕಣ್ಣಿಗೆ ಬಿದ್ದ ಅರುಹೃದಯಿಗೆ ಸ್ವರೂಪ ಜ್ಞಾನ ಮಾಡಿಸುವ ಛಲವಂತ ಶರಣರವರು.

ಅವರೇ ಹೇಳಿದಂತೆ 4ನೇ ತರಗತಿಯವರೆಗೆ ಅಯ್ಯನವರ ಶಾಲೆಯಲ್ಲಿ ಅಭ್ಯಾಸ. ತಮ್ಮ 23ನೇಯ ವಯಸ್ಸಿನವರೆಗೆ ಈ ಲೋಕದವರು ಆಚರಿಸುವ ಹಲವಾರು ಆಚಾರಗಳಲ್ಲಿದ್ದೆವೆಂದು ಆಗಾಗ ಹೇಳಿಕೊಳ್ಳುತ್ತಿದ್ದರು.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮುಚಳಾಂಬದ **ಸದ್ಗುರು ಶ್ರೀ ನಾಗಭೂಷಣ ಶಿವಯೋಗಿಗಳ** ದರ್ಶನದ ನಂತರ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಪೂರ್ವಾಶ್ರಯದ ಡಬ್ಬೇರುಮಡುವಿನ ಆದನಗೌಡರು **ಶ್ರೀ ವಿದ್ಯಾನಂದ ಶರಣ**ರಾದರು. ಅಯ್ಯನವರ ಶಾಲೆಯಲ್ಲಿ ಕೇವಲ ಕನ್ನಡ ಅಭ್ಯಾಸ ಮಾಡಿದ್ದ ಆದನಗೌಡರು ಸದ್ಗುರು ನಾಗಭೂಷಣರ ಗರಡಿಯಲ್ಲಿ ಸಂಸ್ಕೃತ ಹಾಗೂ ಹಿಂದಿ ಅಭ್ಯಾಸ ಮಾಡಿ ಭಗವದ್ಗೀತೆಯನ್ನು ಸರಳ ಹಾಗೂ ಸುಲಲಿತವಾಗಿ ಪ್ರವಚನ ಮಾಡ ಹತ್ತಿದರು. ಸಕಲ ಶಿವಶರಣರ ವಚನಗಳು ಅವರಿಗೆ ಅತ್ಯಂತ ಪ್ರಿಯವಾದವು. ಕಬ್ಬಿಣದ ಕಡಲೆಯಂತಿರುವ ಅಲ್ಲಮ ಪ್ರಭುಗಳ ವಚನಗಳನ್ನು ನೋಡಿ ಅತ್ಯಂತ ಆನಂದಿತರಾದರು. ಅವುಗಳ ಒಳಗುಟ್ಟನ್ನು ತಮ್ಮ ಪ್ರವಚನಗಳ ಮೂಲಕ ಹೇಳಿ ಶಿಷ್ಯರ ಸ್ವರೂಪ ಜ್ಞಾನಕ್ಕೆ ದಾರಿಮಾಡಿಕೊಟ್ಟರು. ಹಗಲು ದಣಿವರಿಯದೆ ಪ್ರವಚನ ಮಾಡಿದರೆ ರಾತ್ರಿ ಏಕಾಂತದಲ್ಲಿ ವಚನಗಳಿಗೆ ವ್ಯಾಖ್ಯಾನ ಬರೆಯುತ್ತಿದ್ದರು. ಪುಸ್ತಕ ಓದಿ ಉದಾಹರಿಸುವ ಪಂಡಿತೋತ್ತಮನಿಗೆ ತನ್ನ (ದೇಹದ) ಪುಸ್ತಕದ ಪರಿಚಯ ಸ್ವರೂಪ ಜ್ಞಾನ ಕರುಣಿಸುತ್ತಿದ್ದರು.

ಸಕಲ ಶರಣರ ವಚನಗಳೂ ಅವರ ನಾಲಿಗೆಯ ತುದಿಯಲ್ಲಿದ್ದವು. ಪ್ರವಚನಗಳನ್ನು ಸಿದ್ಧಮಾಡಿಕೊಳ್ಳುತ್ತಿರಲಿಲ್ಲ. ಒಮ್ಮೆ ಹೇಳಿದ ವಚನದ ತಿರುಳು ಮತ್ತೊಮ್ಮೆ ಅನೇಕ ಕವಲುಗಳನ್ನು ಒಡೆದು ಒಂದೇ ಅರ್ಥದಲ್ಲಿ ಲೀನವಾಗಿ ಮೈಮನಗಳನ್ನು ಅರಳಿಸಿ ತನ್ನನ್ನು ನೋಡಿಕೊಳ್ಳುವಂತೆ ಮಾಡುವ ಮೋಡಿ ಸದ್ಗುರುಗಳಿಗೆ ಕರಗತವಾಗಿತ್ತು. ಅವರ ಪ್ರವಚನ ಕಲಿತ ವಿದ್ಯೆಯ ಪ್ರದರ್ಶನವಾಗಿರದೆ ಸತ್ಯವೇ ತಾನಾಗಿ ತಾನೇ ಸತ್ಯವಾಗಿ ತಾಯಿ ರೂಪದಲ್ಲಿ ತುತ್ತು ಮಾಡಿ ಉಣಬಡಿಸಿದಂತಿರುತ್ತಿತ್ತು. ತಾವೂ ಉಂಡು ಶಿಷ್ಯರಿಗೂ ಉಣ್ಣಿಸಿ ಸತ್ಯದ ಡೇಗು ಡೇಗುತ್ತಿದ್ದರು.

ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಅವನಿಂದ ಲೋಕಕ್ಕೆ ಉಪಯೋಗವಾಗುತ್ತದೆ. ಮಹದಾನಂದ ಹೊಂದಿ ಸ್ವಸುಖ ಪಡೆಯುತ್ತಾನೆ ಎಂಬ ಕಳಕಳಿ ಅವರದಾಗಿತ್ತು. ಹಗಲಿರುಳೆನ್ನದೆ ತಮ್ಮ ಅರವತ್ತು ವಸಂತಗಳನ್ನು ಇದಕ್ಕಾಗಿ ಮೀಸಲಿಟ್ಟರು.

ಕುಳಿತಲ್ಲಿ, ನಿಂದಲ್ಲಿ, ಮಲಗಿದಲ್ಲಿ ಅವರ ಧ್ಯಾನ ಶರಣರ ಕುರಿತೇ ಆಗಿರುತ್ತಿತ್ತು. ಅರುಹೃದಯ ಸಿಕ್ಕ ಕೂಡಲೇ ಅವನನ್ನು ಬಿಗಿದಪ್ಪಿ ತಮ್ಮವನನ್ನಾಗಿ ತಮ್ಮ ಮಗನನ್ನಾಗಿ ಮಾಡಿಕೊಂಡು ಆತನೊಳಗಿದ್ದ ಅರುವನ್ನು ಆತನಿಗೇ ಪರಿಚಯಿಸುತ್ತಾ ಆತನ ಮರುವನ್ನು ಆತನಿಂದಲೇ ನಷ್ಟಮಾಡಿಸಿ ಸ್ವರೂಪ ಜ್ಞಾನಿಯನ್ನಾಗಿಸುವ ಸುಳುಹು ನೀಡುತ್ತಿದ್ದರು.

ಹೀಗೆ ಮಾಡುವಾಗ ಅವರ ಜಾತಿ-ಮತ ಪಂಥ ಅರ್ಥವ್ಯವಸ್ಥೆ, ಅಧಿಕಾರ, ಇದಾವುದನ್ನು ಗಮನಿಸದೆ ಅರುಹೃದಯವನ್ನು ಮಾತ್ರ ನೋಡುತ್ತಿದ್ದರು. ಅವನ ಭೇಟಿಗಾಗಿ ಹಗಲಿರುಳು ಹಂಬಲಿಸುತ್ತಿದ್ದರು. ದೇಹದ ಅಭಿಮಾನ ಅಹಂಕಾರ ಬಿಡುವವರಿಗೆ ಸುಲಲಿತವಾಗಿ ಪರೀಕ್ಷೆಗಳು ಸದಾ ನಡೆಯುತ್ತಿದ್ದವು.

ಪಾದದಿಂದ ಹಿಡಿದು ನೆತ್ತಿಯವರೆಗಿನ ಅಭಿಮಾನ ಬಿಟ್ಟಾಗಲೇ ಆತ ಸದ್ಗುರುಗಳಿಂದ ಪೂಜಿತನಾಗುತ್ತಿದ್ದ ಪೂಜಿಸಲ್ಪಡುತ್ತಿದ್ದ. ಗುರುವಾಗುತ್ತಿದ್ದ. ಗುರುಮುಟ್ಟಿ ಗುರುವಾಗುವ ಪರಂಪರೆ ಶರಣ ಪರಂಪರೆಯಲ್ಲಿ ಮಾತ್ರ ಕೇಳುತ್ತೇವೆ. ಆದರೆ ಸದ್ಗುರು ವಿದ್ಯಾನಂದ ಶರಣರು ಆರು ದಶಕಗಳವರೆಗೆ ಇದನ್ನು ಸದ್ದುಗದ್ದಲವಿಲ್ಲದೆ ಏಕಾಂಗಿಯಾಗಿ ನಡೆಸಿಕೊಂಡು ಬಂದರು. ಜ್ಞಾನ ಪಡೆದು ತಮ್ಮ ಕಾಯಕ ಮಾಡುತ್ತಾ ಸ್ವಸುಖದಲ್ಲಿ ಲೀನವಾದ ಸದ್ಗುರು ವಿದ್ಯಾನಂದ ಶರಣರ ಶಿಷ್ಯಂದಿರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ಸದ್ಗುರು ವಿದ್ಯಾನಂದರ ಕಾಯಕದಲ್ಲಿ ಲೀನವಾದರೆ ಕಲ್ಯಾಣ ರಾಜ್ಯ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

ಮಹಾತ್ಮಾ ಬಸವಣ್ಣ ಇಷ್ಟ ಲಿಂಗ ಕೊಟ್ಟು ಉಪಕಾರ ಮಾಡಿದನೆಂದು ಒಂದು ವರ್ಗ ಅವರನ್ನು ಸ್ಮರಿಸುತ್ತದೆ. ಮತ್ತೊಂದು ವರ್ಗ ರೇಣುಕರು ಇಷ್ಟಲಿಂಗ ಕೊಟ್ಟರೆಂದು ಪ್ರತಿಪಾದಿಸುತ್ತದೆ. ಹೀಗೆ ಅನ್ನುವ ಈ ಎರಡು ವರ್ಗಗಳು ಉಣ್ಣೆಯಂತೆ ಕ್ಷೀರದ ರುಚಿಯನ್ನು ಸವಿಯಲಿಲ್ಲವೆಂದು ರೇಣುಕ ಹಾಗೂ ಶರಣರ ಅಮೃತವನ್ನು ಸವಿದ ಅನುಭಾವಿಗಳಿಗೆ ಅನ್ನಿಸದೇ ಇರದು. ಶರಣರ ವಚನಗಳಲ್ಲಿ ರೇಣುಕರ ಅನುಭಾವದಲ್ಲಿ ಕುರುಹನ್ನೆ ಕಂಡರು. ಸದಾ ಕತ್ತಲನ್ನೆ ಕಂಡವರಿಗೆ ಬೆಳಕಿನ ರುಚಿ ಹಿಡಿಸುವುದಿಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ. ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ. ಗುರುಗಳಾದರೂ ಅಷ್ಟೆ, ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ . ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ತನ್ನೊಳಗಿರುವ ಒಡೆಯನನ್ನು ತೋರಿಸಿ ಅವನೇ ತಾನಾಗುವ ಪ್ರಯತ್ನವನ್ನು ಶರಣರು ಹನ್ನೆರಡನೆಯ ಶತಮಾನದಲ್ಲಿ ಯಶಸ್ವಿಯಾಗಿ ಪೂರೈಸಿದ್ದಾರೆ.

ಅದೇ ಪ್ರಯತ್ನವನ್ನು ಪರಮ ಪೂಜ್ಯ ಸದ್ಗುರು ಡಬ್ಬೇರುಮಡುವಿನ ಶ್ರೀ ವಿದ್ಯಾನಂದ

ಶರಣರು ಮನೆ ಮನೆಗೆ ತೆರಳಿ ಶ್ರೀಸಾಮಾನ್ಯನನ್ನು ಸ್ವರೂಪ ಜ್ಞಾನಿಗಳನ್ನಾಗಿ ಪರಿವರ್ತಿಸಲು ಏಕಾಂಗಿಯಾಗಿ ಯತ್ನಿಸಿದರು. ಹೆದ್ದೊರೆನಾಡು ಕಂಡ ಅಪೂರ್ವ ಸಂಚಾರಿ ಸಂತರಾದ ಪೂಜ್ಯ ಶ್ರೀ ವಿದ್ಯಾನಂದ ಶರಣರು ನಾಡಿನಾದ್ಯಂತ ಆಧ್ಯಾತ್ಮದ ಚಿಂತನೆಯ ವಾತಾವರಣವನ್ನು ಮೂಡಿಸಿದರು.

ಉತ್ತರ ಕರ್ನಾಟಕದ ರಾಯಚೂರು, ಕಲಬುರ್ಗಿ, ಬೀದರ್, ಬಾಗಲಕೋಟೆ, ಬಿಜಾಪುರ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಾದ್ಯಂತ ಸತತ ಅರವತ್ತು ವರ್ಷಗಳವರೆಗೆ ಹಗಲಿರುಳೆನ್ನದೆ ಸಂಚರಿಸಿ ಸಾವಿರಾರು ಸಂಖ್ಯೆಯ ಜಿಜ್ಞಾಸುಗಳಲ್ಲಿ ಆಧ್ಯಾತ್ಮದ ಆಸಕ್ತಿ ಹುಟ್ಟಿಸಿದರು.

ಈ ಜ್ಞಾನ ಮಹಾಯಜ್ಞ ಅವರೊಂದಿಗೆ ನಂದಲಿಲ್ಲ. ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನವರು ಕ್ರಿಯಾಶೀಲರಾದಂತೆ ಬೆನಕನ ಹಳ್ಳಿಯ ಸದ್ಗುರು ನಾಗಭೂಷಣ ಶಿವಯೋಗಿ ಮಹಾಬೋಧಾಲಯದಲ್ಲಿ ಪೂಜ್ಯ ವಿದ್ಯಾನಂದ ಶರಣರ ಪ್ರೀತಿಯ ಕಂದ ಮಹಾಜ್ಞಾನಿ ದೇವಾನಂದರಾಗಿ ರೂಪುಗೊಂಡಿರುವರು.

ಸಾಧನೆಯ ಮಾರ್ಗದಲ್ಲಿರುವವರಿಗೆ ಯಾದಗಿರಿ ಜಿಲ್ಲೆಯ ಹುಣಶಿಗಿ ತಾಲೂಕಿನ ಬೆನಕನ ಹಳ್ಳಿಯ ಮಹಾ ಬೋಧಾಲಯ ಕೈ ಮಾಡಿ ಕರೆಯುತ್ತಲಿದೆ.

ಸದ್ಗುರು ಶ್ರೀ ವಿದ್ಯಾನಂದಶರಣರು ಜೂನ್ 1-2006 ರಂದು ಅಸ್ವಸ್ಥರಾದರು. ದೇಹದ ಬಳಲಿಕೆಯ ಮಧ್ಯೆಯೇ ಪ್ರವಚನ ಸಾಗಿತ್ತು. ಆನಂದದ ಮರೆಯಲ್ಲಿ ದೇಹ ಮತ್ತು ಪ್ರಾಣದ ಚಿನ್ನಾಟ ನಡೆದೇ ಇತ್ತು. 23 ದಿನಗಳ ಚಿಕಿತ್ಸಾ ಹಂತದಲ್ಲಿ ವೈದ್ಯರಿಗೆ ಒಮ್ಮೆಯೂ ದೇಹಕ್ಕಾದ ನೋವಿನ ಸಂಗತಿಯನ್ನು ವ್ಯಕ್ತಪಡಿಸಲಿಲ್ಲ.

ಗುರುಗಳು ಮುಂದಿನ ಚಿಕಿತ್ಸೆಗೆ ಒಪ್ಪಿಗೆ ಕೊಡಲಿಲ್ಲ. ಈ ಶರೀರದ ಕತೆ ಮುಗಿಯಿತು. ಬೆಳಿಗ್ಗೆ ಊರಿಗೆ ಹೊರಡೋಣ ಎಂದರು. ಅವರ ದೇಹದ ನರಳಾಟದಿಂದ ನನ್ನ ಹಾಗೂ ದೇವಾನಂದ ಶರಣರ ಮುಖ ಕಂದಿತು. ಇದನ್ನು ಗಮನಿಸಿದ ಗುರುಗಳು ನಮ್ಮಿಬ್ಬರನ್ನು ಹತ್ತಿರ ಕೂಡಿಸಿಕೊಂಡು ಇಡೀ ರಾತ್ರಿ ಪ್ರವಚನ ಮಾಡಿದರು, ಮಹಾಜ್ಞಾನ ಕಾಯ ಮತ್ತು ಪ್ರಾಣದ ಚಿನ್ನಾಟದ ದರ್ಶನ ಮಾಡಿಸಿದರು.

ಬೆನಕನಹಳ್ಳಿಯಲ್ಲಿ ದೇಹ ಬಿಡುವುದಾಗಿ ಹೇಳಿ ಕರೆದುಕೊಂಡು ಹೋಗಲು ಸೂಚಿಸಿದರು. ದಿನಾಂಕ 23-6-2006 ರಂದು ಬೆನಕನ ಹಳ್ಳಿಗೆ ಹೋದೆವು. ಕೊನೆಗೆ ಮೂರು ದಿನಗಳಲ್ಲಿ ಸಂಜ್ಞೆಯ ಮೂಲಕ ಹೇಳಿ ದಿನಾಂಕ 2-7-2006 ಮಧ್ಯಾಹ್ನ 2.20 ಗಂಟೆಗೆ ದೇಹಬಿಟ್ಟರು.

ಅವರು ಬರೆದ ಶರಣ ಸಾಹಿತ್ಯದಲ್ಲಿ 'ನಾನು ನನ್ನ ಕಂಡ ಕಣ್ಣು', 'ನಿಃಶಬ್ದ ಕೃಪೆ' ಅವರಿರುವಾಗಲೇ ಪ್ರಕಟವಾಗಿದೆ. ಅವರು ಇರುವವರೆಗೂ ತಮ್ಮ ಸಾಹಿತ್ಯ ಪ್ರಕಟಿಸಲು ಮುಂದೆ ಬಂದವರಿಗೆ ಇದನ್ನು ತಮ್ಮ ಹೃದಯದಲ್ಲಿ ಪ್ರಕಟಿಸಿಕೊಳ್ಳಿ ಪ್ರಕಟಣೆ ಬೇಡ ಎಂದು ಒತ್ತಿ ಹೇಳುತ್ತಿದ್ದರು. ನನ್ನ ಒತ್ತಾಯದ ಮೇರೆಗೆ ಪ್ರಕಟಿಸಲು ಅನುಮತಿ ಕೊಟ್ಟರು. 'ಗಗನ ಸಿದ್ಧಾಂತ ' ' ಗುರುಕನ್ಯ, ' ಡಿ.ಟಿ.ಪಿ.ಮಾಡಿ ತೋರಿಸಿದಾಗ ಅತ್ಯಂತ ಆನಂದ ಪಟ್ಟರು. ಇಷ್ಟು ಸಾಕು. ಬೇಕಾದವರು ಇದರ ಫೋಟೊ ಪ್ರತಿ ಮಾಡಿಕೊಳ್ಳಲಿ ಎಂದು ಹೇಳಿದರು.

ಗಗನ ಸಿದ್ಧಾಂತ 136 ವಚನಗಳ ತಾತ್ಪರ್ಯ ಮೊದಲ ಭಾಗ 6-7-2006 ರಂದು

ಮುದ್ರಣಗೊಂಡು ಪ್ರಕಾಶಿಸಲ್ಪಟ್ಟಿತು. ಪ್ರತಿಗಳು ಮುಗಿದು ಹೋದ ನಿಮಿತ್ತ ಪುನಃ ಸಮಗ್ರವಾಗಿ ಗಗನ ಸಿದ್ಧಾಂತವನ್ನು ಪ್ರಕಾಶಿಸಲ್ಪಟ್ಟಿತು. ಈ ಗ್ರಂಥ ಭೂಮಿಯೊಳಗಿದ್ದ ನಿಧಿಯಂತೆ ಅಂಜನ ಹಾಕಿ ಹುಡುಕಬೇಕು. ಸಾಧಕರಿಗೆ ಮಾರ್ಗ ಸುಲಭವಾಗಲಿ ಎಂದು ಹೆಚ್ಚಿನ ವಿವರಣೆಯೊಂದಿಗೆ ಶ್ರೀಸಾಮಾನ್ಯರ ಮನ ಮುಟ್ಟುವಂತೆ ಸದ್ಗುರುಗಳು ವಿವರಿಸಿದ್ದಾರೆ.

ಪೂಜ್ಯ ವಿದ್ಯಾನಂದ ಶರಣರ ಅಪ್ರಕಟಿತ ಸಾಹಿತ್ಯ ಐದು ಸಾವಿರ ಪುಟಗಳನ್ನು ಮೀರಲಿದೆ. ಪತ್ರಿಕೆ ಪ್ರಸಾರದೊಂದಿಗೆ ಅರಿವಿನ ಪ್ರಸಾರ ಮಾಡಲು ಪಣ ತೊಟ್ಟಿರುವ ರಾಯಚೂರು (ಸ್ಪಿಲ್)ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಸದ್ಗುರುಗಳ ಇಚ್ಚೆಯಂತೆ ಶ್ರೀ ಬಸವ ಸೇವಾ ಪ್ರತಿಷ್ಠಾನ ಪ್ರಕಾಶನದ ಮೂಲಕ ಸಕಲರೂ ಸ್ವರೂಪ ಜ್ಞಾನಿಗಳಾಗಬೇಕೆನ್ನುವ ಆಶಯದೊಂದಿಗೆ **'ಸ್ವರೂಪ ಸಿದ್ಧಿ '** ಪ್ರಕಾಶಿಸಿದೆ.

ಬಸವರಾಜ ಸ್ವಾಮಿ
ಸಂಪಾದಕ, ರಾಯಚೂರು
ಮೇ 25, 2023

ಒಳಗಣ ಹೂರಣ

ವಿಷಯ	ವಚನಸಂಖ್ಯೆ	ಒಟ್ಟುವಚನಗಳಸಂಖ್ಯೆ
ಭರಿತಭಾವ	1–180	180
ಭೋದರತ್ನ	181–282	101
ಜ್ಞಾನಾಮೃತ	283–377	94
ನಿರ್ವಾಣ	378–412	34
ಸಮಸ್ವರೂಪ	413–483	70
ಸರ್ವಮಂಗಳ	484–525	41
ಪರಮಸತ್ಯ	526–546	20
ಘನಗಂಭೀರ	547–564	17

ಭರಿತ ಭಾವ

1

ಸರ್ವರಿಂಗೆ ಅದ್ವೈತ ವಾಸನೆ ಅದೆಂತು ಸಾಧ್ಯ
ಗುರು ಈಶ್ವರರ ಕೃಪೆಯುಳ್ಳವರಿಂಗಿದು ಸಾಧ್ಯ
ಸಂಸಾರ ಪಾಶದಿಂದ ಪಾರಾಗಬೇಕೆಂಬುವದಾದರೂ ಎಲ್ಲರಿಗೆಲ್ಲಿಯದೊ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

2

ಪೂರ್ಣವಾದುದು ಅವ್ಯಯವಾಗಿರುವ ಚಿನ್ನಿಧಿ ಅದು
ತನಗಿಂತ ಬೇರಾಗದಿರುವುದನ್ನು ತಾನು ಪೂಜಿಸುವದೆಂತು
ಸ್ತುತಿಸುವದೆಂತು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

3

ತಾನಾರೆಂದರಿವುಡೆ ತಾನೆ ಏಕಮೇವಾದ್ವಿತೀಯ ಬೊಮ್ಮ
ತನಗಿಂತನ್ಯ ದೇವನೆಲ್ಲಿ ತಾನೆ ಸಚ್ಚಿದಾನಂದ ಘನನಿರುವಲ್ಲಿ
ತಾನಾರಿಗೆ ನಮಿಸುವದು
ತನ್ನೊಳ್ ನಾಮ ರೂಪ ಪ್ರಪಂಚವೆಂಬುದು
ಮರೀಚಿ ಜಲದಂತಿಪ್ಪುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

4

ಅಖಂಡೈಕರಸದೊಳ್ ಕಾಣಿಸಿಕೊಳ್ಳುವುದಾವುದ ಕಾಣುವದಾವುದು
ಕ್ಷರವಾವುದು ಅಕ್ಷರವಾವುದು ಹೌದಾವುದು ಅಲ್ಲಾವುದು
ನಿಸ್ಸೀಮದೊಳ್ ಸೀಮೆಗೆಡೆಯುಂಟೆ
ನಿರಂಜನ ಪ್ರಭು ನಾಗೇಶ್ವರಾ ॥ 4 ॥

5

ತಾನಾರೆಂದರಿವುಡೆ ತಾನೆ ಚಿನ್ಮಯ ಚಿನ್ನಿಧಿ ಶೃತಿಗಗೋಚರ ತಾನೆ
ತನ್ನೊಳ್ ಭೇದವೂ ಇಲ್ಲ ಅಭೇದವೂ ಇಲ್ಲ
ಅಸ್ತಿ ಆವುದೆಂದು ಹೇಳುವುದು ನಾಸ್ತಿ ಆವುದೆಂದು ಹೇಳುವುದು

ಅಕಥನೀಯದೊಳ್ ಕಥನ ಮಾಡುವುದು
ಇದೊಂದು ವಿಸ್ಮಯ ನೋಡಾ ನಿರಂಜನ ಪ್ರಭು ನಾಗೇಶ್ವರಾ ॥ 5 ॥

6

ಸಕಲವೂ ಆತ್ಮಮಯ ಅಲ್ಲಿ ಭೇದವೂ ಇಲ್ಲ ಅಭೇದವೂ ಇಲ್ಲ
ಶಬ್ದ ಸೀಮೆಗಿಂಬಿಲ್ಲದುದರೋಳ್
ದೇಶ ಕಾಲ ವಸ್ತುಗಳೆಂದುಸುರುವದಾದರೂ ಹೇಗೆ
ನಿರಂಜನ ಪ್ರಭುವೆಂಬುದು ಅಕಥನೀಯ ಘನ
ಅಲ್ಲಿ ಅಸ್ತಿ-ನಾಸ್ತಿ ಎಂದು ಹೇಳುವುದು ಇದೊಂದು ವಿಸ್ಮಯ ॥ 6 ॥

7

ನಿಃಶಬ್ದ ಬ್ರಹ್ಮದ ಘನವ ತಿಳಿಯಲು ಮೊದಲು ಶಬ್ಧ ಬ್ರಹ್ಮನಾಗು
ಅಹಂ ಬ್ರಹ್ಮಾಸ್ಮಿ ಎಂಬುದ ಅದೃಢವಾಗದಿರಲಿ
ದೃಢವಾಗುವುಡೆ ಆಗ ನಿನ್ನೊಳ ನಿನ್ನಿಂದ ನೀನೆ ವಿಚಾರಿಸು
ದೃಢಾದೃಢವೆಂಬುದು ತನ್ನೊಳಗು
ತಾನೆಂಬುದು ಸ್ವಯಮೇವ ಸ್ವಮಹಿಮ ತಾನೆ
ನಿಃಶಬ್ದ ಬ್ರಹ್ಮವೆಂಬುದು ತನಗದು ಸ್ವತಃ ಸಿದ್ಧವು
ನಿರಂಜನ ಪ್ರಭು ನಾಗೇಶ್ವರಾ ॥ 7 ॥

8

ಶಬ್ದ ಸೀಮೆಗೆ ನಿಲುಕದ ಘನದೋಳ್ ಶಬ್ದ ಸೀಮೆಯ ಕಲ್ಪಿಸಿ ಸೀಮಿತರಾದರು
ತಮ್ಮ ಘನವ ತಾವರಿಯರು, ಗುರು ಹಿರಿಯರ ನಿಲುವ
ಇವರೇನು ಬಲ್ಲರು ಅರಿತವರಂತೆ ನಟಿಸುವರು.
ತಮ್ಮರವು ಇರವು ಮಾಯಿಕ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 8 ॥

9

ಸಾರ ಸುಖವೆಂಬುದು ತನಗಿಂತ ಭಿನ್ನವೊ ಅಭಿನ್ನವೊ
ಇದನಾರಯ್ಯ ಬಲ್ಲವರು
ಭಿನ್ನಾಭಿನ್ನವೆಂಬುದು ಮರವಿನೊಳಗು
ಅರಿಯಲು ತಾನು ಬೋಧವೆ ಅಬೋಧವೆ
ಬೋಧಾಬೋಧ ಮಿಶ್ರವೆ ಅಲ್ಲ
ತಾನೆ ಸಕಲ ತತ್ವಂಗಳ ಸಾರ ಸುಖಾಮೃತ ನೋಡಾ

ನಿರಂಜನ ಪ್ರಭು ನಾಗೇಶ್ವರಾ ॥ 9 ॥

10

ತಾನಾರೆಂದರಿಯಲು
ಸ್ಥಾವರ ಜಂಗಮಕ್ಕಾಧಾರ ತಾನಾದುದರಿಂದ
ಸರ್ವಾತ್ಮ ತಾನೆ ಅಧಿಷ್ಠಾನನಾಗಿರುವದರಿಂದ
ನಿಷ್ಕಲ ಗಗನದಂತಿರುವ ಅನಾಮಯವಾಗಿರುವ ಏಕರಸ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 10 ॥

11

ತನ್ನ ತಾನರಿಯಲು ತಾನೊಮ್ಮೆ ಇದ್ದಂತವನಾಗಿ
ಇಲ್ಲದವನೆಂಬ ಸಂಶಯಕ್ಕಿಂಬುಂಟೆ
ತಾನು ನಿರಂತರ ಅಬಾಧಿತನಾಗಿ ಪ್ರಕಾಶಿಸುವದರಿಂದ
ಸರ್ವಾತ್ಮ ತಾನೆ ಅಚಿಂತ್ಯ ಘನನಾಗಿರುವದರಿಂದ
ನಿಷ್ಕಲ ಗಗನದಂತಿರುವ
ಅನಾಮಯದ ಏಕರಸ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 11 ॥

12

ನಾನೆಂಬುದು ಚಿನ್ಮಯ
ಇದು ತಾನೆ ತಾನಾದ ಘನ ಅವ್ಯಯ
ತನ್ನೊಳ್ ಆದಿ ಮಧ್ಯಾಂತವ ನರಸುವರೆ ತಾನು ನಿಸ್ಸೀಮ
ಅಲ್ಲಿ ಜ್ಞಾನಾಜ್ಞಾನಗಳಿಗಿಂಬುಂಟೆ
ತಾನು ಶುದ್ಧ ವಿಜ್ಞಾನ ವಿಗ್ರಹವಿರುವದರಿಂದ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 12 ॥

13

ಕೊನೆ ಮೊದಲಿಲ್ಲದ ಘನ ತಾನು
ತನಗೆ ಆದಿ ಅಂತ್ಯಗಳ ಕಲ್ಪಿಸಬಹುದೆ
ತಾನು ಚಿನ್ಮಯ ತನಗೆ ಮರವುಂಟೆ
ಮರವಿಲ್ಲವೆಂದಲ್ಲಿ ಅಜ್ಞಾನವಾವುದು ಜ್ಞಾನವಾವುದು
ಚಿನ್ನಿಧಿಯೊಳ್ ಸತ್ ಆವುದು ಅಸತ್ ಆವುದು

ಅಖಂಡವು ಖಂಡವಾಯಿತೆ
ತಾನು ಕೇವಲ ಜ್ಞಾನ ಘನನಿರುವದರಿಂದ ಸುಖದುಃಖಗಳೆಲ್ಲಿಹವು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 13 ||

14

ಗಗನದಂತಿರುವ ಜ್ಞಾನಾಮೃತನಾದ ನನ್ನೊಳ್ ತನುತ್ರಯಾದಿಗಳಿಗಿಂಬುಂಟೆ
ಅದ್ವಿತೀಯ ಘನಕ್ಕೆ ಶುಭವಾವದು ಅಶುಭವಾವುದು
ಸುಖ ಸ್ವರೂಪನಿಗೆ ಬರ ಹೋಗುವ ಸುಖದುಃಖಗಳುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 14 ||

15

ಒಡಲಿಲ್ಲದವಂಗೆ ಶುಭಾಶುಭವನ್ನು ಕೊಡುವ ಕರಣಾದಿಗಳು ತನಗೆ ಉಂಟೆ
ನಿರವಯನಿಗೆ ಶುಭಾಶುಭವನ್ನು ಕೊಡುವ ಕಾಯಕ ಕರ್ಮ ತನಗೆ ಉಂಟೆ
ನಿಃಶಬ್ದ ಘನಕ್ಕೆ ಶುಭಾಶುಭವನ್ನು ಕೊಡುವ ವಾಣಿ ಕರ್ಮ ತನಗೆ ಉಂಟೆ
ತಾನು ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

16

ಪುರುಷೋತ್ತಮನಾದ ನನ್ನೊಳ್ ಪುರ ಪ್ರಕೃತಿ ಉಂಟೆ
ಅವಿಭಾಗವು ವಿಭಾಗವಾಯಿತೆ ಇಲ್ಲದುದು ಇಲ್ಲವೇ ಇಲ್ಲ ವಾದುದರಿಂದ
ಮನ ವಾಣಿ ಕಾಯವೆಂಬುದು ಅತ್ಯಂತಾಭಾವವು
ಇದ್ದ ಜ್ಞಾನಾಮೃತವು ಅಂದು ಇಂದು ಎಂದೆಂದು
ಇದ್ದಕ್ಕಿದ್ದಂತಿರುವದರಿಂದ ದಿಟ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 16 ||

17

ಸತ್ಯಜ್ಞಾನಾನಂದವೆ ತಾನಾಗಿರುವಲ್ಲಿ
ತನಗಾವ ಮನ ತನಗಾವ ವಾಣಿ ತನಗಾವ ಕಾಯ
ಸರ್ವವ್ಯಾಪಿಯಾದ ಘನದೊಳ್ ಇಲ್ಲದ ಮನ ಇಲ್ಲದ ವಾಣಿ
ಇಲ್ಲದ ಕಾಯ ಕರ್ಮಂಗಳ ಕಂಡರೂ ಮೃಗ ಜಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 17 ||

18

ಮನದ ಹಗರಣವು ಬಹು ವಿಚಿತ್ರವು
ದ್ವೈತಾ ದ್ವೈತವೆಂದು ವಿಭಾಗಿಸಿದಿದುವೆ
ಪಂಚಭೂತ ಪಂಚ ತನ್ಮಾತ್ರೆ ಪಂಚಮುಖ ಪಂಚಾವಸ್ಥೆ
ಪಂಚ ಭೇದಂಗಳ ಕಲ್ಪಿಸಿದಿದುವೆ ವ್ಯಷ್ಠಿ-ಸಮಷ್ಠಿಯಾಗಿ ತೋರಿದಿದುವೆ
ಜೀವ ಶಿವರಾದುದಿದುವೆ ಸಪ್ತಭೂಮಿಕೆಗಳು ಆದುದಿದುವೆ
ನಿಜದರುವಿನಿಂದ ನೋಡಲು ಇದು ಇಲ್ಲವೇ ಇಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 18 ॥

19

ಮನದ ಪರಿ ವಿಪರೀತ ನೋಡಾ
ಕಲ್ಪಿತ ಅಕಲ್ಪಿತನೆಂದು ಕಲ್ಪಿಸಿದಿದುವೆ
ವ್ಯಕ್ತಾವ್ಯಕ್ತನೆಂದು ಕಲ್ಪಿಸಿದಿದುವೆ
ಅನಂತ ಅದ್ವಯ ಅಚಿಂತ್ಯನೆಂದು ಕಲ್ಪಿಸಿದಿದುವೆ
ನಿರ್ವಾಣ ನಿರ್ನಾಮವೆಂದು ಘೋಷಿಸಿ
ಕೊನೆಗೆ ಮೌನವ ಧರಿಸಿದಿದುವೆ
ನಿಜದರುವಿನಿಂದ ನೋಡಲು ಇದು
ಅಚಿಂತ್ಯಾಭಾವವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 19 ॥

20

ಮನದ ಮಾಟವು ನಾವು ಗುರು ಹಿರಿಯರೆಂದವರಿಗೆಲ್ಲ ದಂಗು ಬಡಿಸಿತ್ತು
ಇವರೆಂತು ತಾವಾರೆಂದರಿತವರು
ಮಾಯಿಕವೆ ನಿಜವಾಗಿ ನಿಜದ ನಿಲುವೆ ಸಟೆಯಾಗಿ
ಮಾಟದ ಮನವ ಕಂಡು ಹಿಗ್ಗುವರು
ಇವರಿಗೆಂತು ನಿಸ್ಸೀಮ ನಿಜ ಪದವು ಸಾಧ್ಯ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 20 ॥

21

ತಮ್ಮ ತಾವರಿತವರೆಂದು ಹಿರಿ ಹಿರಿ ಹಿಗ್ಗಿ ಹೇಳುವರು
ತಮ್ಮಸ್ವರೂಪವರಿಯಲು ತನಗಿಂತ ಭಿನ್ನವೊ ಅಭಿನ್ನವೊ
ಭಿನ್ನವೆಂದಲ್ಲಿ ಕುರುಹಿಂಗೊಳಗಾಯಿತ್ತು

ಅಭಿನ್ನವೆಂದಲ್ಲಿ ಏಕಮೇವಾದ್ವಿತೀಯ ಬ್ರಹ್ಮವೆಂಬ ಶೃತಿಗೆ ವಿರೋಧವಾಯಿತ್ತು
ತಾನು ತನಗಿಂತ ಭಿನ್ನನೂ ಅಲ್ಲ ಅಭಿನ್ನನೂ ಅಲ್ಲ
ಇದ್ದಂತಿರುವ ನಿರಂತರ ನಿಜಾತ್ಮ ಸ್ವಯಂ ಪ್ರಕಾಶನಾದ
ತನ್ನಂ ಅರಿತೆ ಅರಿಯೆನೆನ್ನಬಹುದೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 21 ॥

22

ತನ್ನ ತಾನರಿಯಲು ಅದಾವ ಸಾಧನ
ಅದಾವ ಧ್ಯಾನ ಅದಾವ ಬೋಧ ಅದಾವ ಸಮಾಧಿ
ಇವೆಲ್ಲವು ತನ್ನೊಳಗು
ಇವುಗಳಾವು ತನ್ನಂ ಸಿದ್ಧ ಮಾಡಲರಿಯವು
ತಾನೆ ಅಲುಪ್ತ ಪ್ರಕಾಶ ಅರಿಯದರವು
ಉದಯಾಸ್ತಗಳಿಲ್ಲದ ತಾನು ತನ್ನಂ ಅರಿತೆ ಅರಿಯೆನೆನ್ನಬಹುದೆ
ನಿರಂಜನ ಪ್ರಭು ನಾಗೇಶ್ವರಾ ॥ 22 ॥

23

ತಾನಾರೆಂದರಿತವರು ತನ್ನಂ ಅರಿತೆ ಅರಿಯೆನೆನ್ನಬಹುದೆ
ಅರಿತೆನೆಂಬುದು ಚಿದಹಂದ ಮಂಕು
ಅರಿಯೆನೆಂಬುದು ಮನದ ಮಂಕು
ಈ ಮಂಕು ಹೋಗದನ್ನಕ್ಕರ ತಮ್ಮಿರವು ಅರುವು
ತಮಗೆ ದೂರ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 23 ॥

24

ತಮ್ಮ ತಾವರಿತವರ ಇರವು ಹೇಳಿಹೆ ಕೇಳಿರೊ ಅಯ್ಯ
ತನ್ನ ಮರೆತು ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಯ ಸುದ್ದಿ ಹೇಳುವವರಲ್ಲ
ಒಂದನ್ನು ಕೆಡಿಸಿ ಮತ್ತೊಂದನ್ನು ಸಿದ್ಧ ಮಾಡುವವರಲ್ಲ
ಅವರು ಇದ್ದಕ್ಕಿದ್ದಂತಿರುವ ನಿರಂತರ ನಿರ್ವಿಕಾರ ನಿರಾಲಂಬ ಸಹಜ
ಸ್ವಮಹಿಮರು ಸ್ವಯಂ ಪ್ರಕಾಶರು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 24 ॥

25

ಸ್ವಮಹಿಮ್ನನೆ ನಿಜವಾಗಿ ನೀನು ಅಖಂಡೈಕರಸ

ಸಕಲದರಲ್ಲಿಯೂ ನೀನು ತುಂಬಿ ತುಳಕದಿರುವಿ
ನಿನಗಿದು ಗೊತ್ತಾಗದೆ
ನಿನ್ನ ಕಾಂತಿಗೆ ಕುಂದುಂಟೆ
ಅಲುಪ್ತ ಪ್ರಕಾಶಮಯ ನೀನಿರುವಲ್ಲಿ
ಉದಯ ಅಸ್ತಗಳ ನಿನಗೆ ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 25 ॥

26

ತುಂಬಿದುದು ತುಳಕದು ನೋಡಾ
ಅದು ಕೊನೆ ಮೊದಲಿಲ್ಲದ ಘನ
ಅದರ ಕಾಂತಿಗೆ ಕಂದಿಲ್ಲ ಕುಂದಿಲ್ಲ
ಇದು ಸಕಲಾತ್ಮ ಸ್ವರೂಪವಿರುವಲ್ಲಿ
ನಿನಗೆ ಹೇಗೆ ಗೊತ್ತಾಗದು
ನೀನು ಸದಾ ಪ್ರಕಾಶಿಸುತ್ತಿರುವಲ್ಲಿ
ನಿನಗಾವ ಬೆಳಕು ನಿನಗಾವ ಕತ್ತಲೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 26 ॥

27

ಸ್ವಯವರಿತ ಸಹಜನೆ ಸಕಲದರೊಳ್ ಭರಿತನೆ
ನೀನಿರದ ಸ್ಥಾನ ಉಂಟೆ
ಮರವರುವಿಗೆ ಮೀರಿದ ಘನ ನೀನು
ನಿನಗಿದು ಗೊತ್ತಾಗದೆ
ಇದ್ದಕ್ಕಿದ್ದಂತಿರುವ ಚಿನ್ಮಯ ಚಿದ್ಘನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 27 ॥

28

ಇದ್ದುದುದು ಇದ್ದಕ್ಕಿದ್ದಂತಿದ್ದುದು
ಅದು ಸರ್ವತ್ರ ಸರ್ವದಾ ಇದ್ದುದು
ಅದು ಇರದ ದೇಶವಿಲ್ಲ ಕಾಲವಿಲ್ಲ ವಸ್ತುವಿಲ್ಲ
ಅರಿವಡೆ ಚಿನ್ನಿಧಿ ತಾನೆ ತನ್ನೊಳ್ ಧ್ಯಾತೃ ಧ್ಯಾನ ಧ್ಯೇಯವೆಂಬ ತ್ರಿಪುಟಿಗಿಂಬಿಲ್ಲ
ತಾನೆ ಅಖಂಡೈಕರಸ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 28 ॥

29

ಇದ್ದುದು ತೋರದಡಗದ ನಿರ್ವಿಕಾರಿ
ಇದ್ದಂತಿರುವ ಚಿನ್ನಿಧಿ ನಿಸ್ಸೀಮ
ಅಲ್ಲಿ ದೇಶ ಕಾಲ ವಸ್ತುಗಳ ವಿಭಾಗಿಸಲು ಬಾರದ್ದರಿಂದ
ಚಿಂತನೆ ಚಿಂತಿಕವೆಂಬುಭಯ ಭಾವ ವಿರಹಿತ
ನಮ್ಮ ಪ್ರಭು ನಾಗೇಶ್ವರ ಲಿಂಗವು ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ . ॥ 29 ॥

30

ಚಿಂತಿಸು
ಸರ್ವತ್ರ ಸಮವಾಗಿರುವ ನಿರಂತರ ನಿರಾಳವ ಚಿಂತಿಸು
ನಿಜ ಘನವ ಚಿಂತಿಸು
ಅಲ್ಲಿ ದೃಶ್ಯ ದೃಕ್ಕೆಂಬ ವಿಭಾಗಕ್ಕಿಂಬಿಲ್ಲ
ಅದು ಇದ್ದಕ್ಕಿದ್ದಂತಿರುವ ಅಖಂಡವಿರುವಲ್ಲಿ
ಧ್ಯಾನಿ ಧ್ಯೇಯವೆಂದು ವಿಂಗಡಿಸಬಹುದೆ
ವಿಂಗಡಿಸದಿರುವುಡೆ ತಾನು ಸಹಿತ
ಸಕಲವು ಸಚ್ಚಿದಾನಂದ ಘನವೆಂಬುದು ದಿಟ ದಿಟ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 30 ॥

31

ಚಿಂತಿಸು ತನ್ನಾತ್ಮ ಸ್ವರೂಪವ
ಚಿಂತಿಸು ತಾನೆಂಬುದು ನಿಸ್ಸೀಮ
ಅಲ್ಲಿ ದಿಟವಾವುದು ಸಟೆ ಆವುದು
ಭೇದವೂ ಇಲ್ಲ ಅಭೇದವೂ ಇಲ್ಲ
ನಾನು ಧ್ಯಾನಿ ಧ್ಯೇಯ ಬೇರೆಂದು ವಿಭಾಗಿಸುವದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 31 ॥

32

ತಮ್ಮ ತಾವರಿಯರು ಹೇಳಿದರೂ ಕೇಳರು
ಶೃತಿಗಳ ತಾತ್ಪರ್ಯಗಳಾದರೂ ಅರಿಯರು ಇವರನೇನೆಂಬೆ
ತಮ್ಮ ಪ್ರಮಾದ ತಮಗದು ವಿಪರೀತವಾಗಿ ಭವವಾಗಿಹುದು
ಈ ಭವದ ವ್ಯಾಮೋಹವೆ ಭವ ಭವಾಂತರಕ್ಕೆ
ಕಾರಣವಾಯಿತ್ತು ನೋಡಾ ನಿರಂಜನ ಪ್ರಭು ನಾಗೇಶ್ವರಾ ॥ 32 ॥

33

ನಂಬಿರಿ
ಶೃತಿಗಳು ನಾನಾವಧದಿಂ ವಿವರಿಸುವ ಜ್ಞಾನಾಮೃತವ
ನಂಬಿರಿ
ನಂಬುವಡೆ ನಿಮಗಾಗ ಹುಟ್ಟುವದೂ ಇಲ್ಲ ಸಾವುದೂ ಇಲ್ಲ
ದೇಹವೆಂಬುದು ನಿಮಗದು ಇಲ್ಲದ್ದಾಗಿ
ಸಕಲವು ಬ್ರಹ್ಮಮಯವು ಎಂಬುದು ಸ್ವತಃ ಸಿದ್ಧ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 33 ॥

34

ನಂಬರು ನಚ್ಚರು ಬರಿದೆ ಶೃತಿಗಳ ಸಾರುವರು
ಸಾರಿದರೂ ಶೃತಿಗಳ
ಸಾರ ಸುಖಾಮೃತ ಸವಿದರೆ
ಸವಿದಲ್ಲಿ ಸಕಲವು ಸಚ್ಚಿತ್ಸುಖ
ಸುಖದಸುಖ ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 34 ॥

35

ನಂಬು ನಂಬಯ್ಯ
ನಂಬಿದಡೆ ಅಜಾತನ ನಂಬು ಅಯೋನಿಜನ ನಂಬು
ನಂಬಿದಡೆ ಸಕಲ ಬೋಧಂಗಳ ಸಾರ ಸುಖಾಮೃತ ಸವಿಯುವಿ
ಸವಿದಲ್ಲಿ ಶೃತಿಗಳ ಸಾರ ಸುಖದ ಸಾಮ್ರಾಟ ತಾನೆ ಕಾಣೆಭೋ
ತಾನೆ ಸುಖದ ಸುಖಿ ಸಚ್ಚಿತ್ಸುಖಿ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 35 ॥

36

ನಂಬಿರಯ್ಯ ಸರ್ವಂ ಖಲ್ವಿದಂ ಬ್ರಹ್ಮವೆಂಬ ಶೃತಿ ಮಾತೆಯ ನಂಬಿರಯ್ಯ
ನಂಬಿದಲ್ಲಿ ಸಂದೇಹವ ಬಾರದು ಬಾರದಿದ್ದಲ್ಲಿ ನಂಬಿದಾನಂದದ
ಘನವನೇನೆಂಬೆ
ಸಾಕೆನಿಸದ ಬೇಸರವಾಗದ ಘನಾನಂದವನೇನೆಂಬೆ
ಅಲ್ಲಿ ಹುಟ್ಟಿದುದು ಇಲ್ಲ ಸಾವುದೂ ಇಲ್ಲ
ಕುರುಹು ಎಂಬುದು ಎಂದೆಂದೂ ಇರಲಿಲ್ಲ

ಸಚ್ಚಿದ್ಘನವೆ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 36 ॥

37

ನಂಬು ನಂಬು ನಂಬೆಲೆ ಜೀವನೆ
ನಾನು ಹುಟ್ಟಿದುದು ಇಲ್ಲ ಸಾವುದೂ ಇಲ್ಲ
ನಾನು ಅಮರನೆಂದು ನಂಬು
ನಾನು ಸಹಿತ ಸಕಲವು ಸಚ್ಚಿದ್ಘನವೆಂದು ನಂಬು
ನಂಬುವಡೆ ಸಕಲವು ಸರ್ವಾತ್ಮವು ಎಂಬುದು
ನಿನಗದು ಯತಾರ್ಥವು
ಆಗ ಶೃತಿಯ ನಂಬಿದಂತೆ ತನ್ನ ತಾ ಅರಿತಂತೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 37 ॥

38

ನಂಬುವದದು ನಂಬು
ನಂಬಿದಡೆ ತಾನು ದೇಹವಲ್ಲ ತನ್ನದೂ ಅಲ್ಲ
ದೇಹಾದಿ ಧರ್ಮಂಗಳು ತನಗೆಲ್ಲಿ
ತಾನಭವ ತಾನೆ ಶೃತಿಗಳಿಗೆಲ್ಲ ಬೆಳಗುವ
ಸ್ವಪ್ರಕಾಶ ಸ್ವಮಹಿಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 38 ॥

39

ಶೃತಿ ಮಾತೆಯ ಪರಿ ವಿಪರೀತ ನೋಡಾ
ತನ್ನ ನೆನಹನ್ನಬರ ತನ್ನಂತೆ ಮಾಡಿತ್ತು ಇದನೇನೆಂಬೆ
ನಿರಂಜನ ಪ್ರಭುವೆ ತಾನು ಸತ್ ಅಲ್ಲ ಅಸತ್ ಅಲ್ಲ
ಚಿತ್ ಅಲ್ಲ ಅಚಿತ್ ಅಲ್ಲ
ವಿಭಾಗಕ್ಕೆಡೆಗೊಡದ ಘನ ಇದನೇನೆಂಬೆ ಏನಂಬೆ
ನಿರಂಜನ ಪ್ರಭು ನಾಗೇಶ್ವರಾ ॥ 39 ॥

40

ಶಿವ ನೀನು ಸರ್ವತ್ರ ಸದಾ ಬಾಹ್ಯಾಂತರದಲ್ಲಿ ವ್ಯಾಪಿಸಿರುವ
ಜ್ಞಾನ ಘನನಾಗಿರುವದರಿಂದ
ಶಿವ ನೀನು ಕೇವಲ ಜ್ಞಾನ ಸ್ವರೂಪ ಅರುವು

ನಿನಗದೇಕೆ ತಿಳಿಯದು
ತಾನಿದ್ದು ತನ್ನ ಕಳಕೊಂಡಿಹೆನೆಂಬ ಭ್ರಾಂತನಂತೆ ಅದೇಕೆ
ಅಲ್ಲಿ ಇಲ್ಲಿ ಎಂದು ಧಾವಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 40 ||

41

ನೀನು ಶಿವ ನಿರಂತರ ಒಳಹೊರಗೂ ವ್ಯಾಪಿಸಿರುವ ಸಚ್ಚಿದ್ಘನ
ನಿನಗಿಂತನ್ಯ ಉಂಟೆ ಬಾಹ್ಯದಲ್ಲಿ ನೀನೆ ಅಂತರದಲ್ಲಿ ನೀನೆ
ಎಲ್ಲೆಲ್ಲೂ ನೀನೆ ಬಾಹ್ಯಕ್ಕೂ ಬಾಹ್ಯ ನೀನೆ
ಅಂತರಕ್ಕೂ ಅಂತರ ನೀನೆ
ಬಾಹ್ಯಂತರವಾಗದೆ ಅಪಾರ ನೀನಾಗಿದ್ದು
ಭ್ರಾಂತಿ ಪಿಶಾಚಿಯಂತೆ ಅಲ್ಲಿ ಇಲ್ಲಿ ಅದೇಕೆ ಧಾವಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 41 ||

42

ಶಿವ ತಾನು ತನಗೆ ಬಾಹ್ಯವಾವುದು ಅಂತರ ಆವುದು,
ತನ್ನೊಳ್ ವಿಭಾಗಕ್ಕೆಡೆಯುಂಟೆ
ತಾನಿಲ್ಲದ ಸ್ಥಾನ ಇಲ್ಲದಿರುವಲ್ಲಿ ಅಲ್ಲಿ ಇಲ್ಲಿ
ಎಂದು ಅದೇಕೆ ಧಾವಿಸುವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 42 ||

43

ಸತ್ಯವಾಗಿ ಇರುವದೊಂದೆ ಘನಾತ್ಮ
ಅಲ್ಲಿ ನಾನೆಂಬ ಅಹಂ ಇದ್ದುದು ನಿಜವೆ
ನೀನೆಂಬ ಮಾಯಿಕವಿದ್ದುದು ನಿಜವೆ
ನಿಜವಾಗಿ ನಾನು ಇಲ್ಲ ನೀನು ಇಲ್ಲ ಪ್ರಪಂಚವೂ ಇಲ್ಲ
ಇಲ್ಲದರ ಸಂಯೋಗ ವಿಯೋಗ ಇಲ್ಲ ಇಲ್ಲ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 43 ||

44

ಸತ್ಯವೆಂಬುದು ನಿರಂತರ
ಏನೊಂದಾಗದ ಇದ್ದಕ್ಕಿದ್ದಂತಿರವ ಜ್ಞಾನಾಮೃತ
ಅದು ನಾನು ನೀನು ಆದುದು ಆವಾಗ ಪ್ರಪಂಚವಾದುದು ಆವಾಗ.

ಆದಂತೆ ಭಾವಿಸುವದೆಲ್ಲ ಮರೀಚಿ ಜಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 44 ॥

45

ಅಕ್ಷರೋತ್ತಮನೆಂಬುದು ತೋರದಡಗದ ಅಚಿಂತ್ಯಾತ್ಮವು
ಅಲ್ಲಿ ಕೆಡುವ ಪ್ರಪಂಚವಾಗಲಿ
ಬೋಧರೂಪ ಪರಮಾರ್ಥವಾಗಲಿ
ನಾನು ನೀನು ಎಂಬುವದಾಗಲಿ ಇರಲಿಂಬುಂಟೆ
ಇಂಬಿಲ್ಲವೆಂದಲ್ಲಿ
ಸಂಯೋಗವಾವುದು ವಿಯೋಗವಾವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 45 ॥

46

ಪರಾತ್ಪರ ತಾನು ತನಗಾವ ಉಪಾಧಿ ತನಗಾವ ವಿಷಯ
ನಿರ್ವಿಷಯ ತಾನಿರುವಲ್ಲಿ ಶಬ್ದಾದಿಗಳು ತನಗುಂಟೆ
ನಿರ್ವಿಕಾರನಾದ ತನಗೆ ಇಂದ್ರಿಯಂಗಳುಂಟೆ ಒಡಲುಂಟೆ
ತಾನು ನಿಸ್ಸಂಗ ನಾಗಿರುವದರಿಂದ ತನಗಾವು ಅಂಟವು
ತಾನು ನಿರವಯ ನಾಗಿರುವದರಿಂದ ತನಗಾವು ಅಂಟವು
ತನಗವು ಅಂಟದಿರುವಾಗ ವ್ಯರ್ಥ ಅದೇಕೆ ಚಿಂತಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 46 ॥

47

ಚಿನ್ಮಯ ತಾನು ತನಗೆ ವಿಷಯಗಳುಂಟೆ ಇಂದ್ರಿಯಂಗಳುಂಟೆ
ಇಲ್ಲದ ವಿಷಂಗಳಿಲ್ಲ ಇಂದ್ರಿಯಂಗಳು ಇಲ್ಲ
ಇಲ್ಲಾದುದು ಇಲ್ಲವೆ ಇಲ್ಲ
ಇದ್ದ ಚಿನ್ಮಯ ತಾನು ಅಂದು ಇಂದು ಎಂದೆಂದೂ
ಇದ್ದಕ್ಕಿದ್ದಂತಿರುವ ಅಚಿಂತ್ಯ ಘನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 47 ॥

48

ನೀನು ಚಿದಾಕಾಶವಲ್ಲದೆ ಬೇರೆಯೆ
ಬೇರಾಗದಿರುವಾಗ ನಾನು ನೀನು
ನೀನು ನಾನು ನಾ ನೀನೆಂಬುದೊಂದೆ ಅಕಳಂಕ

ನನಗಾಗಲಿ ನಿನಗಾಗಲಿ ಕಲಂಕವುಂಟೆ
ಅಕಲಂಕದೋಳ್ ಕಲಂಕರೂಪ ಜನನ ಮರಣ
ಬಂಧ ಮೋಕ್ಷ ಶುಭಾಶುಭಂಗಳು
ನಮ್ಮೀರ್ವರಿಗೂ ಇಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 48 ||

49

ನಾನು ನೀನು ನೀನು ನಾನು
ಉಪಾಧಿಯುಳ್ಳವರಾದಲ್ಲಿ ತನುತ್ರಯಾದಿಗಳುಂಟು
ನಾ ನೀನೆಂಬುದು ಏಕಮೇವಾದ್ವಿತೀಯ ಘನ
ಘನಾತ್ಮನಿಗೆ ಜನ್ಮ ಮೃತ್ಯು ಬಂಧ ಮೋಕ್ಷ ಶುಭಾಶುಭಂಗಳಿಲ್ಲಿ
ಇಲ್ಲದುದು ಕಲ್ಪಿಸಿ ರೋಧಿಸದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 49 ||

50

ನಾ ನೀ ನೀ ನಾ ಎಂಬುದು ಅಖಂಡೈಕರಸ
ಅಲ್ಲಿ ಉತ್ಪತ್ತಿ ಆವುದು, ಲಯವಾವುದು
ಬದ್ಧರಾರು ಬುದ್ಧರಾರು
ಬಂಧವೆಲ್ಲಿ ಮೋಕ್ಷವೆಲ್ಲಿ
ಶುಭವಾವುದು ಅಶುಭವಾವುದು
ಕುರುಹು ಕೂನ ಶಬ್ದ ಸೀಮೆ ಇಲ್ಲದುದರೋಳ್
ನಾಮರೂಪಂಗಳೆಲ್ಲಿಯವು
ನಿರಂಜನ ಪ್ರಭು ನಾಗೇಶ್ವರಾ || 50 ||

51

ನಾನೆ ನೀನು ನೀನೆ ನಾನು
ನಾನೀನೆಂಬುದು ಎರಡು ಎರಡೆಂಬೆನೆ
ಒಂದು ಒಂದೆಂಬೆನೆ ಎರಡು
ಒಂದೆಂಬುವದಕ್ಕೂ ಮೀರಿದ ಘನ
ಕೂಡಿದುದಲ್ಲ ಅಗಲಿದುದಲ್ಲ
ಇದ್ದಕ್ಕಿದ್ದಂತಿರುವ ಘನವನೇನೆಂಬೆ ಏನೆಂಬೆ
ನಿರಂಜನ ಪ್ರಭು ನಾಗೇಶ್ವರಾ || 51 ||

52

ಎಲೆ ಮನವೆ ಇರುವುದೊಂದೆ ಅಖಂಡೈಕರಸದೊಳ್
ಇಲ್ಲದ ಕಲ್ಪಿತನ ಕಲ್ಪಿಸಿ ಭ್ರಾಂತಿ ಪಿಶಾಚಿಯಂತೆ ಅದೇಕೆ ಸುತ್ತಾಡುವೆ
ಇಲ್ಲದುದು ಇಲ್ಲವೆ ಇಲ್ಲ ಇದ್ದ ಅಖಂಡ ಅಂದು ಇಂದು ಎಂದೆಂದೂ
ಇದ್ದಕ್ಕಿದ್ದಂತಿದ್ದ ಘನಕ್ಕೆ ಘನ ತಾನೆಂದು
ತನ್ನಿಂದ ತನಗದು ವೇದ್ಯವಾಗುವುಡೆ
ಆ ಸಹಜ ಸುಖದ ಸುಖಿ ಅಚಿಂತ್ಯ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 52 ॥

53

ಎಲೆ ಜೀವನೆ ಇದ್ದ ಚಿದಾಕಾಶದೊಳ್
ಇಲ್ಲದ ಸ್ಥಾವರ ಜಂಗಮವೆಂಬ
ವಿಕಲ್ಪವ ಮಾಡಿ ಅದೇಕೆ ಸುತ್ತಾಡುವೆ
ಇದ್ದ ಚಿನ್ಮಯದೊಳ್
ಇಲ್ಲದ ನಾಮರೂಪ ಇಲ್ಲವೆ ಇಲ್ಲವೆಂದು ತಿಳಿವ
ಚಿನ್ಮಯಾನಂದ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 53 ॥

54

ಇದ್ದುದು ಇದ್ದಕ್ಕಿದ್ದಂತಿದ್ದುದು
ಅದರೊಳ್ ನಿತ್ಯಾನಿತ್ಯವೆಂಬ ವಿಭಾಗಕ್ಕೆಡೆಯುಂಟೆ
ಅವಿಭಾಗದೊಳ್ ವಿಭಾಗ ಕಲ್ಪಿಸಿ ಅದೇಕೆ
ಭ್ರಾಂತಿ ಪಿಶಾಚಿಯಂತೆ ಅರಸುವೆ
ಈ ಅರಸುವ ಅಲಾಪ
ನಿರಸನವಾಗದನ್ನಕ್ಕರ ನಿಜಪದ ಅದೆಂತು ಸಾಧ್ಯ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 54 ॥

55

ಇದ್ದ ಘನವ ಅದನಾರಯ್ಯ ಬಲ್ಲವರು
ಅದು ಏನೊಂದಾಗದ ಅಚಿಂತ್ಯ ಘನ
ಚಿಂತಿಸುವವರೆಲ್ಲ ಬಲ್ಲವರೆ
ಬಲ್ಲವರೆಂಬುದು ಅರಸಲಿಲ್ಲ ಆರಾಧಿಸಲಿಲ್ಲ
ಅರಿಯಲಿಲ್ಲ ಮರೆಯಲಿಲ್ಲ

ಅಚಿಂತ್ಯ ಘನ ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 55 ||

56

ಅಸ್ತಿ ಭಾತಿ ಎಂಬ ಸತ್ಯದಲ್ಲಿ ನಾಮ ರೂಪೆಂಬ ಹುಸಿಯ ಕಲ್ಪಿಸಿ
ಅದೇಕೆ ಭ್ರಾಂತಿ ಪಿಶಾಚಿಯಂತೆ ಕೂಗುವೆ
ಇಲ್ಲದುದು ಇಲ್ಲವಾಗುವುದೆ ಇದ್ದ
ಚಿದ್ಘನಾನಂದ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 56 ||

57

ನಿರವಯವು ವಿಕಾರವರ್ಜಿತವು
ಅದು ಕೊನೆ ಮೊದಲಿಲ್ಲದ
ಘನವಾದುದರಿಂದ ಏಕಮೇವಾದ್ವಿತೀಯ ಬೊಮ್ಮ
ಅಲ್ಲಿ ರಾಗವೂ ಇಲ್ಲ ವಿರಾಗವೂ ಇಲ್ಲ
ಇಂತಹ ಘನವೆ ತಾನಾಗಿರುವಲ್ಲಿ ತಾನು
ಕಾಮಬಾಣಕ್ಕಾಹುತಿಯಾಗಿ ನರಳುವದೆ
ನಿರಂಜನ ಪ್ರಭು ನಾಗೇಶ್ವರಾ || 57 ||

58

ಅನಾಮಯವು ನಾಮವುಳ್ಳುದೆ ನಿರೂಪು ರೂಪವುಳ್ಳುದೆ
ಏಕರಸವು ಬರ ಹೋಗುವ ಸುಖವೆ
ಅದು ಆವುದರೋಳ್ ಕೂಡಿದುದಲ್ಲ ಅಗಲಿದುದಲ್ಲ
ಇದ್ದಕ್ಕಿದ್ದಂತಿದ್ದ ಅನಾಮಯವಾಗಿರುವ
ಏಕರಸ ನಿರ್ವಾಣ ಅರಿವುಡೆ ತಾನು
ನಿರಂಜನ ಪ್ರಭು ನಾಗೇಶ್ವರಾ || 58 ||

59

ಅಭವನೆ ನೀನು ಸ್ವಗತಾದಿ ಭೇದ ರಹಿತ ನಾಗಿರುವದರಿಂದ
ಏಕಮೇವಾದ್ವಿತೀಯ ಬೊಮ್ಮ
ನಿನಗೆ ಬಂಧಾಬಂಧವುಂಟೆ ರಾಗಾರಾಗವುಂಟೆ
ಇಂತಹ ಘನಕ್ಕೆ ಘನ ನೀ ನಿರುವಾಗ ವಿಷಯ

ಪ್ರಲೋಭನೆಗೆ ಸಿಕ್ಕಿ ನರಳುವರೆ
ನಿರಂಜನ ಪ್ರಭು ನಾಗೇಶ್ವರಾ || 59 ||

60

ತಾನಾರೆಂದಲ್ಲಿ ಸರ್ವ ಶೃತಿಗಳಲ್ಲಿ ಸಾರಿರುವ ಪರತತ್ವ ತಾನೆಂದು ತಿಳಿ
ಪರತತ್ವವದು ಗುಣಾತೀತ ಶುದ್ಧ ಅವ್ಯಯ ಅಶರೀರಿ
ಸಮಸ್ವರೂಪ ಸ್ವಯಂಪ್ರಕಾಶ ತಾನೆಂದು ತಿಳಿ
ಅದರಲ್ಲಿ ಸಂಶಯವಿಲ್ಲದಿರೆ ಅಚಿಂತ್ಯಾತ್ಮ ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 60 ||

61

ಪರತತ್ವ ತಿಳಿಯದೆ ಸರ್ವಶೃತಿಗಳ ಸಾರಿದರೂ ತಾನಾರೆಂದರಿತವರೆ
ಪರತತ್ವ ತಾನೆಂಬುದು ತನಗದು ಸ್ವತಃ ಸಿದ್ಧವೆ
ಇಲ್ಲವೆಂದಲ್ಲಿ ಇದರ ಅರುವು ಇರವು ಮಾಯಿಕ ಶಬ್ದಾಡಂಬರ
ಘನಕ್ಕೆ ಘನವಾಗಿರುವ ನಿಃಶಬ್ದ ನಿರಾಳ ನಿಜಾನಂದ
ಅಲ್ಲಿ ಇಲ್ಲ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 61 ||

62

ಪರತತ್ವ ತಿಳಿದರೆ ತನ್ನ ತಾ ತಿಳಿದಂತೆ
ತಾನೆಂಬುದು ಪರತತ್ವ ಪರಾತ್ಪರ ಪರವಸ್ತು
ಭಾವಾತೀತ ಅರಿಯದರುವು ಸಮಸ್ವರೂಪ
ತನ್ನಿಂದ ತನಗದು ಸಾಕ್ಷಾತ್ಕಾರ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 62 ||

63

ಪರತತ್ವವೆಂಬುದು ಸುಖಾಮೃತ ಜ್ಞಾನಾಮೃತ
ಅದು ಕೇವಲ ಶುದ್ಧ ಯಿದ್ದಕ್ಕಿದ್ದಂತಿರುವ ಚಿನ್ನಿಧಿ ಸಮಸ್ವರೂಪ
ಅಲ್ಲಿ ಕ್ಷರಾಕ್ಷರವೆಂಬುದಿಲ್ಲ
ನಾನೆಂಬುದು ಅಂದು ಇಲ್ಲ ಇಂದು ಇಲ್ಲ ಎಂದೆಂದೂ ಇಲ್ಲ
ಸಹಜ ನಿಸ್ಸೀಮ ನಿಜಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 63 ||

64

ತಾನಾರೆಂದರಿವಡೆ ಸರ್ವಶೃತಿ ತನ್ನೊಳಗು
ತಾನು ಶೃತಿಗೆ ಮೀರಿದ ಸ್ವಯಂಭು
ಇದ್ದಕ್ಕಿದ್ದಂತಿರುವ ಸ್ವಮಹಿಮ್ನ
ತನ್ನೊಳ್ ಭೇದವೂ ಇಲ್ಲ ಅಭೇದವೂ ಇಲ್ಲ
ಅಕಥನೀಯ ಘನದಲ್ಲಿ ನಿರಂಜನಪ್ರಭುವೆಂದು
ಕಥನ ಮಾಡುವದು ಇದೊಂದು ವಿಸ್ಮಯ ॥ 64 ॥

65

ಸಾಕಾರವೆಂಬುದು ಅನೃತ ನಿರಾಕಾರವೆಂಬುದು ನಿರಂತರ
ಇದು ತೋರದಡಗದ ನಿಜ ಘನ
ಈ ಘನವ ತಿಳಿವುಡೆ ಅನೃತರೂಪ ಸಾಕಾರ
ಹುಟ್ಟಿದುದಿಲ್ಲ ಸತ್ತುದಿಲ್ಲ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 65 ॥

66

ಸಾಕಾರ ನಿರಾಕಾರವೆಂದು ವಿಭಾಗಿಸುವರು
ವಿಭಾಗಿಸಿದರೂ ಸಾಕಾರ ತಿಳಿಯರು
ತಿಳಿಯದ್ದರಿಂದ ದಿಟಸಟೆಯನರಿಯರು
ಸಟೆಯು ತಿಳಿವುಡೆ ದಿಟವು ತಾನೆ
ದಿಟವು ತಾನಾದಲ್ಲಿ ತಾನೆ ಅಚಿಂತ್ಯಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 66 ॥

67

ದೃಷ್ಠಿ ಎರಡುಂಟು ಒಂದು ಸಟೆ ಮತ್ತೊಂದು ದಿಟ
ಸಟೆ ದೃಷ್ಠಿಗಿದು ದಿಟವ ತೋರದು
ದಿಟ ದೃಷ್ಠಿಗೆ ಸಟೆಯು ತೋರದು
ಸಟೆಯು ಅತ್ಯಂತಾಭಾವವಾಗಲು ದಿಟವು ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 67 ॥

68

ಪವಿತ್ರಾಪವಿತ್ರ ದೃಷ್ಠಿಯನಾರು ಬಲ್ಲರು

ಅಪವಿತ್ರ ದೃಷ್ಠಿಯೆ ಸಟೆದೃಷ್ಠಿ ಪವಿತ್ರ ದೃಷ್ಠಿಯೆ ದಿಟದೃಷ್ಠಿ
ಸಟೆದೃಷ್ಠಿಗಿದು ಸಾಕಾರ ಗೋಚರ ಅದು ಅನೃತ
ದಿಟದೃಷ್ಠಿಗಿದು ಬ್ರಹ್ಮವು ಬ್ರಹ್ಮಾಕಾರವು ಬ್ರಹ್ಮಮಯ
ಇದು ನಿರಂತರ ಇಲ್ಲಿ ಭೇದವೂ ಇಲ್ಲ ಅಭೇದವೂ ಇಲ್ಲ
ಕೇವಲ ಸ್ವಮಹಿಮ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 68 ||

69

ತತ್ತ್ವವೇತ್ತರು ಚಿದಾಕಾಶ ಒಂದೆ ಅದು ಸಮವೆನ್ನುವರು
ಸಮದರ್ಶಿಗೆ ತ್ಯಾಗ ಭೋಗ ಯೋಗವುಂಟೆ
ಅವನ ಚಿತ್ತಾ ದಗ್ಧ ಧಾನ್ಯದಂತಿರುವದರಿಂದದು
ಬ್ರಹ್ಮಾಕಾರದಂತಿರುವ ಏಕವೂ ಅಲ್ಲ
ವಿಷಯಾಕಾರದಂತಿರುವ ಅನೇಕವೂ ಅಲ್ಲ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 69 ||

70

ತತ್ತ್ವ ತಿಳಿದ ಘನವಂತರು ಅರುವು ಒಂದೆ. ಅದು ಸಮವು
ಸಮಸಮ್ವರೂಪ ತಾವಾದುದರಿಂದ ತಾನು ಜಗವು
ಬ್ರಹ್ಮಾದಿ ದೇವತಾ ದೈತ್ಯರು
ಸಕಲ ವೇದಂಗಳು ಅರುವೆಂಬುದು ದೃಢವಾದುದರಿಂದ
ಅವರ ಚಿತ್ತ ನಿರ್ವಿಕಾರ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 70 ||

71

ಚಿನ್ನಿಧಿ ಒಂದೆ ಅಲ್ಲಿ ನಾನತ್ವ ಎಲ್ಲಿಯದು
ನಾನತ್ವವೆಂಬುದು ತಾನಾರೆಂದರಿಯದ ಪ್ರಮಾದ
ಈ ಪ್ರಮಾದ ಹೋಗದನ್ನಕ್ಕರ ಅಖಂಡತ್ವ ಸಿದ್ಧಿಸದು
ಅಖಂಡತ್ವ ಸಿದ್ಧಿಸದ್ದರಿಂದ ಅಹಮತ್ವ ಹೋಗದು
ಇದು ನಾಶವಾಗದ್ದರಿಂದ ಚಿತ್ತ ಬಹುಮುಖವಾಗಿಹುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 71 ||

72

ಜ್ಞಾನಿಯು ತತ್‌ಸ್ವರೂಪನು

ಆ ಘನವಂತನ ದೃಷ್ಟಿ ಅರು ಸ್ವರೂಪವಾದುದರಿಂದ
ಸಮವು ಸಮವೆಂಬುದು ಸವೆಯದ ಸುಖವು
ಅದು ತುಂಬಿದುದು ತುಳಕದು
ಅಲ್ಲಿ ರಾಗವಾವುದು ವಿರಾಗವಾವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 72 ||

73

ಜ್ಞಾನಿಗಳ ಜ್ಞಾನ ಒಂದೆ ಇರವು ಒಂದೆ ಸ್ವರೂಪ ಒಂದೆ
ಒಂದೆಂಬೆನೆ ಬೇರಾಗಿ ತೋರಿದರೂ
ಅಗಲಲಿಲ್ಲದ ಇರವು ಬಿಚ್ಚಿ ಬೇರಾಗದ ಘನ
ಅಲ್ಲಿ ಗ್ರಾಹ್ಯವಾವುದು ತ್ಯಾಜ್ಯವಾವುದು
ಅವರ್ಣೀಯವು ವರ್ಣನಕ್ಕೊಳಪಡುವದೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 73 ||

74

ಸಕಲವು ಮುಕ್ತರೂಪ ಘನವಿರುವಲ್ಲಿ ಅರಿತವರಾರು ಅರಿಯದವರಾರು
ಕೇವಲ ಅರುವು ಮರವರವುಳ್ಳದ್ದಾಯಿತೆ
ಇಲ್ಲದ ಮರವು ಇಲ್ಲವೆ ಇಲ್ಲ
ಇದ್ದ ಅರುವು ಇದ್ದಕ್ಕಿದ್ದಂತಿರುವದರಿಂದ
ಸಮಾಧಿ ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 74 ||

75

ಸರ್ವವು ಬ್ರಹ್ಮಮಯವಿರುವಲ್ಲಿ ಅನಾತ್ಮವಿರಲಿಂಬುಂಟೆ
ಇರುವುದೊಂದೆ ಅಖಂಡಾತ್ಮವಿರುವಲ್ಲಿ ಸಮಾಧಿ ಆರಿಗೆ ಹೇಳುವದು
ಇಲ್ಲದುದು ಇಲ್ಲವಾದಲ್ಲಿ
ಅಲ್ಲಿ ಸಮಾಧಿ ಅದೆ ಅಥವಾ ಇಲ್ಲವೆಂದಾದರೂ ಹೇಗೆ ಹೇಳುವದು
ನಿರಂಜನ ಪ್ರಭು ನಾಗೇಶ್ವರಾ || 75 ||

76

ಅಚಿಂತ್ಯಾತ್ಮನಲ್ಲಿ ನಿಶ್ಚಿಂತರಾರು ಚಿಂತಿಸುವ ಚಿಂತಕರಾರು
ಇದ್ದುದೊಂದೆ ಅಚಿಂತ್ಯ ಘನವಿರುವಲ್ಲಿ ಸಮಾಧಿ
ಅದೆ ಇಲ್ಲವೆಂದು ಹೇಗೆ ಹೇಳುವದು

ಅದ್ವಿತೀಯಘನದೋಳ್ ಚಿಂತೆ ನಿಶ್ಚಿಂತೆ ಎಂಬ
ವಿಭಾಗಕ್ಕೆಡೆಯುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 76 ॥

77

ದ್ವಂದ್ವಾತೀತವು ದೇಹ ದೇಹಿ ಎಂಬುದಕ್ಕೂ ಮೀರಿರುವದರಿಂದ
ಅಜ ಅವ್ಯಯ ಸರ್ವಸಮನಾದ ಸ್ವರೂಪ
ಇದು ಮರವರುವಿಗೂ ಮೀರಿರುವದರಿಂದ
ನನಗೆ ನನ್ನ ಸ್ವರೂಪ ಗೊತ್ತಿದೆ ಗೊತ್ತಿಲ್ಲವೆಂದು
ಚಿಂತಿಸಲು ಹೇಗೆ ಸಾಧ್ಯ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 77 ॥

78

ತಾನಾರೆಂದು ತನ್ನ ತಾ ಇದ್ದಕ್ಕಿದ್ದಂತೆ ತಿಳಿದವರೆ ತತ್ವಮಸ್ಯಾದಿ
ಮಹಾವಾಕ್ಯದಲ್ಲಿ ಪ್ರತಿಪಾದಿತವಾದ ಚೈತನ್ಯರು
ಅವರೇ ಪಂಚ ಭೂತಗಳಿಂದಾದ
ಪ್ರಪಂಚ ಪ್ರಕೃತಿ ರೂಪ ಮಾಯಾ ನೇತಿ ನೇತಿ ವಾಕ್ಯದಿಂ
ನಿರಾಕರಿಸಿದವರು ಅವರೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 78 ॥

79

ತಾನಾರೆಂದರಿಯಲು ತತ್ವಮಸ್ಯಾದಿ ಮಹಾವಾಕ್ಯಗಳೆಂಬಿವು
ಇಲ್ಲದ ಮಾಯಿಕವ ನಿರಾಕರಿಸಿ
ಇದ್ದಕ್ಕಿದ್ದಂತೆ ತನ್ನ ಸ್ವರೂಪದ ಘನತ್ವ ತಿಳಿಸಲು
ನೇರ ಅನುವಿನ ವಾಕ್ಯಗಳು
ಈ ವಾಕ್ಯಗಳಿಂದ ಭ್ರಾಂತಿ ನಿರಸನ
ಬ್ರಹ್ಮವು ತಾನೆಂಬುದು ಸ್ವತಃ ಸಿದ್ಧ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 79 ॥

80

ಸಕಲವು ನಿನ್ನ ಸತ್ತೆಯಿಂದ ತುಂಬಿದೆ
ಸತ್ತೆಯೆಂಬುದು ಸತ್‌ಸ್ವರೂಪ
ಸತ್‌ಸ್ವರೂಪನಾದ ನಿನಗೆ ಧ್ಯೇಯವಸ್ತುವೆ

ನೀನು ಧ್ಯಾತನೂ ಅಲ್ಲ
ನಿನಗೆ ಧ್ಯಾನವೂ ಇಲ್ಲ ನೀನು ಚಿತ್ತಾ ಅಲ್ಲ ಏನೇನೂ ಅಲ್ಲ
ನೀನು ಹೀಗಿದ್ದು
ಧ್ಯಾನ ಮಾಡಲು ನಾಚಿಕೆಯಾಗುವದಿಲ್ಲವೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 80 ॥

81

ಸ್ಥಾವರ ಜಂಗಮ ಜಗವು ಅರುವಿನಿಂದ ತುಂಬಿದೆ
ಅರಿವು ಅರುವೆ ಕೇವಲ ಅರುವೆ ಇರುವಲ್ಲಿ
ಜೀವನೂ ಇಲ್ಲ ಮನವೂ ಇಲ್ಲ
ಏನೇನೂ ಇಲ್ಲದಿರುವಾಗ
ಧ್ಯಾನ ಮಾಡುವುದು ನಿನಗೆ ನಾಚಿಕೆಯಾಗದಿರದೇ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 81 ॥

82

ವಿಶ್ವವು ಜ್ಞಾನದಿಂದ ಭರಿತವು ಜ್ಞಾನಾನಂದವು ಜ್ಞಾನ ಘನವೆ
ನೀನು ಅಖಂಡೈಕರಸವಾದ ಜ್ಞಾನಾಮೃತ ನಿರುವಲ್ಲಿ ಅಹಂ ಇಲ್ಲ
ಅರಸುವದೂ ಇಲ್ಲ ಚಿತ್ತವೂ ಇಲ್ಲ
ಹೀಗಿದ್ದು ಧ್ಯಾನ ಮಾಡುವದಾದರೂ
ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 82 ॥

83

ನಾನೆ ಪರಾತ್ಪರ ಶಿವ ಅಖಂಡ ಶಿವನಾಗಿರುವದರಿಂದ
ಶಿವ ನನ್ನಿಂದ ಬೇರೆಂಬುದು ಗೊತ್ತಿಲ್ಲ
ಈಗ ನಾನು ಅವನನ್ನು ಕುರಿತು
ಪೂಜಿಸುವದೆಂತು ಅರಸುವದೆಂತು ಪ್ರಾರ್ಥಿಸುವದೆಂತು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 83 ॥

84

ನಿಸ್ಸೀಮ ಶಿವ ನಾನಾಗಿರುವದರಿಂದ ನನ್ನೊಳ ಸೀಮೆಯುಳ್ಳ
ತತ್ವಂಗಳಾವು ಇಲ್ಲ

ಅಚಿಂತ್ಯ ಶಿವ ನಾನಾಗಿರುವಲ್ಲಿ ಶಿವ
ನನ್ನಿಂದನ್ಯನೆಂಬುದು ಗೊತ್ತಿಲ್ಲ
ನಿಸ್ಸೀಮವು ಸೀಮೆಯುಳ್ಳದ್ದಾಗದಿರುವಾಗ
ಧ್ಯಾನಿಸುವದೆಂತು ಆಹ್ವಾನಿಸುವದೆಂತು
ನಿರಂಜನ ಪ್ರಭು ನಾಗೇಶ್ವರಾ ॥ 84 ॥

85

ನಾನು ಒಳಹೊರಗೆನ್ನದೆ ಭರಿತವಾಗಿರುವ ಚಿನ್ನಿಧಿ ಶಿವ ನನ್ನಿಂದ
ಬೇರೆಂಬುದರಿಯೆ
ನನ್ನೋಳ್ ವ್ಯಾಪ್ಯ ವ್ಯಾಪಕವೆಂಬ ವಿಭಾಗಕ್ಕೆಡೆಯುಂಟೆ
ನಾನು ಪೂರ್ಣಾತ್ ಪೂರ್ಣವೆಂಬುದು ನಿನ್ನಿಂದರಿದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 85 ॥

86

ತಾನೆ ಸತ್‌ಸಾರ ಸ್ವರೂಪನೆಂದಲ್ಲಿ ದೇಹವೂ ಇಲ್ಲ ಮನವೂ ಇಲ್ಲ
ವಿದೇಹಿಯೋಳ್ ದೇಹಾದಿಗಳೆಲ್ಲಿ ಅಕಲ್ಪಿತನೋಳ್ ಕಲ್ಪಿತನೆಲ್ಲಿ
ಸಮ ಸ್ವರೂಪದೋಳ್ ವಿಷಮವೆಲ್ಲಿ
ಇರುವುದೊಂದೆ ಚಿನ್ಮಯದೋಳ್
ಗ್ರಾಹ್ಯ ಗ್ರಾಹಕವೆಂಬ ಭೇದವೂ ಇಲ್ಲ ಅಭೇದವೂ ಇಲ್ಲ
ನಿರಂಜನ ಪ್ರಭು ನಾಗೇಶ್ವರಾ ॥ 86 ॥

87

ನಿರುಪಾಧಿಯೆಂಬುದು ಸ್ವಗತಾದಿ ಭೇದತ್ರಯದಿಂದುಕ್ತವಾದುದಲ್ಲ
ಅದು ಅಖಂಡ ಜ್ಞಾನಾಮೃತವು
ಅಲ್ಲಿ ಹಿಂಸಕನೂ ಇಲ್ಲ ಹಿಂಸೆಯೂ ಇಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 87 ॥

88

ನೀನು ಇದ್ದಕ್ಕಿದ್ದಂತಿರುವದರಿಂದ
ನಿನ್ನೋಳ್ ಶುದ್ಧವೆಂಬುದಿಲ್ಲ ಅಶುದ್ಧವೆಂಬುದಿಲ್ಲ
ದೇಹ ದೇಹಿ ಎಂಬುವದಾದರೂ ಹೇಗೆ
ನೀನು ನಿರ್ವಿಕಾರ ನಿರಾಲಂಬನಿರುವದರಿಂದ
ನಿನ್ನೋಳ್ ಬದಲಾವಣೆ ಎಂದೂ ಇಲ್ಲ

ಹೀಗಿರುವಾಗ ನಿನ್ನನ್ನು ತಪ್ಪು ತಿಳಿಯುವದಾದರು ಹೇಗೆ
ಹೇಳಾ ನೀನು ತಪ್ಪಿನಲ್ಲಿರುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 88 ||

89

ನೀನು ಅಬಾಧಿತ ನಾದುದರಿಂದ
ನಿನ್ನೊಳ್ ಭೇದವೂ ಇಲ್ಲ ಅಭೇದವೂ ಇಲ್ಲ
ನೀನು ಉದಯಾಸ್ತಗಳಿಲ್ಲದ ಜ್ಞಾನಸ್ವರೂಪ
ಗಗನದಂತಿರುವ ಜ್ಞಾನಜ್ಯೋತಿ
ಹೀಗಿರುವಲ್ಲಿ ನಿನ್ನನ್ನು ತಪ್ಪು
ತಿಳಿಯುವದಾದರೂ ಹೇಗೆ
ತಪ್ಪಿನಲ್ಲಿರುವೆನೆಂಬುದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 89 ||

90

ನೀನು ವಿಶುದ್ಧನಾಗಿರುವದರಿಂ ನಿನ್ನೊಳ್
ಅಂಗತ್ವವೂ ಇಲ್ಲ ಅನಂಗತ್ವವೂ ಇಲ್ಲ
ನೀನು ನಿಷ್ಕಳಂಕ ಪ್ರಭೆ ನಿರಾಳ ಪ್ರಭೆ ಜ್ಞಾನ ಪ್ರಭೆ
ಹೀಗಿರುವಲ್ಲಿ ತಪ್ಪು ತಿಳಿಯುವದು
ತಪ್ಪಿನಲ್ಲಿರುವದು ಹೇಗೆ ಸಾಧ್ಯ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 90 ||

91

ಘಟಾಕಾಶ ಮಹಾಕಾಶ ವಿದ್ದರೂ ಘಟ ಒಡೆಯದ ವಿನಃ
ಘಟದಲ್ಲಿರುವ ಆಕಾಶ ಮಹಾಕಾಶವೆನಿಸದು
ಮನವು ಅರುಸ್ವರೂಪವಾಗಿದ್ದರೂ
ಮನದೊಳ್ ಅಶುದ್ಧತೆ ಹೋಗದನ್ನಕ್ಕರ ಅರುಸ್ವರೂಪವಾಗದು
ನಿರಂಜನ ಪ್ರಭು ನಾಗೇಶ್ವರಾ || 91 ||

92

ಆಕಾಶವೆಂಬುದು ನಿಸ್ಸೀಮವು
ಘಟದ ಪ್ರತಿಬಂಧಕದಿಂದ ನಿಸ್ಸೀಮವೆನಿಸದು
ಮನವೆಂಬುದು ನಿರ್ವಿಕಾರವಿದ್ದರೂ ಸಂಕಲ್ಪದ

ಪ್ರತಿಬಂಧಕ ವಿರುವನ್ನಕ್ಕರ ನಿರಾಳತ್ವ ಸಿದ್ಧಿಸದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 92 ||

93

ಮಹಾಕಾಶದೋಳ್ ಘಟವಾವುದು ಘಟಾಕಾಶವಾವುದು
ಚಿದಾಕಾಶದೋಳ್ ಉಪಾಧಿಯುಳ್ಳ ಬದ್ಧನಾರೊ
ಉಪಾಧಿನಿರಸನವಾದ ಮುಕ್ತನಾರೊ
ತಿಳಿಯುವ ಯೋಗ್ಯವಸ್ತು ಆವುದು
ತಿಳಿವವನೆಲ್ಲಿ ಇಲ್ಲ ಇಲ್ಲ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 93 ||

94

ನಭವೆಂಬುದು ಇದ್ದಕ್ಕಿದ್ದಂತಿರುವ ನಿರಂತರ
ಅದಕ್ಕೆ ಒಳಗಾವುದು ಹೊರಗಾವುದು
ಅಲ್ಲಿ ಘಟವೆಲ್ಲಿ ಅದರಲ್ಲಿರುವ ನಭವೆಲ್ಲಿ
ನಿರಾವರಣ ನಿರಾಲಂಬದೋಳ ಜೀವನಾರು ಜೀವನ್ಮುಕ್ತನಾರು
ಅಲ್ಲಿ ಅರಿತವ ಅರಿಯದವನೆಂಬುದಕ್ಕಿಂಬುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 94 ||

95

ಬಯಲು ಬಯಲೆ ನಿಸ್ಸೀಮವು ಸೀಮೆಯುಳ್ಳುದೆ
ಚಿನ್ಮಯವು ಚಿನ್ನಿಧಿಯೆ
ಕೇವಲ ಅರುವು ಮರವುಳ್ಳದ್ದಾಗಿ ಜೀವನೆಂದನಿಸದು
ಅರುವುಳ್ಳದ್ದಾಗಿ ಪ್ರಾಜ್ಞನೆಂದೆನಿಸದು ಅಲ್ಲಿ ಬಂಧವೂ ಇಲ್ಲ
ಮೋಕ್ಷವೂ ಇಲ್ಲ ಇರುವುದೊಂದೆ
ಅಖಂಡೈಕರಸದೋಳ್ ಸ್ವಾಮಿ ಯಾರು ಸೇವಕನಾರು
ನಿರಂಜನ ಪ್ರಭು ನಾಗೇಶ್ವರಾ || 95 ||

96

ನಾನು ಸರ್ವಸ್ಥಾನದಲ್ಲಿ ಶಾಶ್ವತ
ನಾನಿಲ್ಲದ ದೇಶ ಕಾಲ ವಸ್ತು ಉಂಟೆ
ಸಕಲದರೋಳ್ ಅನಸ್ಯೂತನಾದುದರಿಂದ
ನಿರಂತರ ಗಗನದಂತಿರುವ ಜ್ಞಾನಾಮೃತ

ಸಕಲವು ನಾನೆ ನಾನಾವುದು ಆಗದವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 96 ॥

97

ನಾನು ಅವಿನಾಶಿಯಾದುದರಿಂದ
ನಾನಾವ ದೇಶವೂ ಅಲ್ಲ ಕಾಲವೂ ಅಲ್ಲ ವಸ್ತುವೂ ಅಲ್ಲ
ನಾನೇ ನಾನಾಗಿರುವದರಿಂದ ಅಜ ವ್ಯಕ್ತಾವ್ಯಕ್ತನೆಂಬುದಕ್ಕೂ
ಮೀರಿದ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 97 ॥

98

ತಾನಾರೆಂದರಿಯಲು ಕರ್ಮಕಾಂಡದಿಂದುಕ್ತವಾದ ವೇದೋಕ್ತ
ಕರ್ಮಂಗಳು ಪರಮ ಗುರಿಯೆ
ಧ್ಯೇಯ ಧ್ಯಾತಾ ಒಂದೆಂದು
ಉಪಾಸಿಸುವ ದೀಪ್ತಿ ಮಾರ್ಗ ಪರಮ ಗುರಿಯೆ
ಧ್ಯೇಯ ಧ್ಯಾತಾ ಒಂದೆಂದು
ಏಕರೂಪವಾಗಿರುವ ಬ್ರಹ್ಮವೊಂದೆನ್ನುವ ಪರಮಾರ್ಥ ತತ್ವವು
ಪರಮ ಗುರಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 98 ॥

99

ತನ್ನ ಮರೆದು ವೇದ ಪಠಿಸಿದರೇನು
ವಿಧಿಯುಕ್ತ ನೀತಿಯಿಂ
ವರ್ತಿಸಿ ಲೋಕ ನಾಯಕನೆಂದೆನಿಸಿದರೇನು
ದೇವತಾರಾಧಿಸಿ ಯಜ್ಞದ
ಸಕಲೇಂದ್ರಿಯಂಗಳ ಪ್ರಜ್ವಲಿಸಿದರೇನು
ಬ್ರಹ್ಮಣಾದಿ ವರ್ಣಂಗಳ ಉಚ್ಚ ಕುಲದವನಾದರೇನು
ಉಗ್ರತಪಸಿಯಾಗಿ ಅಣಿಮಾದಿ ಸಿಧ್ಯಾದಿ ಗಳಿಂದುಕ್ತನಾದರೇನು
ಅಹಂಗ್ರಹ ಉಪಾಸನೆಯಿಂದ ದಿವ್ಯಧ್ಯಾನಾಸಕ್ತನಾದರೇನು
ಏಕರೂಪವಾಗಿರುವ ಬ್ರಹ್ಮವೊಂದೆ ಪರಮಾರ್ಥ ತತ್ವರೂಪನಾದ
ತನ್ನರಿಯಲಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 99 ॥

100

ಏಕರೂಪವಾಗಿರುವ ಬ್ರಹ್ಮವೊಂದೆಂಬುದ ಮರೆತು
ವೇದವನೋದಿ ವೈದಿಕನಾದರೇನು ನೈಷ್ಠಿಕ ಬ್ರಹ್ಮಚಾರಿಯಾದರೇನು
ಶ್ರೇಷ್ಠ ಕುಲಜನೆಂದೆನಿಸಿದರೇನು
ನಾನಾ ಯೋಗಂಗಳ ಸಾಧಿಸಿ ಸಿದ್ಧಿಸಿ ಪರಕಾಯ ಪ್ರವೇಶ ಮಾಡಿ
ನಾನಾ ಲೋಕಂಗಳ ಸಂಚರಿಸಿದರೇನು ಮುಂದಿನ ಹಿಂದಿನ ಈಗಿನ
ಭವಿಷ್ಯಂಗಳ ಹೇಳಿ ಸರ್ವಜ್ಞನೆನಿಸಿದರೇನು
ಏಕ ಏವ ಅದ್ವಯ ಘನವಾದ
ತನ್ನಿರವು ತಿಳಿಯದುದರಿಂದ ಸರ್ವವು ನಿಷ್ಫಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 100 ॥

101

ನೀನು ಭಾವಾದಿಗಳಿಗೆ ಮೀರಿರುವದರಿಂದ ಅದ್ವಿತೀಯ ಘನವು
ನಿನ್ನೊಳ್ ಭಾವಂಗಳಿಗಿಂಬಿಲ್ಲದಿರುವಲ್ಲಿ
ನಿನ್ನನ್ನು ವ್ಯಾಪ್ಯನೆಂದು
ವ್ಯಾಪಕನೆಂದು ಹೇಗೆ ಭಾವಿಸುವದು ನಿಸ್ಸೀಮನಾದವನನ್ನು
ಕೆಲವು ಸಮಯ ಪ್ರತ್ಯಕ್ಷ
ಕೆಲವು ಸಮಯ ಪರೋಕ್ಷವೆಂದು ಭಾವಿಸುವದೆಂತು
ನಿರಂಜನ ಪ್ರಭು ನಾಗೇಶ್ವರಾ ॥ 101 ॥

102

ನೀನು ಭಾವಾದಿಗಳಿಂದ ನಿರ್ಮುಕ್ತನಾದವಂಗೆ ಭಾವವಾವುದು
ಅಭಾವವಾವುದು ವ್ಯಾಪ್ಯವೆಂಬುದಿಲ್ಲ ವ್ಯಾಪಕನೆಂಬುದಿಲ್ಲ
ಇದ್ದಕ್ಕಿದ್ದಂತಿರುವ ಅಖಂಡೈಕರಸವು ಕಂಡೆ
ಕಾಣೆನೆಂಬುವದಾದರೂ ಅದೆಂತು
ನಿರಂಜನ ಪ್ರಭು ನಾಗೇಶ್ವರಾ ॥ 102 ॥

103

ಇಚ್ಛಾನಿಚ್ಛೆಯಿಂ ವಿವರ್ಜಿತವಾದ ಸವೆಯದ ಸುಖಸ್ವರೂಪಕ್ಕೆ
ದ್ವೈತವೆಂಬುದಿಲ್ಲ ಅದ್ವೈತವೆಂಬುದಿಲ್ಲ ಇಲ್ಲದುದು ಇಲ್ಲವೆ ಇಲ್ಲ
ಸರ್ವತ್ರ ಸದಾಸಮಸ್ವರೂಪವಾದ ಅಖಂಡ ಜ್ಯೋತಿಯು
ಇದ್ದಕ್ಕಿದ್ದಂತಿದ್ದುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 103 ॥

104

ಸಮ ಸ್ವರೂಪ ಘನವು ಏನೊಂದಾದುದಲ್ಲ ಹೋದುದಲ್ಲ
ಅಳಿದುದಲ್ಲ ಉಳಿದುದಲ್ಲ ಅಲ್ಲಿ ಇಚ್ಛೆ ಆವುದು ಅನಿಚ್ಛೆ ಆವುದು
ಭೇದಾಭೇದವೆಂಬುದಿದೆಯೆ ಕೂಡಿದುದಲ್ಲ ಅಗಲಿದುದಿಲ್ಲ
ಅದನ್ನು ದ್ವೈತ ಅದ್ವೈತವೆಂದು ಅರಸುವರೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 104 ||

105

ಸಮವೆಂಬುದು ನಿರ್ವಿಕಾರವು ನಿರಾಲಂಬವು
ಅವಿಭಾಗವು ಸರ್ವತ್ರ ಸದಾ ಅಂತರ ಬಹಿರ ಭರಿತವು
ಅಲ್ಲಿ ಜಿಜ್ಞಾಸುವಿಲ್ಲ ಕೃತ ಕೃತ್ಯನಿಲ್ಲ
ಇದ್ದಕ್ಕಿದ್ದಂತಿರುವ ಅಚಿಂತ್ಯಾತ್ಮದೊಳ್
ದ್ವೈತಾದ್ವೈತದಿಚ್ಛೆಯಾದರೂ ಅದೆಲ್ಲಿಯದು
ನಿರಂಜನ ಪ್ರಭು ನಾಗೇಶ್ವರಾ || 105 ||

106

ತಾನಾರೆಂದರಿವುಡೆ ಸಕಲ ಇಚ್ಛೆಯ ನಿರ್ಮುಕ್ತ ಇಚ್ಛೆಯು
ಮರವಿಂಗೆ ಕಾರಣ ಅನಿಚ್ಛೆಯು ಅರುವಿಂಗೆ ಕಾರಣ
ಇಚ್ಛಾನಿಚ್ಛೆ ವಿರಹಿತನಾದಲ್ಲಿ
ಸ್ವತಃ ಸಿದ್ಧ ಸ್ವಯಂಪ್ರಕಾಶ ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 106 ||

107

ತನ್ನನರಿದವಂಗೆ ಮತಾಂತರ ಪಕ್ಷಾಂತರವುಂಟೆ
ತನ್ನದನ್ಯದೆಂಬುವದುಂಟೆ ಅಹುದಾವುದೊ ಅಲ್ಲಾವುದೊ
ತಾನನ್ಯವೆಂಬುದಿಲ್ಲದಿಪ್ಪಗಮ್ಯಪ್ರಮಾಣವ ಉಸುರಿದರೆ
ಅದಕ್ಕದೆ ಕೊರತೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 107 ||

108

ರೂಪರಹಿತಂಗೆ ನಾನಾ ಬಣ್ಣವುಳ್ಳವನೆಂದು ಹೇಗೆ ಹೇಳುವದು
ಮಾತು ಮನಂಗಳಿಗೆ ಮೀರಿದುದನ್ನು
ಜೀವ ಈಶ ಆತ್ಮ ಪರಮಾತ್ಮನೆಂದು
ಹೇಗೆ ವರ್ಣಿಸುವದು
ಗುಣಾತೀತ ಘನಕ್ಕೆ ಗುಣ ಗುಣಿ
ಎಂದು ಅರಸುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 108 ॥

109

ನಿರಂಜನನಿಗೆ ನಾನಾ ವರ್ಣವುಳ್ಳವನೆಂದು ಹೇಗೆ ಅರಸುವದು
ನಿಃಶಬ್ದ ನಿಷ್ಪತ್ತಿ ನಿರಾಳನಿಗೆ ಶಬ್ದಾದಿಗಳಿಂದ ಹೇಗೆ ಹೊಗಳುವದು
ನಿರ್ಗುಣವು ಗುಣಯುಕ್ತವು ಗುಣಗಂಧವೆಂದು
ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 109 ॥

110

ಅಕಥನೀಯವು ಕಥನದಿಂದುಕ್ತವೆ
ಅಲ್ಲಿ ಅಕಲ್ಪಿತ ಅನಾಮ
ಅರೂಪ ಅಚಿಂತ್ಯವೆಂದು
ಕಲ್ಪಿಸುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 110 ॥

111

ಪರಮಸತ್ ಎಂಬುದು ಸತ್ಯಾಸತ್ಯವೆಂಬ ವಿಭಾಗಕ್ಕೆಡೆಕೊಡದ್ದು
ಅವಿಭಾಗದೋಳ್ ದ್ವೈತಾದ್ವೈತವೆಂಬ ಭಾವಕ್ಕಿಂಬುಂಟೆ
ಪರಮಸತ್‌ದೋಳ್ ದೇಹ ಇಂದ್ರಿ ಪ್ರಾಣ
ಮನಾದಿಗಳು ಇವೆಯೆ
ನಿರಂಜನ ಪ್ರಭು ನಾಗೇಶ್ವರಾ ॥ 111 ॥

112

ಸದ್ವಸ್ತು ಇದ್ದಕ್ಕಿದ್ದಂತಿರುವ ಅಬಾಧಿತ ಘನ

ಅಲ್ಲಿ ಕಾಣಿಸಿಕೊಳ್ಳುವ ದೇವನಿಲ್ಲ ಕಾಣುವ ಭಕ್ತನಿಲ್ಲ
ಬಿಡುವುದಾವುದು ಹಿಡಿವುದಾವುದು
ಇದ್ದುದಾವುದು ಇಲ್ಲದುದು ಆವುದು
ಇಲ್ಲವೆಂಬುದು ಇಲ್ಲವಾಗುವುಡೆ ಆಗ ದೇಹ ಇಂದ್ರಿಯ ಪ್ರಾಣ
ಮನಾದಿಗಳು ಅನೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 112 ||

113

ಅನೃತವೆಂಬುದು ತನಗದು ಸಿದ್ಧವಾದಲ್ಲಿ ಪರಮ ಸತ್ಯವು ತಾನೆ
ಅಲ್ಲಿ ಪ್ರಮಾತೃ ಪ್ರಮಾಣ ಪ್ರಮೇಯವೆಂಬ ತ್ರಿಪುಟಿಯಿಲ್ಲ
ಅಲ್ಲಿ ಬಾಧೆಯೂ ಇಲ್ಲ ಭೇದವೂ ಇಲ್ಲ
ಬೋಧವೂ ಇಲ್ಲ ಇದ್ದಕ್ಕಿದ್ದಂತಿರುವ
ತನ್ನೋಳ್ ದೇಹ ಇಂದ್ರಿ ಪ್ರಾಣ ಮನಾದಿಗಳೂ
ಅಂದು ಇಲ್ಲ ಇಂದು ಇಲ್ಲ ಎಂದೆಂದೂ ಇಲ್ಲ
ನಿರಂಜನ ಪ್ರಭು ನಾಗೇಶ್ವರಾ || 113 ||

114

ಆತ್ಮ ಸತ್ಯಾಸತ್ಯವೆಂಬ ವಿಭಾಗದಿಂದುಕ್ತ ನಾದವನಲ್ಲ
ಅದು ಕೊನೆ ಮೊದಲಿಲ್ಲದ ಏಕವು ಅಖಂಡವು
ಅಲ್ಲಿ ಒಳಗೆಂಬುದಿಲ್ಲ ಹೊರಗೆಂಬುದಿಲ್ಲ
ಧ್ಯಾತಾ ಧ್ಯಾನ ಧ್ಯೇಯಕ್ಕೆಡೆಯುಂಟೆ
ನಿರಂಜನ ಪ್ರಭು ನಾಗೇಶ್ವರಾ || 114 ||

115

ನಿರವಯ ನಿತ್ಯಾನಂದ ನಾನಾಗಿರುವಲ್ಲಿ ನಾನಾವ ಕರ್ಮಮಾಡಲಿ
ನಾನಾವುದನ್ನು ಅಪೇಕ್ಷಿಸಲಿ
ವಿಶುದ್ಧ ಅವ್ಯಯ ಅಜ ನಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 115 ||

116

ಅಸ್ತಿ ಭಾತಿಯೋಳ್ ನಾಮರೂಪ ಜಗವು ಇದೆಯೆ
ಅಕಲಂಕದೋಳ್ ಕಲಂಕವಿದೆಯೆ
ಇಲ್ಲದುದು ಇಲ್ಲ ಇಲ್ಲ ಇದ್ದ ನಿಷ್ಕಳಂಕ

ಅಂದು ಇಂದು ಎಂದೆಂದೂ ಇದ್ದಂತಿಹುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 116 ||

117

ಸ್ವಮಹಿಮ್ನ ತಾನಾಗಿರುವದರಿಂದ ಸಾಮಾನ್ಯಜ್ಞಾನ
ಭ್ರಾಂತಿಜ್ಞಾನ ಬ್ರಹ್ಮಜ್ಞಾನ ತನ್ನಿಂದ ಸಿದ್ಧವಾಗುವದರಿಂದ
ಸ್ವತಃ ಸಿದ್ಧ ಪರತತ್ವ ತಾನೆ ಉಪಮಾತೀತ ಘನವು
ತನಗೆ ಗೊತ್ತು ಗೊತ್ತಿಲ್ಲವೆಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 117 ||

118

ತಾನಾರೆಂದರಿಯಲು ಸಕಲ ಜ್ಞಾನಕ್ಕಾಧಾರ ತಾನಾಗಿರುವಲ್ಲಿ
ತನಗಾವ ಶೃತಿಗಳು ಸ್ಮೃತಿಗಳು
ನಿರ್ವಿಕಾರ ನಿರುಪಮ ನಿಸ್ಸೀಮ ತಾನೆ
ತನ್ನೊಳ್ ಆದುದಿಲ್ಲ ಹೋದುದಿಲ್ಲ
ಅಚಿಂತ್ಯ ಅಪ್ರಮಾಣ ತಾನಿರುವಲ್ಲಿ
ನನಗೆ ಗೊತ್ತಿಲ್ಲ ಗೊತ್ತಿದೆ ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 118 ||

119

ಎಲ್ಲರ್ರಿಗೆಲ್ಲಿಯದೊ ಸಮ್ಯಕ್ ದೃಷ್ಠಿ ಇದ್ದುದ ಮರೆತು
ಇಲ್ಲದ ವಿಕಲ್ಪ ಕಲ್ಪಿಸಿ ಮಾಯಾ ಮಾಯಾ ಎಂದು ಕೂಗಿದರೆ
ಅದು ಮಾಯೆಯೆ ಛಾಯೆಯೆ
ಮಾಯೆಯು ಇಲ್ಲ ಛಾಯೆಯು ಇಲ್ಲ
ಇದ್ದಕ್ಕಿದ್ದಂತಿರುವ ಚಿನ್ನಿಧಿ ಗಗನಾಕಾರದಂತಿದೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 119 ||

120

ಸರ್ವಾತ್ಮ ದೃಷ್ಠಿ ಸರ್ವರಿಗದೆಂತು ಸಾಧ್ಯ
ಇದ್ದುದು ಇದ್ದಕ್ಕಿದ್ದಂತಿದ್ದುದು
ಇಲ್ಲದ ವಿಕಲ್ಪಮಾಡಿದಲ್ಲಿ ಸರ್ವಾತ್ಮದೃಷ್ಠಿಯೆ
ಅದು ಏನನ್ನು ಮಾಡದ ದೃಷ್ಠಿ ಇದ್ದಕ್ಕಿದ್ದಂತಿದ್ದ
ಗಗನಾಕಾರದಂತಿರುವ ಅವಿರಳ

ಅಲ್ಲಿ ಭಾದಾ ಇಲ್ಲ ಭೇದವೂ ಇಲ್ಲ ಅಭೇದವೂ ಇಲ್ಲ
ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 120 ॥

121

ಚಿದಾಕಾಶದೋಳ್ ಜಡ ಚೇತನದಿಂ
ಕಾಣಿಸುವ ದೃಶ್ಯ ದೃಕ್ ನಿಜವೆ
ನಿರ್ವಿಕಾರದೋಳ್ ರೂಪಾರೂಪವೆಂಬುದಿದೆಯೆ
ಇಲ್ಲದುದು ಇಲ್ಲವೆ ಇಲ್ಲ ಇದ್ದ ಚಿದ್ಘನ ಇದ್ದಂತಿರುವದರಿಂದ
ಜಗವೆಂಬುದು ಶಿವಮಯವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 121 ॥

122

ನಿರ್ಮಾಯದೋಳ್ ಮಾಯೆ ಉಂಟೆ
ಇಲ್ಲದುದ ಕಲ್ಪಿಸಿ ಅದೇಕೆ ಕೂಗುವದು
ಇರುವದೊಂದೆ ಚಿನ್ಮಯದೋಳ್
ರೂಪವೂ ಇಲ್ಲ ನಾಮವೂ ಇಲ್ಲ
ಅದು ಗಗನದಂತೆ ಅಚಿಂತ್ಯಾತ್ಮವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 122 ॥

123

ಪೂರ್ಣವು ಅಪೂರ್ಣವಾಗದದ್ದರಿಂದ ಅಲ್ಲಿ ದೇಶವಾವುದು
ಕಾಲವಾವುದು ವಸ್ತು ಆವುದು ಅದು ಏಕ ಏವ ಅದ್ವಯವು
ನಿರಂತರವು ನಿರಾಲಂಬವು ನಿಸ್ಸೀಮವು ಜ್ಞಾನಾನಂದ ಏದ್ದುದರಿಂದ
ಪಂಚಭೂತಗಳಾವು ಇಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 123 ॥

124

ಅಕಲ್ಪಿತನು ಕಲ್ಪಿತನೆ ಕಲ್ಪಿತನಿದ್ದಲ್ಲಿ ಕಲ್ಪನೆ ಕುರುಹುಗಳುಂಟು
ಕುರುಹು ಇದ್ದಲ್ಲಿ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕನೆಂದೆನ್ನಬಹುದು
ಅಲ್ಲಿ ಏನೇನೂ ಇಲ್ಲ ಅದನ್ನು ಆನಂದ ನಿರಾನಂದವೆಂದು
ತಿಳಿಯುವದಾದರೂ ಅದೆಂತು
ನಿರಂಜನ ಪ್ರಭು ನಾಗೇಶ್ವರಾ ॥ 124 ॥

125

ಆತ್ಮಾ ಯೋಗಾದಿಗಳಿಂ ಶುದ್ಧವಾಗುವನೆ
ಮನೋ ನಾಶದಿಂ ಶುದ್ಧವಾಗುವನೆ
ಶುದ್ಧಾಶುದ್ಧವಾಗಲು ಬಾರದ ಸ್ವತಃ ಸಿದ್ಧ ಪರವಸ್ತು
ಇದ್ದಕ್ಕಿದ್ದಂತಿದ್ದುದನೇನೆಂಬೇನೆಂಬೆ
ನಿರಂಜನ ಪ್ರಭು ನಾಗೇಶ್ವರಾ || 125 ||

126

ವಿಮಲನಾದವಂಗೆ ಅದಾವ ಯೋಗದಿಂ ಶುದ್ಧ ಮಾಡುವದು
ನಿರ್ವಿಕಲ್ಪನಿಗೆ ಮನವಿದ್ದರೇನು ಮನ ನಾಶವಾದರೇನು
ನಿರಾವರಣನಿಗೆ ಅದಾವ ಬೋಧದಿಂ ಶುದ್ಧಮಾಡುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 126 ||

127

ಆತ್ಮಾ ಅಂದು ಇಂದು ಎಂದೆಂದೂ
ಇದ್ದಂತಿರುವ ನಿರ್ವಿಕಾರ ಘನ ನೋಡಾ
ಅಲ್ಲಿ ಮನಕ್ಕಿಂಬಿಲ್ಲ ಯೋಗಕ್ಕೆಡೆಯಿಲ್ಲ ಬೋಧಕ್ಕೆ ಪ್ರವೇಶವಿಲ್ಲ
ಅದು ಕೆಡದು ನೆಟ್ಟಗಾಗದು
ಅರಿವುಡೆ ನಿರಾಲಂಬ ನಿಜಾನಂದ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 127 ||

128

ಚಿದ್ಘನನಾದ ನಾನು
ಅಹಂಕಾರಿಯಲ್ಲ ನಿರಹಂಕಾರಿಯಲ್ಲ ಗುಣಿಯಲ್ಲ
ಗುಣಗಂಧಾತ್ಮನಲ್ಲ ಅಲ್ಪಜ್ಞನಲ್ಲ ಸರ್ವಜ್ಞನಲ್ಲ
ಗಗನದಂತಿರುವ ಜ್ಞಾನ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 128 ||

129

ನಾನು ವಿಸ್ಮೃತಿಯುಳ್ಳವನಲ್ಲ ಸ್ಮೃತಿಯುಳ್ಳವನಲ್ಲ
ಕರ್ತೃವಲ್ಲ ಭೋಕ್ತೃವಲ್ಲ
ನನ್ನೊಳ್ ಮಾಯಿಕಕ್ಕಿಂಬಿಲ್ಲ, ಅಹುದಾದುದಿಲ್ಲ ಅಲ್ಲಾದುದಿಲ್ಲ

ನಾನೆಂಬುದು ಎಂದೆಂದೂ ನನ್ನೊಳ ಇಲ್ಲವಾದ್ದರಿಂದ
ಪರತತ್ವಕ್ಕಿಂತ ಬೇರಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 129 ॥

130

ಬ್ರಹ್ಮಸ್ವರೂಪವು ನನ್ನಸ್ವರೂಪವಾದ್ದರಿಂದ ಬ್ರಹ್ಮಕ್ಕಿಂತ ನಾನು ಬೇರಲ್ಲ
ಬ್ರಹ್ಮವು ಅವಾಙ್ಮನಸಗೋಚರ ನನ್ನ ಸ್ವರೂಪವು
ಅವಾಙ್ಮನಸಗೋಚರ ಶೃತಿಗಳಿಂದ ಬ್ರಹ್ಮಸಿದ್ದವಾಗದು
ನನ್ನ ಸ್ವರೂಪವು ಶೃತಿಗಳಿಂದ ಸಿದ್ಧವಾಗದು
ಸಕಲ ತತ್ವಂಗಳು ಬ್ರಹ್ಮದಿಂದ ಸಿದ್ಧವಾಗುವವು
ಬ್ರಹ್ಮವೆಂಬುದು ನಾನು
ನಾನೆಂಬುದು ಬ್ರಹ್ಮವಾದ್ದರಿಂದ ಏಕಮೇವಾ
ದ್ವಿತೀಯ ಘನವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 130 ॥

131

ಪುರುಷೋತ್ತಮನಾದ ನನಗೆ ಪ್ರಕೃತಿಯು ಸತ್ತಾಸ್ವರೂಪವು
ಪುರುಷನು ಸತ್ತಾ ಸ್ವರೂಪ ಸತ್ತಾ ಎಂಬುದು ಸತ್‌ಸ್ವರೂಪ
ಜಲವು ಜಲದೊಂದಿಗೆ ಬೆರೆಯಲು ಜಲವೆ ಸತ್ತೆಯು
ಸತ್‌ಸ್ವರೂಪವೆಂದರಿಯಲು ಪುರುಷೋತ್ತಮನು
ಅಲ್ಲಿ ಪ್ರಕೃತಿ ಪುರುಷರೆಂಬ ಭಿನ್ನತೆಯಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 131 ॥

132

ಇರುವುದೊಂದೆ ಚಿದಾಕಾಶದೊಳ್
ಚಿಚ್ಛಕ್ತಿ ಆವುದು ಚಿದಾಭಾಸ ಆವುದು
ನಿಸ್ಸೀಮೆಯು ಸೀಮೆಯುಳ್ಳದ್ದಾಯಿತೆ
ಇದು ಪ್ರಮಾದ ದೃಷ್ಟಿಗೆ ಬೇರಾಗಿ ತೋರಿದರೂ
ಸಮ್ಯಕ ದೃಷ್ಠಿಗೆ ಇರುವದೊಂದೆ
ಚಿಚ್ಛಕ್ತಿ ಚಿದಾಭಾಸರಲ್ಲಿ ಭಿನ್ನತೆಯಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 132 ॥

133

ಇದ್ದುದೊಂದೆ ಸತ್‌ಸ್ವರೂಪ
ಪ್ರಮಾದ ದೃಷ್ಟಿಗೆ ನಾನಾರೂಪವಾಗಿ ಭಾಸಿಸಿದರೂ
ಸಮ್ಯಕ ದೃಷ್ಟಿಗೆ ಏನೊಂದಾದುದಲ್ಲ ಹೋದುದಲ್ಲ
ಇದ್ದಂತಿರುವ ತಾನೆ
ಅಲ್ಲಿ ಪ್ರಕೃತಿ ಪುರುಷನೆಂಬ ಭಿನ್ನತೆ ಇಲ್ಲ
ನಿರಂಜನ ಪ್ರಭು ನಾಗೇಶ್ವರಾ || 133 ||

134

ನಾನು ನಾನೆ ನನ್ನೊಳ್ ನನಗಿಂತನ್ಯ ವಿರಲಿಂಬುಂಟೆ
ನಾನೆ ಪ್ರಕೃತಿ ನಾನೆ ಪುರುಷ ನಾನೆ ಸಕಲ ನಾನೆ ನಿಃಕಲ
ನಾ ನಾನಾಗಿರುವದರಿಂದ
ನನಗೆ ಪ್ರಕೃತಿ ಪುರುಷನೆಂಬ ಭಿನ್ನತೆಯಿಲ್ಲ
ನಿರಂಜನ ಪ್ರಭು ನಾಗೇಶ್ವರಾ || 134 ||

135

ಆತ್ಮ ಒಂದೆ ಸತ್ಯವಾಗಿರುವಲ್ಲಿ ಅಲ್ಲಿ ಬದ್ಧರಾರು ಮುಕ್ತರಾರು
ವಿಸ್ಮೃತಿಯಿಂದುಕ್ತನಾಗಿ ಬಂಧನವುಳ್ಳವನಾಗಿ ಬದ್ಧನೆಂದರೂ ಅದುವೆ
ಸ್ಮೃತಿಯಿಂದುಕ್ತನಾಗಿ ಮುಕ್ತನೆಂದರೂ ಅದುವೆ
ಇದ್ದಂತಿರುವ ಅಖಂಡದೊಳ್
ಬದ್ಧ ಮುಕ್ತನೆಂದು ಭಾವಿಸಲಿಂಬುಂಟೆ
ನಿರಂಜನ ಪ್ರಭು ನಾಗೇಶ್ವರಾ || 135 ||

136

ಸತ್ಯವಾಗಿರುವದೊಂದೆ
ಅಖಂಡಾತ್ಮನಲ್ಲಿ ಮುಕ್ತ ಬದ್ಧನೆಂದು ಭಾವಿಸಲಿಂಬುಂಟೆ
ಇಂಬಿಲ್ಲದುದರೊಳ್ ವಿಸ್ಮೃತಿಯುಳ್ಳವರಾರು
ಸ್ಮೃತಿಯುಳ್ಳವರಾರು
ಬದ್ಧರುಂಟೆ ಮುಕ್ತರುಂಟೆ
ಇಲ್ಲದುದು ಇಲ್ಲವಾದಲ್ಲಿ ಇದ್ದಂತಿದ್ದ ಘನದೊಳ್
ಸಗುಣ ನಿರ್ಗುಣವೆಂದು ಮಾಯೆ
ರಚಿಸಿದುದು ಆಶ್ಚರ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 136 ||

137

ಅಮರತ್ವವ ಮರೆತು ಹುಟ್ಟು ಸಾವುಳ್ಳ ದೇಹ ನಾನೆಂಬುದು
ನನಗಿದು ಭ್ರಾಂತಿಯೆಂಬುದು ಗೊತ್ತಾಗದೆ
ಗಗನದಂತಿರುವ ಚೈತನ್ಯನು
ನಿರ್ವಿಕಾರನೆಂಬ ನಿನ್ನಿರವು ನಿನಗಿದು ಗೊತ್ತಾಗದೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 137 ॥

138

ಭಾವಾತೀತ ತಾನಿದ್ದು ತಾನು ಭಾವವುಳ್ಳವನೆಂಬ ಭಾವಿಕತನವು
ತನಗಿದು ಭ್ರಾಂತಿಮಯವೆಂಬುದು ಗೊತ್ತಾಗದೆ
ತಾನು ಸಕಳಭಾವಗಳಿಗೆ ಮೀರಿರುವದರಿಂದ
ತನ್ನೊಳ ಆವಾವ ಭಾವಂಗಳು ಇಲ್ಲವೆಂಬ
ತನ್ನ ಘನತ್ವದಿಂದ ತನಗಿದು ಗೊತ್ತಾಗದೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 138 ॥

139

ಕಲ್ಪನಾತೀತ ತಾನಿದ್ದು ಕಲ್ಪಿತನಾಗಿ
ದಶಭಾವವುಳ್ಳ ಭಾವಿಕತನವು ತನಗಿದು ಸರಿಯೆ
ತಾನು ಜ್ಞಾನಾಜ್ಞಾನಂಗಳಿಗೆ ಮೀರಿರುವಾಗ
ತಾನು ಜ್ಞಾನಿಯೆಂದು ಅಜ್ಞಾನಿಯೆಂದು ಅರಿತೆ ಅರಿಯೆನೆನ್ನುವದು
ತನಗಿದು ಯತಾರ್ಥವೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 139 ॥

140

ತಾನಾರೆಂದರಿವುಡೆ ತನ್ನಿಂದರಿಸಿಕೊಳ್ಳುವದೆಲ್ಲವು ಭ್ರಾಂತಿಮಯವು
ತನಗಿದು ಗೊತ್ತು
ತಾನು ಗಗನದಂತಿರುವ ಚೈತನ್ಯಮಯನೆಂಬುದು
ತನಗಿದು ಗೊತ್ತು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 140 ॥

141

ಗಗನದಂತಿರುವ ಜ್ಞಾನಮಯನಾದ ನನಗೆ
ಒಮ್ಮೆ ಕಂಡು ಒಮ್ಮೆ
ಕಾಣದಂತಾಗುವ ಗುರು ಉಂಟೆ ಉಪದೇಶ ಉಂಟೆ

ಅಖಂಡನಾದ ನನಗೆ
ಉಪಾಧಿಯು ಇಲ್ಲ ಕ್ರಿಯೆಯು ಇಲ್ಲ
ಸ್ವಭಾವತಃ ಅಚಿಂತ್ಯಾತ್ಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 141 ॥

142

ದೇಹ ನಾನೆಂಬುವಂಗೆ ಗುರುವು ಉಂಟು ಉಪದೇಶ ಉಂಟು
ಉಪಾಧಿ ಉಂಟು ಕ್ರಿಯೆಯುಂಟು
ಗಗನದಂತಿರುವ ಅಖಂಡೈಕರಸ
ಕೇವಲ ಅರುವು ಈ ಅರುವು ಅರಿಯದರವು
ಇದು ಏನನ್ನು ಅರಿಯದ ಅರುವಾದ್ದರಿಂದ
ಇಲ್ಲಿ ಗುರುವೂ ಇಲ್ಲ ಉಪದೇಶವೂ ಇಲ್ಲ
ದೇಹ ದೇಹಿ ಎಂಬ ವಿಭಾಗವಿಲ್ಲ ನಿತ್ಯಾನಿತ್ಯವೆಂಬ ವಿಚಾರವಿಲ್ಲ
ಇದ್ದಂತಿರುವ ಚಿನ್ನಿಧಿ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 142 ॥

143

ಪೂರ್ಣನಾದ ನಾನು ಸಕಲದೋಳ್ ತುಂಬಿತುಳಕದಂತಿರುವೆ
ನನ್ನ ಕಾಂತಿಗೆ ಕುಂದುಂಟೆ
ನನ್ನೊಳ ಜ್ಞಾನಾ ಜ್ಞಾನಗಳು
ಉದಯಾಸ್ತಗಳಿಗಿಂಬಿಲ್ಲ ದಿರುವಾಗ ನನಗೆ ಗುರುವಾರು
ಉಪದೇಶವಾವುದು ನಿರವಯ ನಿರುಪಾಧಿಯಾದ ನನಗೆ
ಕ್ರಿಯೆ ಉಂಟೆ
ಸ್ವಭಾವತಃ ನಾನು ಚಿನ್ಮಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 143 ॥

144

ಏಕಮೇವಾದ್ವಿತೀಯ ಘನವು, ಅದು ನಿಸ್ಸೀಮವು ನಿರಂತರವು
ನಿಸ್ಸೀಮವು ಸೀಮೆಯುಳ್ಳುದೆ ಪೂರ್ಣವು ಅಪೂರ್ಣವಾಗುವುದೆ?
ಏ ಮನವೆ ನಿಜವಾಗಿ ನೀನು ಅರುವು
ನಿನ್ನೊಳ್ ಕಲೆಯು ಇಲ್ಲ ಕಲ್ಪನೆಯೂ ಇಲ್ಲ
ನಿರಂಜನ ಪ್ರಭು ನಾಗೇಶ್ವರನೆಂಬ ಕಲ್ಪನಾತೀತವಾದ

ಅದ್ವೈತಾಮೃತವ ಸ್ವೀಕರಿಸು || 144 ||

145

ನಿರ್ವಿಕಲ್ಪವು ವಿಕಲ್ಪವುಳ್ಳುದೆ ಅಲ್ಲಿ ವಿಕಲ್ಪಕ್ಕೆಡೆಯಿಲ್ಲದಿರುವಲ್ಲಿ
ಏ ಮನವೆ ನೀನಾವಾಗ ಸಂಕಲ್ಪ ವಿಕಲ್ಪಕ್ಕೊಳಪಟ್ಟೆ ನಿಜವಾಗಿ ನೀನು
ನಿರಂಜನ ಪ್ರಭು ನಾಗೇಶ್ವರನು ನೀನಾವಾಗ ವಿಕಲ್ಪಕ್ಕತೀತನಾಗಿ
ನೋಡುವುಡೆ ಆಗ ನಿನಗೀಗ ಬೋಧವು ಸ್ವತಃ ಸಿದ್ಧಿಸುವದು || 145 ||

146

ನಿರ್ವಿಕಾರವು ವಿಕಾರವುಳ್ಳುದೆ ಅಲ್ಲಿ ಅಂಗನೆಂಬುಕ್ಕಿಂಬಿಲ್ಲದಿರುವಾಗ
ನೀನಾವಾಗ ಒಡಲುಳ್ಳವನಾದೆ ಹೃದಯವೆಂಬುದು ಅರುವು
ಅದು ನಿರವಯ ನಿಜವಾಗಿ ನೀನು ಅಶರೀರ ಇರುವದರಿಂದ
ನಿರಂಜನ ಪ್ರಭುವಿನ ಜ್ಞಾನಾಮೃತವ ಸ್ವೀಕರಿಸು || 146 ||

147

ಆತ್ಮಸಾಕ್ಷಾತ್ಕಾರವೆಂಬುದು ತಾನೆ
ಅಂದು ಇಂದು ಎಂದೆಂದೂ ತಾನೆ
ಪೂರ್ಣಾತ್ ಪೂರ್ಣವು ತಾನೆ
ತಾನು ಜ್ಞಾನಾಜ್ಞಾನಕ್ಕೂ ಮೀರಿದ ಘನ
ತನ್ನಂ ಇದ್ದಕ್ಕಿದ್ದಂತೆ ತಿಳಿವುದೆಯತಾರ್ಥಜ್ಞಾನ
ಈ ಜ್ಞಾನ ಯಾರಿಗೆ ಪ್ರಾಪ್ತವಾಗಿದೆ
ಅವರು ಅನುಪಮರು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 147 ||

148

ಸ್ವರೂಪ ಸಾಕ್ಷಾತ್ಕಾರವೆಂಬುದು ಸ್ವತಃ ಸಿದ್ಧ ತಾನೆ ತಾನಿದ್ದು
ತನ್ನ ಸ್ವರೂಪ ಪ್ರಾಪ್ತಿ ಅಪ್ರಾಪ್ತಿ ಎನಲುಂಟೆ
ಪ್ರಾಪ್ತಿ ಅಪ್ರಾಪ್ತಿ ಎಂಬುದು ಮಾಯಿಕ
ತಾನು ನಿರಂತರ ಇದ್ದಂತಿರುವ ಅಖಂಡೈಕರಸ
ಅಲ್ಲಿ ಕಂಡೆ ಕಾಣೆ ಕೂಡಿದೆ ಅಗಲಿದೆನೆಂಬುದಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 148 ||

149

ಸ್ವಯ ಸಾಕ್ಷಾತ್ಕಾರವೆಂಬುದು ತನ್ನ ಇದ್ದಕ್ಕಿದ್ದಂತರಿವುದೆ ಸಾಕ್ಷಾತ್ಕಾರ
ತಾನು ಇದ್ದಂತಿರುವ ಘನ ತನ್ನೊಳ್ ನುಡಿಗೆಡೆಯಿಲ್ಲ ನಡೆಗಿಂಬಿಲ್ಲ
ಭಾವಕ್ಕಿಂಬಿಲ್ಲ ಜ್ಞಾನಾಜ್ಞಾನ ವಿಭಾಗವಿಲ್ಲ ಅಲ್ಲಿ ಮರವಿನ ವಿಸ್ಮೃತಿ
ಇಲ್ಲ ಅರುವಿನ ಸ್ಮೃತಿಯಿಲ್ಲ ಏನೇನೂ ಇಲ್ಲ ತನ್ನಂ ಅಸ್ತಿ ನಾಸ್ತಿ
ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 149 ॥

150

ಸಾಕ್ಷಾತ್ಕಾರವೆಂಬುದು ಆದುದಲ್ಲ ಹೋದುದಲ್ಲ ಅಂದು ಇಂದು
ಎಂದೆಂದೂ ಇದ್ದಂತಿರುವ ಘನ
ಘನ ಮಹಿಮನೇ ತಾನಾದುದರಿಂದ
ಆದುದನರಿಯೆ ಹೋದುದನರಿಯೆ
ಏನೊಂದಾಗದ ಅಪ್ರಮಾಣವೆಂಬುದು ನಿನ್ನಿಂದ ನೀನೆ ಅರಿ
ನಿರಂಜನ ಪ್ರಭು ನಾಗೇಶ್ವರಾ ॥ 150 ॥

151

ಜ್ಞಾನವೆಂಬುದು ಜ್ಞೇಯವು ಇದು ಅಖಂಡವು
ಇಲ್ಲಿ ಆವಾವ ಅವಸ್ಥೆಗಳಿಲ್ಲ
ಸ್ಥಿತಿಯಿಲ್ಲ ಮತಿಯಿಲ್ಲ ವಾದವಿಲ್ಲ ವಿವಾದವಿಲ್ಲ
ಇದ್ದಂತಿರುವ ಜ್ಞಾನಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 151 ॥

152

ಸ್ಥಿತಿಗತಿಗೆ ಮೀರಿದ ಘನವು ಈ ಘನಕ್ಕೆ ಸ್ಥಿತಿಯನರಸುವದು
ಕಂಡು ವಿಸ್ಮಯವಾಯಿತ್ತು ಅಪ್ರಮಾಣ ತಾನೆ ತನ್ನೊಳ್
ಭೇದವೂ ಇಲ್ಲ ಅಭೇದವೂ ಇಲ್ಲ ಕಲ್ಪಿತನಿಲ್ಲ ಕಲಿತನವಿಲ್ಲ
ಕಳಕೊಂಡುದಿಲ್ಲ ಪಡೆದುದಿಲ್ಲ ಅಲ್ಲಿ ಭೂಮಿಕೆಗಳನರಸುವರೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 152 ॥

153

ಜ್ಞಾನವು ಜ್ಞಾನದಂತಿದ್ದಿತ್ತು ನೋಡಾ
ಅಲ್ಲಿ ನಾನೆಂಬುದಿಲ್ಲ ನೀನೆಂಬುದಿಲ್ಲ

ವಿದ್ಯೆಯು ಇಲ್ಲ ಅವಿದ್ಯೆಯು ಇಲ್ಲ ವಿದ್ಯಾವಿದ್ಯೆಯು ಇಲ್ಲ
ಏನೇನೂ ಇಲ್ಲ ಇದ್ದಂತಿರುವ ನಿಸ್ಸೀಮ ಜ್ಞಾನ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 153 ||

154

ಹುಟ್ಟುವಾತ ನಾನಲ್ಲ ಲಯಿಸುವಾತ ನಾನಲ್ಲ ಪುಣ್ಯಪಾಪವಿಲ್ಲಾಗಿ
ಶುಭಾಶುಭಂಗಳಿಲ್ಲ ಒಡಲಿಲ್ಲಾಗಿ ಬಂಧ ಮೋಕ್ಷವಿಲ್ಲ
ಕೇವಲ ಅರುವೆ ತನ್ನಿರವು ಎಂಬುದು ಕರಿಗೊಂಡಲ್ಲಿ ನಿರಂಜನ ಪ್ರಭು
ತನಗಿಂತ ಬೇರೆಂದು ನುಡಿಯಲಿಂಬಿಲ್ಲ ಇದನೇನೆಂಬೇನೆಂಬೆ || 154 ||

155

ನಿರ್ಭಾವವೆಂಬುದು ಭೇದಾಭೇದ ನಿರ್ಮುಕ್ತ ಶಿವ
ಅಲ್ಲಿ ರೂಪವೆಂಬುದಿಲ್ಲ ಅರೂಪವೆಂಬುದಿಲ್ಲ
ವಿಚಾರವಿಲ್ಲ ಅವಿಚಾರವಿಲ್ಲ
ಸಾಕಾರ ನಿರಾಕಾರವೆಂಬ ನೇತಿ ನೇತಿ ಮುನ್ನಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 155 ||

156

ಅಜಾತಂಗೆ ತಂದೆಯಾರು ತಾಯಿಯಾರು
ಅತೀಂದ್ರಿಗೆ ಸತಿಯಾರು ಸುತರಾರು
ಭೋಗವಾವುದು ತ್ಯಾಗವಾವುದು
ಸಮ ಸ್ವರೂಪಂಗೆ ತನ್ನವರಿಲ್ಲ ಅನ್ಯರಿಲ್ಲ ರಾಗವಿಲ್ಲ ವಿರಾಗವಿಲ್ಲ
ತಾನು ಸಹಜ ಸದಾನಂದ ಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 156 ||

157

ಚಿತ್ಪ್ರಭೆಗೆ ಹಗಲಾವುದು ರಾತ್ರಿಆವುದು
ಅಚಿಂತ್ಯನಿಗೆ ಚಿಂತಿ ನಿಶ್ಚಿಂತಿ ಉಂಟೆ
ವಿದೇಹಿಗೆ ದೇಹ ದೇಹಿ ಎಂದು ಕಲ್ಪಿಸುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 157 ||

158

ಮರವಿಂಗೆ ಹಗಲುಂಟು ರಾತ್ರಿಉಂಟು

ಅರುವಿಂಗೆ ಅರಿತವರಾರು ಅರಿಯದವರಾರು
ವಿಸ್ಮೃತಿಗೆ ಭಯವುಂಟು ಭವ ಉಂಟು
ಸ್ಮೃತಿಗೆ ಅರುವುಂಟು ಗುರುವುಂಟು ಸುಖವುಂಟು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 158 ||

159

ಒಂದೆಂದಲ್ಲಿ ಎರಡುಂಟು ಎರಡೆಂದಲ್ಲಿ ಒಂದುಂಟು
ಅಂದುದೆಲ್ಲ ಕೃತ್ರಿಮ ಅಕೃತ್ರಿಮವೆಂಬುದು
ಏನೊಂದುಸುರಲು ಎಡೆಗೊಡದ ಘನ
ಅಲ್ಲಿ ಎರಡು ಒಂದು
ಸಾಕಾರ ನಿರಾಕಾರ ಭಾವ ನಿರ್ಭಾವವೆಂದುಸುರಲು
ಇಂಬುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 159 ||

160

ಕೂಟಸ್ಥ ಕೂಡಿದುದಲ್ಲ ಅಗಲಿದುದಲ್ಲ
ಅದನ್ನು ಉಪಾಧಿಯುಳ್ಳದು
ಉಪಾಧಿ ರಹಿತವೆಂದು ಹೇಗೆ ಹೇಳುವದು
ಅವಿಭಾಗವು ವಿಭಾಗವುಳ್ಳದ್ದಾಯಿತೆ
ಅಲ್ಲಿ ತ್ವಂ ಪದ ತತ್ವದ ಅಸಿ ಪದವಾವುದೊ ನಾನರಿಯೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 160 ||

161

ಅಖಂಡವೆಂಬುದು ಇದ್ದಂತಿರುವ ನಿರಂತರ ಘನ
ಅಲ್ಲಿ ಮತಾಂತರಗಳಿಲ್ಲ ಪಕ್ಷಾಂತರಗಳಿಲ್ಲ ಭಾವವಿಲ್ಲ ಭಾವಿಕರಿಲ್ಲ
ಭವಿ ಇಲ್ಲ ಮುಕ್ತರಿಲ್ಲ ಇಲ್ಲಿ
ದ್ವೈತಿಗಳಾರೊ ಅದ್ವೈತಿಗಳಾರೊ ನಾನರಿಯೆ
ನಿರಂಜನ ಪ್ರಭು ನಾಗೇಶ್ವರಾ || 161 ||

162

ಅಕರ್ತನಿಗೆ ಕರ್ತೃತ್ವ ಉಂಟೆ ಅಭೋಕ್ತೃವಿಗೆ ಭೋಕ್ತೃತ್ವ ಉಂಟೆ
ನಿರ್ಹೇತುವಿಗೆ ಅದಾವ ಹೇತು ಅಲ್ಲಿ ಫಲಪದಂಗಳ ನರಸುವರೆ

ವಿದೇಹಿಗೆ ನಾನೆಂಬುದೆಲ್ಲಿ ನನ್ನದೆಂಬುದೆಲ್ಲಿಯದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 162 ॥

163

ಚಿನ್ಮಯನಾದ ನನ್ನಲ್ಲಿ ನಾನೀನೆಂಬುದಿಲ್ಲ ನನ್ನದು ನನ್ನದಲ್ಲವೆಂಬುದಿಲ್ಲ
ವಿಷಯವಿಲ್ಲ ವಿಷಯಿಇಲ್ಲ ಇಂದ್ರಿಯಂಗಳಿಲ್ಲ ರಾಗ ದ್ವೇಷಮುನ್ನಿಲ್ಲ
ಗಗನದಂತಿರುವ ಜ್ಞಾನಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 163 ॥

164

ನಿರುಪಮ ನಿರ್ಭೇಧ್ಯನಾದ ನನಗೆ ಮರೆಯುವದಿಲ್ಲ ಅರಿವುದಿಲ್ಲ
ರಾಗ ವಿರಾಗಗಳನರಿಯೆ ಬಂಧವಾವುದು ಮೋಕ್ಷವಾವುದು
ನನ್ನೊಳ್ ದೇಹಾದಿಗಳು ಅಳಿದುದಿಲ್ಲ ಉಳಿದುದಿಲ್ಲ
ವಿಶಾಲ ಗಗನದಂತಿರುವ ಭೂಮಾ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 164 ॥

165

ಸ್ವೀಕರಿಸು ಸದ್ಗುರು ಕರುಣಾ ಜಲವ ಸ್ವೀಕರಿಸು
ಇದರಿಂದ ಕರಣಂಗಳು
ಕರುಣಾಮಯವು ಕರುಣಾಮೃತವು ಜ್ಞಾನಾಮೃತವು
ಜ್ಞಾನಾನಂದ ಘನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 165 ॥

166

ಸುಖಾಸಕ್ತ ಮನವೆ ಈ ಸಾರಭೂತ ಸಂವಾದವ ಸೇವಿಸು
ಇದರಿಂದ ಜ್ಞಾನಾಂಗ ನೀನೆ ಜ್ಞಾನ ರತ್ನ ನೀನೆ
ಜ್ಞಾನದೇವ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 166 ॥

167

ಯೋಗಿಯು ಸಮಸ್ವರೂಪನು ಅಖಂಡಮೂರ್ತಿ
ತಾನೆತಾನಾದ ಘನ ಮಹಿಮಂಗೆ ದೇಶವಾವುದು
ಕಾಲವಾವುದು ಸ್ಥಳವಾವುದು

ಅನಿಯಮಂಗೆ ನಿಯಮಂಗಳೆ ಅಲ್ಲಿ ದೇಹ ಇದ್ದುದಲ್ಲ ಇಲ್ಲದಲ್ಲ
ತನ್ನೊಳ್ ತಾನೆ ತನ್ಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 167 ||

168

ವಿದೇಹಿಗೆ ವಿಧಿಗಳುಂಟೆ ಅಚಿಂತ್ಯನಿಗೆ ಇಹಪರದ ಚಿಂತನೆ ಉಂಟೆ
ಭಾವದ ಹಂಗು ಹರಿದವಂಗೆ ಶ್ರೇಷ್ಠವಾವುದು ಕೀಳಾವುದು
ಕಾಲಂಗಳ ಕಾಣದವಂಗೆ ಉತ್ತರಾಯಣ ದಕ್ಷಿಣಾಯಣವಾವುದು
ಯೋಗಿಯ ದೇಹ ಹೇಗೆ ನಶಿಸಿದರೂ
ಅದರ ಸಂಬಂಧವಿಲ್ಲ ಸಂಗವಿಲ್ಲ
ಇದ್ದಕ್ಕಿದ್ದಂತಿದ್ದ ಪರತತ್ವದೋಳ್ ತನ್ಮಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 168 ||

169

ಭಾವ ಬ್ರಹ್ಮವಾದವಂಗೆ ನೆನಹೂ ಇಲ್ಲ ನಿರ್ಣಯವೂ ಇಲ್ಲ
ಸಂಗ ನಿಸ್ಸಂಗವಾಗಿಪ್ಪವರು ಹೇಗಿದ್ದರೇನು
ಸ್ಮೃತಿಯಿಂದುಕ್ತರಾದರೇನು ಇರದಿದ್ದರೇನು
ಘನಮಹಿಮನಿದ್ದ ದೇಹ
ಅದು ಕಾಶಿ ಅವಿಮುಕ್ತ ಕ್ಷೇತ್ರ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 169 ||

170

ಅರುವರಿತು ಮರಹು ನಷ್ಟವಾಗಿ ಸ್ವಯ ಸುಖದಲ್ಲಿಪ್ಪಗಮ್ಯನಿಗೆ
ತೀರ್ಥವಾವುದು ಕ್ಷೇತ್ರವಾವುದು ಮನೆ ಆವುದು ಮಠವಾವುದು
ಪಾಪಿ ಆರು ಪುಣ್ಯಾತ್ಮನಾರು ಅಕಲಂಕನಿಗೆ ಕಲಂಕವೆ
ಅವನ ದೇಹ ಹೇಗೆ ನಶಿಸಿದರೂ ಕೈವಲ್ಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 170 ||

171

ತಾನಾರೆಂದರಿದವಂಗೆ ಮನೆಯೇನು ಮಠವೇನು
ಮನೆ ಮನದೊಳಿಲ್ಲ ಮನದೋಳ್ ಮಠವಿಲ್ಲ
ಮನವೆಂಬುದು ಮನೆ ಮಠವೆಂಬುದಿಲ್ಲ

ದದ್ವಯಾಲಯ ಅರುವಿನಾಲಯ ನಿಜಾಲಯ ತನ್ನಾಲಯವಾಗಿಪ್ಪ
ನಿಷ್ಕಳಂಕನು ಅವನೋಳ್
ಶರೀರ ಬದುಕಿದುದಿಲ್ಲ ಸತ್ತುದಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 171 ||

172

ಸವೆಯದ ಸುಖದಲ್ಲಿಪ್ಪಗಮ್ಯಂಗೆ
ಧರ್ಮವಾವುದು ಅರ್ಥವಾವುದು
ಕಾಮವಾವುದು ಮೋಕ್ಷವಾವುದ
ಚತುರ್ವಿಧ ಪುರುಷಾರ್ಥಗಳೇ
ಮೃಗ ಜಲದಂತೆ ಭಾಸಿಸುವಂಗೆ
ಸೃಷ್ಠಿ ತೋರಿದರೇನು ತೋರದಿದ್ದಡೇನು
ಅದು ಅತ್ಯಂತಾಭಾವ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 172 ||

173

ತಾನಾರೆಂದರಿತು ತನ್ನೋಳ್ ತಾನೆ ತಾನಾಗಿದ್ದ ಯೋಗಿಗೆ
ಹಿಂದಿನ ಈಗಿನ ಕರ್ಮಮಾಡುವದಾಗಲಿ
ಅದರ ಫಲ ಅನುಭವಿಸುವೆನೆಂಬ ಮತಿ ಎಲ್ಲಿಯದು
ಮತಿ ಗತಿಯಿಲ್ಲದ ಮಹಾಂತ
ಅಖಂಡ ಸುಖವೆ ತಾನಾದ ಮಹಿಮನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 173 ||

174

ಅನಾದಿ ಅನಂತ ಅಚಿಂತ್ಯಾತ್ಮ ತಾನೆಂಬ ಯೋಗಿಗೆ
ಗತಾಗತಕಾಲವಾವುದು
ಕರ್ಮವಾವುದು ಫಲಪದಂಗಳಾವವು
ಅಲ್ಲಿ ತ್ವಂಪದ ತತ್ವದಂಗಳ ಗಜಿಬಿಜಿ ಉಂಟೆ
ಚಿತ್ಪ್ರಕಾಶನು ಉದಯಾಸ್ತಗಳಿಲ್ಲದ ಘನ ಮಹಿಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 174 ||

175

ಅವಧೂತನೆಂಬುದು ಅಖಂಡವೆ ತಾನಾದ ಘನ ಚಿನ್ಮಯಾನಂದ
ದೋಳ್ ಸಮರಸ ಪೂತ ಅಲ್ಲಿ ಕಲ್ಪಿತನಿಲ್ಲ ಕಲ್ಪನೆಯಿಲ್ಲ ಕಲಿತನವಿಲ್ಲ
ವಾಸನೆಯಿಲ್ಲ ನಾನೀನೆಂಬುದಿಲ್ಲ ಅಹಮಿಲ್ಲದ ಚಿದ್ಘನ
ಸಕಲವು ತಾನೆ ನಿಷ್ಕಲವು ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 175 ॥

176

ಚಿಜ್ಯೋತಿಯಾದ ಯೋಗಿ ವರನ ಇರವು
ಉದಯಾಸ್ತವಾಗದ ಇರವು ಕಂದದ ಅರುವು ಕುಂದದ ಅರುವು
ಅಲ್ಲಿ ಜಾಗ್ರತ್ಇಲ್ಲ ಸ್ವಪ್ನವಿಲ್ಲ ಸುಷುಪ್ತಿ ಇಲ್ಲ
ಇವುಗಳಾಚೆಗಿರುವ ತೂರ್ಯವಾದರೂ ಇಲ್ಲ
ನಿರ್ಮಾಯನು ನಿರಾಲಂಬನು ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 176 ॥

177

ನಾನು ಶಿವ ಸರ್ವತ್ರ ಸದಾ ವ್ಯಾಪಕನಾಗಿರುವೆನೆಂಬ ಯೋಗಿಗೆ
ಅಂತರ ಬಹಿರ ಇಲ್ಲ ದೃಶ್ಯದೃಕ್ ಎಂಬುದಿಲ್ಲ ತಾನಿಲ್ಲ ಇದಿರಿಲ್ಲ
ಅಲ್ಲಿ ಬದ್ಧ ಮುಕ್ತಿಯ ಅರಸಲುಂಟೆ
ಭಾವಾತೀತನಿಗೆ ಭಾವವೆಲ್ಲಿಯದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 177 ॥

178

ಗುಣಾತೀತ ತಾನೆಂಬುದು ಕರಿಗೊಂಡವಂಗೆ ಅವಸ್ಥಾದಿಗಳುಂಟೆ
ಇಲ್ಲವೆಂದಲ್ಲಿ ಇಲ್ಲದುದು ಇಲ್ಲವಾದ್ದರಿಂದ
ಬದ್ಧ ಮುಕ್ತನಾಗುವ ಭಾವ ಅದೆಲ್ಲಿಯದು
ನಿರಂಜನ ಪ್ರಭು ನಾಗೇಶ್ವರಾ ॥ 178 ॥

179

ತಾನಾರೆಂಬರುವಿನ ಇರವು ಮಂತ್ರಾದಿಗಳಿಂದ ಲಭಿಸದು
ಕವಿತಾದಿಗಳಿಂದ ಲಭಿಸದು ಮಾಯಿಕ ತನದ ತಂತ್ರದಿಂದ
ಲಭಿಸದು ಭಾವ ಶುದ್ಧವಾಗುವುಡೆ ತನ್ನ ಸ್ವರೂಪ ದೋಳ್

ಸಮರಸನೆಂಬುದು ದತ್ತಾವಧೂತನ ಬೋಧವಿದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 179 ||

180

ಘನಕ್ಕೆ ಘನವಾವುದೊ ಅದುವೆ ಅಚಿಂತ್ಯಪದ ಇದು
ಕಪೋಲ ಕಲ್ಪಿತವಲ್ಲ ಸಕಲ ಶೃತಿಗಳ ಸಾರ ರೂಪ
ಸಶಾಸ್ತ್ರ ಸ್ವಾನುಭಾವದಾಧಾರವು ನೋಡಾ
ರಂಜನ ಪ್ರಭು ನಾಗೇಶ್ವರಾ || 180 ||

ಬೋಧರತ್ನ

181

ಕಸದಲ್ಲಿದ್ದ ರತ್ನವೆಂದು ಆರಾದರೂ ನಿರ್ಲಕ್ಷಿಸುವರುಂಟೆ
ಪ್ರವೃತ್ತಿರೂಪ ಭೋಗವೆಂಬ ಕಸದಲ್ಲಿದ್ದರೂ
ಬಾಲಗುರುವಿನ ನಿರ್ಲಕ್ಷಿಸುವರುಂಟೆ
ಬಾಲಗುರುವೆಂಬುದು ಅಹಂತ್ವವಿಲ್ಲದ
ಸುಜ್ಞಾನದ ತೇಜ ನಿರ್ವಿಕಾರ ನಿರಾಲಂಬ ಕಾಣಿಭೋ
ಇದುವೆ ಬೋಧವ ಬೋಧಿಸಲು ಬಂದ ಭೋದದವತಾರ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

182

ಕಸದಲ್ಲಿ ರತ್ನವಿದ್ದರೂ ಅದು ತನ್ನ ಘನತ್ವದಿಂ
ಕಂದದು ಕುಂದದು ಇದ್ದಂತಿರುವದು
ಬಾಲಗುರು ದೇಹವೆಂಬ ಕಸದಲ್ಲಿದ್ದರೂ ಸಮ್ಯಜ್ಞಾನ
ಕಂದದು ಕುಂದದು ಇದ್ದಂತಿರುವದರಿಂ
ಅಹಮಿಲ್ಲದ ಚಿದೀಶ್ವರ ಚಿದಾಕಾಶ ಕಾಣಿಭೋ
ಇದುವೆ ವರಪ್ರಸಾದ ಕರುಣಿಸಲು ಬಂದ
ಕರುಣಾಜಲವ ತಿರಸ್ಕರಿಸಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

183

ಕಸ ರತ್ನ ಒಂದೆಯೆ ಕಸದಲ್ಲಿ ರತ್ನವಿದ್ದರೂ ಕಸ ಕಸವೆ
ರತ್ನ ರತ್ನವೆ ಕಸ ರತ್ನದ ಘನತ್ವ ಕೆಡಿಸದು
ರತ್ನವು ಕಸದಿಂದ ಸದಾ ಅಲುಪ್ತವು
ಬಾಲಗುರುವೆಂಬ ಜ್ಞಾನರತ್ನವು ಪ್ರಪಂಚರೂಪಿ ಕಸ ಒಂದೆಯೆ
ಪ್ರವೃತ್ತನಾಗಿ ತೋರಿದರೇನು ಜ್ಞಾನರತ್ನವು ಅಲುಪ್ತವು
ಜ್ಞಾನರತ್ನ ಉದಯಾಸ್ತಗಳಿಲ್ಲ
ಪ್ರಸಾದ ಜ್ಞಾನಸ್ವರೂಪ ಅದು ನಿಸ್ಸೀಮವು ನಿರಾಲಂಬ
ಪ್ರಸಾದ ಕರುಣಿಸಲು ಬಂದ ಕರುಣಾಮಯನ
ತಿರಸ್ಕರಿಸಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

184

ಪ್ರಾಜ್ಞರು ಕಾವ್ಯಗುಣಗಳಿಂದ ಈ ವಚನಂಗಳ ಕಾಣಬಾರದು
ವಚನದೊಳಿರುವ ಸಾರಭೂತವಾದ ಭೂಮಾತತ್ವಕಾಣುವದು
ಭೂಮಾತತ್ವ ಲಭ್ಯವಾಗುವದರಿಂದ
ಭ್ರಮನಿರಸನ ಬ್ರಹ್ಮಾಕಾರವು ಸಹಜ ಸಿದ್ಧಿಸುವದು
ನಿರಂಜನ ಪ್ರಭು ನಾಗೇಶ್ವರಾ ॥ 4 ॥

185

ಸುವರ್ಣವು ಕಾರ್ಯರೂಪ ಆಭರಣಗಳಾಗಿ ತೋರಿದರೂ
ಬಂಗಾರವು ಸ್ವಭಾವತಃ ಶಾಂತವು
ಚಿದಾಕಾಶವು ಚಿಚ್ಛಕ್ತಿಯಿಂ ಅನೇಕ ಚರಾಚರ
ಜಗದಾಕಾರವಾಗಿ ಕಂಡರೂ
ತನ್ನ ಚಿತ್‌ಪ್ರಕಾಶದಿಂ ಸಕಲವು ನುಂಗಿ
ಶಾಂತವು ಅಖಂಡವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 5 ॥

186

ಗುಣಾತೀತವು ಗುಣಾದಿಗಳಿಂದುಕ್ತವೆ
ಅಲ್ಲಿ ಪ್ರಕೃತಿ ಪುರುಷರೆಂಬ ಭಿನ್ನವಿಲ್ಲ
ಇದು ತನ್ನ ಸತ್ತೆಯಿಂದ ಸ್ವಭಾವತಃ ಶಾಂತಾತ್ಮವೆಂಬುದು
ನಿರಂಜನ ಪ್ರಭು ನಾಗೇಶ್ವರಾ ॥ 6 ॥

187

ಚೈತನ್ಯದ ಘನವನೇನೆಂಬೆ
ತಾನು ನಿರ್ವಿಕಾರವಾಗಿದ್ದರೂ ತನ್ನ
ನಿಸ್ಸಂಗತ್ವದಿಂ ಚರಾಚರ ಜಗವ ನುಂಗಿ
ಸ್ವಭಾವತಃ ತಾನು ಇದ್ದಂತಿರುವ ಪರಮ ಶಾಂತಿಮಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 7 ॥

188

ಇದ್ದುದು ಸರ್ವತ್ರ ಸದಾ ಇದ್ದುದ್ದು
ಅದುವೆ ಸಕಲ ಜಗತ್ತಿಗಾಧಾರವಾಗಿ
ತಾನು ಇದ್ದಕ್ಕಿದ್ದಂತಿದ್ದು ತನ್ನ ಸತ್ತಾಮಾತ್ರದಿಂದ
ಚರಾಚರ ಜಗವು ಚಲಿಸಿ ಚಲಿಸದಂತೆ ಮಾಡುವದು
ಅದು ಏಕವು ಸರ್ವವ್ಯಾಪಿಯು ತನಗಿಂತನ್ಯವಲ್ಲವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 8 ||

189

ನಾನೆ ಸತ್ತಾರೂಪ ಶಿವ ಸತ್‌ಸ್ವರೂಪನಾದ ಸರ್ವವ್ಯಾಪಿ
ಅಚಲ ಪೂರ್ಣ ನಾನು ಹೋಗುವದೆಲ್ಲಿ ಬರುವದೆಲ್ಲಿ
ಅಕಲ್ಪಿತ ನಾನುಅಕುಲ ನಾನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 9 ||

190

ನಾನೆ ಆಧಾರ ಆಧೇಯ ಶಿವ
ಅಖಂಡ ಶಿವ ಅಚ್ಯುತ ಶಿವನಾಗಿರುವಾಗ
ಗಮನಾಗಮನ ನನಗೆಲ್ಲಿ
ನಾನು ಏನೊಂದಾಗದ ಇದ್ದಂತಿರುವ
ಪರಾತ್ಪರ ಪರವಸ್ತು ನಿರ್ವಿಕಲ್ಪ ನಿರಾಕುಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 10 ||

191

ನಿರವಯ ನಿರ್ಮಾಯನಾದ ನನಗೆ ಭೌತಿಕ ಶರೀರವಿಲ್ಲ
ಸಂಕಲ್ಪ ಶರೀರವಿಲ್ಲ ಕಾರಣ ಮಹಾಕಾರಣ ಶರೀರವಿಲ್ಲ
ನಾನು ಆವಾವ ದೇವತೆಗಳು ಅಲ್ಲ
ನನ್ನಂ ದೇವತೆಗಳು ಅರ್ಚಿಸುವರು
ಅರ್ಚಿಸಿದರೂ ಪ್ರಮಾದವುಳ್ಳ
ದೇವತೆಗಳು ನನ್ನ ಅಖಂಡತ್ವ ತಿಳಿಯದ್ದರಿಂದ
ಅವರು ನನಗೆ ಅಪ್ರಿಯರು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 11 ||

192

ಚಿದಾಕಾಶನಾದ ನನಗೆ ಉಪಾಧಿ ಎಲ್ಲಿ ಉಪಾಧಿಗತ ಆಭಾಸರೆಲ್ಲಿ
ನಾನು ಅವಿದ್ಯಾಯುಕ್ತ ಆಭಾಸನಲ್ಲ ವಿದ್ಯಾಯುಕ್ತ ಆಭಾಸನಲ್ಲ
ವಿದ್ಯಾಯುಕ್ತ ಮಾಯಿಕನಲ್ಲ ಸರ್ವಾತ್ಮ
ನಾನು ಪರಾತ್ಪರ ಪರವಸ್ತುವಾದುದರಿಂದ
ನನ್ನಂ ದೇವತೆಗಳು ಅರ್ಚಿಸುವರು ಅರ್ಚಿಸಿದರೂ ನನ್ನ
ನಿಸ್ಸೀಮದ ಘನತ್ವ ತಿಳಿಯದ್ದರಿಂದ ನನಗೆ ಅಪ್ರಿಯರು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 12 ||

193

ನಿರ್ಗುಣನಾದ ನಾನು
ಗುಣಯುಕ್ತನೆ ಗುಣಮಣಿಯೆ ಗುಣಿಯೆ
ಅಚಿಂತ್ಯನಾದುದರಿಂದ ನನ್ನನ್ನು ಸುರಾಸುರರು ಅರ್ಚಿಸುವರು
ಅರ್ಚಿಸಿದರೂ ಗುಣಮಣಿಗಳಾದುದರಿಂದ
ನನಗೆ ಅಪ್ರಿಯರು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 13 ||

194

ಅದೃಶಿಯಾದ ನಾನು ತೋರುವವನಲ್ಲ ಅಡಗುವವನಲ್ಲ
ಇದ್ದಂತಿರುವ ನನ್ನೊಳ್
ದೇವತರಿಲ್ಲ ದೈತ್ಯರಿಲ್ಲ ಮನುಗಳಿಲ್ಲ ಮುನಿಗಳಿಲ್ಲ
ಬ್ರಹ್ಮಾದಿ ದೇವತಾಗಣವಿಲ್ಲದಿದ್ದರೂ
ದೇವತಾ ಗಣ ನನ್ನನ್ನು ಗುಣಯುಕ್ತನೆಂದು
ಅರ್ಚಿಸುವದರಿಂದ ಅವರು ನನಗೆ ಅಪ್ರಿಯರು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 14 ||

195

ಅರಿವುಡೆ ತಾನಾರೆಂದರಿವುದು
ಅರಿಯದ್ದರಿಂದ ಈ ದೇಹ ಬಂದಿದೆ
ಅರಿಯುವದರಿಂದ ಪರಬ್ರಹ್ಮ ಪರಮಾತ್ಮ ತಾನೆ
ಗಗನದಂತಿರುವ ಅಖಂಡೈಕರಸ ತಾನೆ
ಇರುವಲ್ಲಿ ಈ ದೇಹದಿಂದ ತನಗೇನು
ದೇಹವೆಂಬುದು ನೀರಿನಲ್ಲಿ ಗುರುಳೆಗಳು ಹುಟ್ಟಿ

ಅಳಿವಂತೆ ಇವುಗಳು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

196

ತಿಳಿವುಡೆ ಬ್ರಹ್ಮ ಒಂದೆ ತಿಳಿವುದು ತಿಳಿಯುವದರಿಂದ ತಾನೆ
ಸಕಲ ತಾನೆ ನಿಃಕಲ ತಾನೆ
ಘನಕ್ಕೆ ಘನ ತನ್ನವಿನಃ ಅನ್ಯವಿಲ್ಲವೆಂಬುದು
ತನಗದು ವೇದ್ಯವಾಗುವುಡೆ ದೇಹವೆ ತೋರಲಿ
ತೋರದಿರಲಿ ಜಗವೆ ತೋರಲಿ ತೋರದಿರಲಿ
ನೀರಿನಲ್ಲಿ ಗುರುಳೆಗಳು ಹುಟ್ಟಿ ಅಳಿಯುವಂತೆ ಇವುಗಳು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 16 ||

197

ತಿಳಿ ತಿಳಿಯುವದು ತಿಳಿ
ತಿಳಿಯುವುಡೆ ಪ್ರಮಾದವಿಲ್ಲ ಪ್ರಮೇಯವಿಲ್ಲ
ಪ್ರಮಾಣಂಗಳಿಲ್ಲ ಪ್ರಮಾತೃವಿಲ್ಲ
ನಾನೆಂಬುದಿಲ್ಲ ನನ್ನದೆಂಬುದಿಲ್ಲ ಕೇವಲ ಚಿನ್ನಿಧಿ ತಾನೆ
ದೇಹವೆಂಬುದು ನೀರಿನಲ್ಲಿ ಗುರುಳೆಗಳು ಹುಟ್ಟಿ
ಅಳಿಯುವಂತೆ ಇವುಗಳು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 17 ||

198

ಮಣ್ಣು ನಾನಾ ಘಟ ದಟಾದಿಗಳಾಗಿ ತೋರಿದರು ಮಣ್ಣೇ
ಅಧಿಷ್ಠಾನ ದೋಳ್ ಕಲ್ಪಿತವಾಗಿರುವ
ಮಹದಾದಿ ಭೂತಂಗಳು ತೋರಿದರೂ
ಅಧಿಷ್ಠಾನ ಇರುವದರಿಂದ ಪ್ರಕೃತಿ ಆವುದು ಪುರುಷ ಆವುದು
ನಿರ್ಮಾಯದೋಳ್ ಮಾಯಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 18 ||

199

ಸುವರ್ಣವು ಆಭರಣಗಳಾಗಿ ತೋರಿದರೂ
ಅವುಗಳ ಮೂಲ ಬಂಗಾರಕ್ಕಿಂತ ಅನ್ಯವಲ್ಲ

ಮಹದಾದಿ ಭೂತಂಗಳು ಚಿದ್ಘನದೊಳ್
ಬೇರಾಗಿ ತೋರಿದರೂ ಅವು ಚಿನ್ಮಾತ್ರ ಚಿನ್ಮಾತ್ರವಲ್ಲದನ್ಯವಲ್ಲ
ನಿರಂಜನ ಪ್ರಭು ನಾಗೇಶ್ವರಾ || 19 ||

200

ಕಲ್ಪಿತ ಕಲ್ಪನೆ ಕಲಿತನ
ಇವುಗಳ ಮೂಲವ ನೋಡಲು ಚಿದಾಕಾಶವು
ಅಲ್ಲಿ ಕ್ಷರವಾವುದು ಅಕ್ಷರವಾವುದು
ಇದ್ದಂತಿರುವ ಅಕ್ಷರೋತ್ತಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 20 ||

201

ಜಗದೊಡೆಯ ಸೂಕ್ಷ್ಮಾತಿ ಸೂಕ್ಷ್ಮವು
ಅದು ಪ್ರಕೃತಿಯು ಅಲ್ಲ ವಿಕೃತಿಯೂ ಅಲ್ಲ
ಪುರವಲ್ಲ ಪುರುಷನೂ ಅಲ್ಲ ಅಹಂ ಅಲ್ಲ ನಿರಹಂ ಅಲ್ಲ
ವ್ಯಷ್ಠಿ ಅಲ್ಲ ಸಮಷ್ಠಿ ಅಲ್ಲ ಇವುಗಳ ಅಭಿಮಾನಿಯೂ ಅಲ್ಲ
ಅಲ್ಲಿ ಯಾವ ಭಿನ್ನತೆಯೂ ಇಲ್ಲ
ಅದು ಮನೋಬುದ್ಧಿ ಇಂದ್ರಿಯಾತೀತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 21 ||

202

ಅಕಲಂಕವು ಕಲಂಕವುಳ್ಳದೆ ಅಲ್ಲಿ ಸಂಗವಿಲ್ಲ ನಿಸ್ಸಂಗವಿಲ್ಲ
ಸಮರಸವಿಲ್ಲ ಆದುದಲ್ಲ ಹೋದುದಲ್ಲ
ಇದ್ದಂತಿರುವ ಸ್ವಯಂಜ್ಯೋತಿ ಜಗದೊಡೆಯ
ಪರಾತ್ಪರ ಪರವಸ್ತು ಭಾವಾತೀತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 22 ||

203

ಜಗದೊಡೆಯ ಕ್ಷರವಾಗನು ಅಕ್ಷರವಾಗನು
ನಾನಾಗದು ನೀನಾಗದು
ತನ್ನ ಸ್ವರೂಪಕ್ಕಿಂತ ಭಿನ್ನವಾಗದು ಅಭಿನ್ನವಾಗದು
ಅಲ್ಲಿ ಭಾವಕ್ಕಿಂಬಿಲ್ಲ
ಅದು ಏನೊಂದುಸರಲುಬಾರದ ಘನ ನೋಡಾ

ನಿರಂಜನ ಪ್ರಭು ನಾಗೇಶ್ವರಾ || 23 ||

204

ಇದ್ದುದದೆ ಸರ್ವತ್ರ ಸದಾ ಸರ್ವವ್ಯಾಪಿಯಾಗಿದ್ದುದದೆ
ಅಂತರ ಅದೆ ಬಹಿರ
ಅದೆ ಇದ್ದರೂ ಅಂತರ ಆಗಿಲ್ಲ ಬಹಿರ ಆಗಿಲ್ಲ
ನಾನು ಆಗಿಲ್ಲ ನೀನು ಆಗಿಲ್ಲ ಚರಾಚರ ಜಗವು ಆಗಿಲ್ಲ
ಇದ್ದಕ್ಕಿದ್ದಂತಿದ್ದುದು ಆವುದೋ ಅದುವೆ ಅದೆ ಸಹಜ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 24 ||

205

ಅದೆ ಇದ್ದುದಾವುದೋ ಅದುವೆ ಅದೆ
ಅಲ್ಲಿ ಮತಿಗತಿಯನರಸಲುಂಟೆ
ಕಲ್ಪಿತನಿಲ್ಲ ಕಲ್ಪನೆಯಿಲ್ಲ ಕಲಿತನವಿಲ್ಲ ಏನೊಂದುಸುರಲು
ಎಡೆಗೊಡದೆ ಇದ್ದಂತಿದ್ದುದನೇನೆಂಬೇನೆಂಬೆ
ನಿರಂಜನ ಪ್ರಭು ನಾಗೇಶ್ವರಾ || 25 ||

206

ಚೈತನ್ಯವು ಜ್ಞಾನ ಸ್ವರೂಪವು ಜ್ಞಾನಮಯವು
ಪಿಂಡವೆಂಬುದದುವೆ ಅಂಡವೆಂಬುದದುವೆ ಬ್ರಹ್ಮಾಂಡವೆಂಬುದದುವೆ
ಪುರವದುವೆ ಪ್ರಕೃತಿ ಅದುವೆ ಪುರುಷ ಅದುವೆ
ಪರಮ ಪುರುಷ ಅದುವೆ
ಪೂರ್ಣದೊಳ್ ಅಪೂರ್ಣಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 26 ||

207

ಚಿಜ್ಯೋತಿಯು ಪರವು ಅಲ್ಲ ಅಪರವು ಅಲ್ಲ
ಅದು ಪರಾತ್ಪರವು ಸಕಲ ತತ್ವಂಗಳ ಸತ್ತಾ ಸ್ವರೂಪ
ಅತ್ಯಂತ ಸೂಕ್ಷ್ಮಾತ್ ಸೂಕ್ಷ್ಮವು
ಭೂಮಿ ಅದನ್ನು ಚಲಿಸದು ನೀರು ಅದನ್ನು
ನೆನಿಸಲಿಲ್ಲ ಗಾಳಿ ಅದಕ್ಕೆ ಬೀಸಲಿಲ್ಲ
ಬೆಂಕಿ ಅದಕ್ಕೆ ತನ್ನ ಬಿಸಿಯಿಂದ

ತಾಕಲಿಲ್ಲ ಆಕಾಶ ಎಂದು ಅದಕ್ಕೆ ಅವಕಾಶ ಕೊಡಲಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 27 ॥

208

ನಿಸ್ಸೀಮದೋಳ್ ಸೀಮೆ ಕಲ್ಪಿಸಬಹುದೆ
ಅಲ್ಲಿ ದೃಶ್ಯದೃಕ್‌ಗಳ ವಿವೇಚನೆಗಿಂಬಿಲ್ಲ
ಅವಿಚಾರ ವಿಚಾರಗಳ ತಿಕ್ಕಾಟವಿಲ್ಲ
ಒಳಗು ಅದುವೆ ಹೊರಗು ಅದುವೆ ಇರುವದರಿಂದ
ಅವಿಚ್ಛಿನ್ನ ನಿರಂತರ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 28 ॥

209

ನಿರಂತರವೆಂಬುದು ಭೂಮಾ ಅದು ಪಂಚಭೂತಂಗಳಲ್ಲ
ಪಂಚ ತನ್ಮಾತ್ರೆಗಳಲ್ಲ ಆಭಾಸರಲ್ಲ ಪಂಚಾವಸ್ಥೆಯಲ್ಲ
ಅದು ಸ್ವಗತಾದಿ ಭೇದವಲ್ಲ
ಅದು ಅಕೃತ್ರಿಮ ಅಖಂಡ ಅಕಲ್ಪಿತ ಅಚಿಂತ್ಯತ್ವ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 29 ॥

210

ಇದ್ದಂತಿರುವುದಾವುದೊ ಅದು ನಿರ್ವಿಕಾರವು ನಿರಂಜನವು
ನಿರಾಲಂಬವು ಗುಣಾತೀತವು ಬೆಳಗುವ ಜ್ಞಾನಜ್ಯೋತಿ
ಸರ್ವರ ಸ್ವಯಂಜ್ಯೋತಿ ಸರ್ವಾತ್ಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 30 ॥

211

ಜ್ಯೋತಿ ಚಿಜ್ಯೋತಿ ಇದು ಹೃದಯೋಳ್ ಪ್ರಕಾಶಿಸುವ
ಸ್ವಯಂಜ್ಯೋತಿ ಅಲ್ಲಿ ಕಾರ್ಯ
ಕಾರಣಕ್ಕಿಂಬಿಲ್ಲ ನಿತ್ಯಾನಿತ್ಯವೆಂಬುದಿಲ್ಲ
ತೋರುವದಲ್ಲ ಅಡಗುವದಲ್ಲ ಭಾವವಲ್ಲ ಅಭಾವವಲ್ಲ
ಭಾವಾತೀತ ನೋಡಾ
ನಿರಂಜನ ಪ್ರಭು ನಾಗೇಶ್ವರಾಸ ॥ 31 ॥

212

ನಿರ್ಗುಣದ ಸಾಕ್ಷಾತ್ಕಾರವದು ಗುಣವಂತರಿಗಿದು ಅಸಾಧ್ಯವು
ನಿರ್ಗುಣಿಯು ಗುಣವಂತನೆ ಗುಣಗಂಧಾತ್ಮನೆ
ಇದ್ದಂತಿರುವ ಸಹಜ ಮೂರ್ತಿಯಿಂದ ಬರುವ ಬೋಧೆಯನು
ಸತತ ಅಭ್ಯಾಸದಲ್ಲಿ ನಿರತರಾದಡೆ ಸಾಕ್ಷಾತ್ಕಾರ ಸಾಧ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 32 ॥

213

ಯೋಗಿಗಳೋಳ್ ನಿರ್ಗುಣ ಯೋಗಿಯೆ ಪರಾತ್ಪರ ಯೋಗಿ
ಜ್ಞಾನಾನಂದಮಯನು
ಜ್ಞಾನದೇವನಿಂದ ಬರುವ ಬೋಧೆಯು ನಿರಂತರ
ಅಭ್ಯಾಸದಲ್ಲಿ ನಿರತರಾದಡೆ
ಪರಮಸತ್ ಸ್ವರೂಪದಲ್ಲಿ ಸಮರಸನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 33 ॥

214

ಸತ್‌ಸುಖಾಮೃತದ ಮರವಿನಿಂದ ಅಹಂ ಮಮಗಳಿಂದ ತೋರುವ
ವಿಶ್ವವು ಈ ವಿಶ್ವವ ನಿರ್ಮೂಲ ಮಾಡಲು ಸತ್ಯಜ್ಞಾನವೆ ಅಮೋಘವು
ಸತ್ಯವೆಂಬುದು ಸವೆಯದ ಸುಖಾಮೃತವು ಸಹಜಾನಂದವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 34 ॥

215

ತನ್ನಯ ಸ್ವರೂಪ ಪ್ರಮಾದದಿಂ ವಿಷಯಾದಿಗಳ ವ್ಯಾಮೋಹ
ವ್ಯಾಮೋಹದಿಂ ತೋರುವ ವಿಶ್ವ ಈ ವಿಶ್ವ, ಯಿದರ ವ್ಯಾಮೋಹ
ನಿರ್ಮೂಲ ಮಾಡಲು ತನ್ನರುವೆ ಅಮೋಘ ವುಪಾಯವು
ಅರುವೆಂದು ಗಗನದಂತಿರುವ ಜ್ಞಾನಾಮೃತವೆ
ಸಹಜ ಸ್ವಭಾವ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 35 ॥

216

ಬ್ರಹ್ಮಜ್ಞಾನದ ಮರವಿನಿಂದ ವಾಸನೆ ತ್ರಯಗಳು
ಈ ವಾಸನೆಗಳ ನಿರ್ಮೂಲ ಮಾಡಲು

ಯತಾರ್ಥಜ್ಞಾನವೆ ಉಪಾಯ
ಈ ಜ್ಞಾನವೆ ಸತ್ಯ ಜ್ಞಾನಾನಂದದ ಸಹಜತೆಯು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 36 ||

217

ಅರುವಿನ ಮರವಿನಿಂದ ರಾಗರಂಜನೆಗಳು
ಈ ರಂಜನೆಯಿಂ ತೋರುವ ವಿಷಯಾಕಾರ ನಷ್ಟ ಮಾಡಲು
ತಾನಾರೆಂಬರುವೆ ಶ್ರೇಷ್ಠ ಉಪಾಯ
ಅರುವೆಂಬುದು ತಾನು ತಾನೆಂಬುದು ಸಚ್ಚಿತ್ಸುಖವೆ ಸುಖ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 37 ||

218

ಘಟದ ಭಾವ ಸಕಲರಿಗೆ ಗೋಚರ
ಘಟದ ಅಭಾವಂಗಳು ಸಕಲರ ಭಾವಕ್ಕೆ ನಿಲುಕದು
ಮಣ್ಣಿನ ಸದ್ಭಾವ ಅಬಾಧಿತವಾಗಿ ಕಾಣುವದು ಹೇಗೆ ಸಾಧ್ಯ
ಸದ್ಭಾವವೆ ನಿಲುಕದಿರುವಾಗ ಅದರ ಸಹಜತೆ ವಿಚಾರ
ಅವಿಚಾರಗಿಂತ ಬೇರೆಯಾಗಿ ಅಂತರಾಳದಲ್ಲಿರುವದು
ನಿರಂಜನ ಪ್ರಭು ನಾಗೇಶ್ವರಾ || 38 ||

219

ನಾಮರೂಪಂಗಳಿಂದ ಕಂಗೊಳಿಸುವ ದೃಶ್ಯವು ಸಕಲರಿಗೆ ಗೋಚರ,
ದೃಶ್ಯರೂಪ ಪ್ರಪಂಚ ಪ್ರಳಯಾದಿಗಳಲ್ಲಿ ಅಭಾವವು,
ನಮ್ಮ ದೃಷ್ಠಿಗೆ ನಿಲುಕದು
ಭಾವಾಭಾವಕ್ಕೆ ಮೀರಿದ ಪರಮಸತ್‌ಸ್ವರೂಪವು ಭಾವ
ಅಭಾವ ಸ್ಥಿತಿಗತೀತವಾಗಿ ಅಂತರಾಳದಲ್ಲಿದೆ ನೋಡಾ
ನಿರಂಜನ ಪ್ರಭು ನಾಗೇಶ್ವರ || 39 ||

220

ತತ್ ತ್ವಂ ಪದಗಳು ಭಾವ ರೂಪದಿಂ ಗೋಚರ
ತತ್ ತ್ವಂ ಪದಗಳಿಗೆ ಲಕ್ಷ್ಯರೂಪ ಮಾದುದು
ಅವಿಚಾರ ದೃಷ್ಠಿಗೆ ನಿಲುಕದು
ಇದ್ದಕ್ಕಿದ್ದಂತಿರುವ ಅವಿಲಕ್ಷ್ಯಮಾದ ಅಖಂಡೈಕರಸವು
ದೃಶ್ಯ ದೃಕ್ ಎಂಬುದಕ್ಕೂ ಮೀರಿ

ಅಂತರಾಳದಲ್ಲಿದೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 40 ||

221

ದೇಹ ಹೊರಗೆ ಕಾಣುವದು ಅದರೋಳ್ ಹೃದಯ ವಿರುವದು
ನಾವು ಸಾಕ್ಷಾತ್ಕಾರ ಮಾಡಿಕೊಳ್ಳುವದು ಹೃದಯೇಶ್ವರನನ್ನು
ಹೃದಯೇಶ್ವರನು ಸ್ವಯಂ ಪ್ರಕಾಶದಿಂ
ಬೆಳಗುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 41 ||

222

ನಾಮರೂಪ ಜಗವು ಹೊರಗೆ ಕಾಣುವದು ಇದು ಭ್ರಾಂತಿಜ್ಞಾನ
ಇದರೋಳ್ ಹೃದಯ ರೂಪಿ ಸಮ್ಯಜ್ಞಾನ ಉಂಟು
ನಾವು ಸಾಕ್ಷಾತ್ಕಾರ ಮಾಡಿಕೊಳ್ಳುವುದು
ಸಚ್ಚಿದಾನಂದ ರೂಪಿಯಾದ ಸ್ವಯ ಸುಖವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 42 ||

223

ಪ್ರಪಂಚವೆಂಬುದು ತೆಂಗಿನ ಕಾಯಿಯಂತೆ
ಹೊರಗಡೆ ತೋರುವದು ಭ್ರಾಂತಿಜ್ಞಾನ ಮಾಯಿಕಜ್ಞಾನ
ಪ್ರಪಂಚದ ಒಳ ಹೊರಗೆನ್ನದೆ ಇರುವ
ಪೂರ್ಣಾತ್ಮಜ್ಞಾನ ಇದು ಮಧ್ಯದಲ್ಲಿರುವದು
ಸಮ್ಯಜ್ಞಾನ ನಾವು ತಿಳಿದುಕೊಳ್ಳಬೇಕಾದುದು
ಅಖಂಡೈಕರಸ ಸವೆಯದ ಸುಖ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 43 ||

224

ಬ್ರಹ್ಮಾಂಡವೆಂಬುದು ಬ್ರಹ್ಮಾನಂದದ ಕಾಯ
ಬ್ರಹ್ಮಾಂಡದ ಒಳಹೊರಗೆನ್ನದೆ
ಇರುವ ಬ್ರಹ್ಮಜ್ಞಾನ ಮಧ್ಯದಲ್ಲಿರುವದು
ಅದು ಸಮ್ಯಜ್ಞಾನ
ನಾವು ತಿಳಿದುಕೊಳ್ಳಬೇಕಾಗಿರುವದು

ಭೂಮಾಸ್ವರೂಪ ಅದರೊಳಿರುವದು
ನಿರಂಜನ ಪ್ರಭು ನಾಗೇಶ್ವರಾ ॥ 44 ॥

225

ತನುವೆಂಬುದು ಪರಮಾನಂದದ ತನು
ಹೊರಗೆ ತೋರುವ ವಿಪರೀತ ಇದು ಭ್ರಾಂತಿಜ್ಞಾನ
ಸಕಲ ತನುವಿನ ಒಳಹೊರಗೆನ್ನದೆ ಇರುವ
ಸದಮಲಜ್ಞಾನ ಮಧ್ಯದಲ್ಲಿರುವದು
ನಾವು ತಿಳಿದುಕೊಳ್ಳಬೇಕಾಗಿರುವದು
ಸವೆಯದಾನಂದ ತನ್ನೊಳ್ ಇರುವದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 45 ॥

226

ಆಕಾಶವತ್ ಆಕಾಶವು ಅದು ಘಟಾಕಾಶ ಮಠಾಕಾಶವಾಗಲುಂಟೆ
ಅಖಂಡವು ಖಂಡವಾಗುವುದೆ
ಚಿನ್ನಿಧಿಯು ಜೀವಾತ್ಮ ಅಂತರಾತ್ಮ
ಪರಮಾತ್ಮವಾಗುವುದುಂಟೆ ಆಗುವದೆಲ್ಲ ಕೃತ್ರಿಮ
ಇದ್ದಂತಿರುವ ಅಚಿಂತ್ಯ ಘನವೆ ಅಖಂಡ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 46 ॥

227

ಒಡಲಿಲ್ಲದವಂಗೆ ಗುಣಿಯೆಂದು ಗುಣಮಣಿಯೆಂದು ಆಭಾಸನೆಂದು
ಕಲ್ಪಿಸಬಹುದೆ ಏಕಮೇವಾದ್ವಿತೀಯವು
ಅಲ್ಪಜ್ಞ ಸರ್ವಜ್ಞನಾಗಬಹುದೆ
ಅವಿಭಾಗವು ವಿಭಾಗವಾಯಿತೆ
ಇದ್ದಂತಿರುವದರಿಂದ ತಾನೆ ನಿಷ್ಕಳಂಕ ಪ್ರಿಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 47 ॥

228

ಸತ್‌ಸ್ವರೂಪದೊಳ್ ಜಡ ಚೇತನವೆಂದು ವಿಭಾಗಿಸಲು ಇಂಬುಂಟೆ
ಅಲ್ಲಿ ನಿತ್ಯವಾವುದು ಅನಿತ್ಯವಾವುದು
ಅರಿತವರಾರು ಅರಿಯದವರಾರು

ಇದ್ದಕ್ಕಿದ್ದಂತಿರುವ ಸತ್‌ಸ್ವರೂಪ ಸಾಕ್ಷಾತ್ಕಾರವಾದುದರಿಂದ
ಒಂದನ್ನೆ ಕಾಣುವ ಜ್ಞಾನ ದೇವನನ್ನು
ದಾತಾ ಧೀರ ಕೋಟಿ ಹೆಸರುಗಳಿಂದ ಹೊಗಳುವರು
ನಿರಂಜನ ಪ್ರಭು ನಾಗೇಶ್ವರಾ || 48 ||

229

ಎರಡೆಂಬುದು ತನ್ನಯ ಮರವು ಒಂದೆಂಬುದು ಅರುವಿನ ಅರುವು
ತಾನೆಂಬುದು ಅರಿಯದರುವು
ಅಲ್ಲಿ ದ್ವೈತವೆಂಬುದಿಲ್ಲ ಅದ್ವೈತವೆಂಬುದಿಲ್ಲ,
ಸಂಗವಿಲ್ಲ ಸಮರಸವಿಲ್ಲ
ಇದ್ದಂತಿರುವ ಸತ್ಯ ಅಮಲ ಶಾಶ್ವತ ಘನಲಿಂಗ
ಸಾಕ್ಷಾತ್ಕಾರಿಸಿಕೊಂಡ ಯೋಗಿ
ದಾತಾ ಧೀರ ಕೋಟಿ ಹೆಸರುಗಳಿಂದ ಹೊಗಳುವರು
ನಿರಂಜನ ಪ್ರಭು ನಾಗೇಶ್ವರಾ || 49 ||

230

ಇದ್ದಂತಿರುವ ಅಖಂಡದೋಳ್
ಕಾಣಿಸುವ ಜಗವು ಮಿಥ್ಯೆ ಕಾಣುವ ಆತ್ಮ
ಸತ್ಯವೆಂದು ವಿಭಾಗಿಸುವದೆ ಮರವು
ಈ ದ್ವೈತ ಜ್ಞಾನವು ಸತ್ಯವಲ್ಲ
ಸತ್ಯಮಿಥ್ಯೆವೆಂಬ ವಿಚಾರಕ್ಕೆಡೆಗೊಡದ ಸಮಸ್ವರೂಪ ಘನವು
ಸಾಕ್ಷಾತ್ಕಾರವಾದಾಗ ಸಕಲದೋಳ್ ತನ್ನನ್ನೇ ನೋಡುವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 50 ||

231

ಇರುವದೊಂದೆ ಪೂರ್ಣಾತ್ಮನಲ್ಲಿ
ಅರಿಸಿಕೊಳ್ಳುವದಾವುದು ಅರಿಯುವದಾವುದು
ಕಾಣಿಸಿಕೊಳ್ಳುವ ದೃಶ್ಯವಿಲ್ಲ ಕಾಣುವ ದೃಕ್ ಇಲ್ಲ
ಇದ್ದುದೊಂದೆ ಸದ್ವಸ್ತು ಅಲ್ಲಿ ವಿಭಾಗಕ್ಕೆಡೆಯಿಲ್ಲ
ಮರೆಯುವದಿಲ್ಲ ಅರಿಯುವದಿಲ್ಲ ತಾನೊಂದೆ ಸತ್ಯ
ಸಕಲ ತಾನೆ ತಾನಿರುವದರಿಂದ
ಎತ್ತನೋಡಿಡತ್ತ ತನ್ನನ್ನೇ ಕಾಣುವನೆ ಮಹಾಂತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 51 ||

232

ಎರಡನ್ನು ಕಾಣುವದೆ ಅಜ್ಞಾನ ಒಂದನ್ನು ಕಾಣುವದೆ ಜ್ಞಾನ
ತನ್ನನ್ನು ಕಾಣುವದೆ ಸತ್ಯಸಾಕ್ಷಾತ್ಕಾರ
ಅಲ್ಲಿ ಭೇದವಿಲ್ಲ ಅಭೇದವಿಲ್ಲ ನಾಶವೆಂಬುದಿಲ್ಲ ಅವಿನಾಶವೆಂಬುದಿಲ್ಲ
ಇದ್ದಂತಿರುವ ತನ್ನ ಸ್ವರೂಪ ಸಾಕ್ಷಾತ್ಕಾರವಾದ
ಮಹಾಂತನ ಉಪಮಿಸಲರಿಯೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 52 ||

233

ಎರಡನ್ನು ಕಾಣುವಂಗೆ ಜ್ಞಾನವಿಲ್ಲ
ಒಂದನ್ನು ಕಾಣುವಂಗೆ ಅಜ್ಞಾನವಿಲ್ಲ
ಅಜ್ಞಾನವಿಲ್ಲದವಂಗೆ ತಾನು ಸಚ್ಚಿತ್‌ಸ್ವರೂಪ
ಸಕಲವು ಸಚ್ಚಿತ್ ಸ್ವರೂಪ
ಅಲ್ಲಿ ಸತ್ಯಾಸತ್ಯವೆಂಬ ವಿಭಾಗವಿಲ್ಲದುದರಿಂದ
ತನ್ನಲ್ಲಿ ತಾನು ಸನ್ನಿಹಿತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 53 ||

234

ಗುರುಪ್ರಸಾದವೆಂಬುದು ನಡೆ ನುಡಿಗಳಿಗೆ ಮೀರಿದ ಪ್ರಸಾದ
ಮತಿಗತಿಗೆ ಮೀರಿದ ಪ್ರಸಾದ
ಪರಾತ್ಪರ ಪ್ರಸಾದ ಅಚಿಂತ್ಯ ಪ್ರಸಾದ
ಸ್ವಯವೆ ತಾನಾದ ಪ್ರಸಾದ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 54 ||

235

ಗುರುಪ್ರಸಾದವಿದು ಕೊನೆ ಮೊದಲಿಲ್ಲದ ಪ್ರಸಾದ
ಮರವರುವಿಗೆ ಮೀರಿದ ಪ್ರಸಾದ
ತಾನು ಅನ್ಯವ ಕಾಣದ ಪ್ರಸಾದ ಬಂಧ ಮೋಕ್ಷಗಳಿಲ್ಲದ ಪ್ರಸಾದ
ಬುಧ ಬದ್ಧರುಗಳಿಲ್ಲದ ಪ್ರಸಾದ ಸ್ವಯ ಪ್ರಸಾದ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 55 ||

236

ಕರುಣಾಜಲವಿದು ಸಮ್ಯಕ ಜಲ ನಿಸ್ಸೀಮ ಜಲ
ನಿರಾಲಂಬ ಜಲ ನಿವಾಸ ಜಲ
ಅಲ್ಲಿ ಪ್ರವೃತ್ತಿ ಇಲ್ಲ ನಿವೃತ್ತಿ ಇಲ್ಲ ಯೋಗಾಯೋಗವು ಇಲ್ಲ
ಇದು ಗುರುಕರುಣೆಯಿಂ ಕರಗತವಾದ ಜಲ
ಇದ್ದಂತಿರುವ ಪ್ರಜ್ಞಾಜಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 56 ||

237

ಕೆಂಡದೊಳ್ ಸಂಬಂಧಿಸಿದ ಕಾಷ್ಟದ ಸರ್ವಾಂಗವೆಲ್ಲ ಕೆಂಡ ನೋಡಾ
ಶ್ರೀಗುರು ಪ್ರಜ್ಞಾ ಪ್ರಸಾದಕ್ಕೆ ಸಂಬಂಧಿಸಿದ ಶಿಷ್ಯನ ಅಂಗಾಂಗಗಳೆಲ್ಲ
ಜ್ಞಾನಘನ ನೋಡಾ ಅಲ್ಲಿ
ಬೋಧ ಬೋಧಕ ಬೋಧ್ಯನೆಂದರಸಲುಂಟೆ
ಉಪಮೆಗೆ ಮೀರಿದ ನಿಲುವ ಅಂತಿಂತೆನಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 57 ||

238

ಗುರುಪ್ರಜ್ಞೆ ಎಂಬುದು ಪರಾತ್ಪರ ಪ್ರಜ್ಞೆ
ಇದು ನಿರಂತರ ಪ್ರಜ್ಞೆ ಇದು ಆವುದರೊಳ್
ಬೆರೆಯದ ಪ್ರಜ್ಞೆ ಅಗಲದ ಪ್ರಜ್ಞೆ ಅಖಂಡ ಪ್ರಜ್ಞೆ
ಇದ್ದಂತಿರುವ ಸದ್‌ಜ್ಞಾನ ಭರಿತ ಪ್ರಜ್ಞೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 58 ||

239

ಕರುಣಾಮಯನಿಂದ ಸಾಕ್ಷಾತ್ಕಾರ ಪಡೆದವನು
ಪಂಡಿತನೆ ಸಕಾಮಿಯೆ ನಿಷ್ಕಾಮಿಯೆ ಪ್ರಾಪಂಚಿಕನೆ
ವಿರತಿಯೆ ಮನೆಯೊಳಿದ್ದರೇನು
ಮಠದೊಳಿದ್ದರೇನು ಮನವೆಂಬುದು ಗುರುಕರುಣಾನಿಲಯ
ಅಲ್ಲಿ ರಾಗವಿರಾಗಗಳ ಅಡೆತಡೆಯೇ
ಸರ್ವಭೂತಹಿತರತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 59 ||

240

ದೇವ ದೇವ ಮಹಾಪ್ರಸಾದವ ಸಾಕ್ಷಾತ್ಕಾರ ಮಾಡಿಕೊಂಡಲ್ಲಿ
ಅಕ್ಷರಸ್ತನಲ್ಲ ಅನಕ್ಷರಿಯಲ್ಲ ವಿವೇಕಿಯಲ್ಲ ಅವಿವೇಕಿಯಲ್ಲ
ತಿರಸ್ಕರಿಸುವವನಲ್ಲ ಹೊಗಳುವವನಲ್ಲ
ಸಮದರ್ಶಿ ಸರ್ವಾತ್ಮನಾದವಂಗೆ ಹಿತಾಹಿತವಾವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 60 ||

241

ಸಮತತ್ವ ತಿಳಿದುಕೊಂಡ ಸಮದರ್ಶಿಯು
ನರನು ನರನೆ ಸುರರು ಸುರರೆ ಅಸುರರು ಅಸುರರೆ
ಮುನಿಗಳು ಮುನಿಗಳೆ ತಪಸ್ವಿಗಳು ತಪಸ್ವಿಗಳೆ
ಅಲ್ಲ ಆದಿ ಅನಾದಿಯಿಂದತ್ತತ್ತಲಾದ ಮಹಾಘನ
ಘನಕ್ಕೆ ಘನ ಅಂತಿಂತೆನಬಾರದು
ಅಲ್ಲಿ ರಾಗವಿರಾಗಂಗಳು ದೂರಾತಿ ದೂರ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 61 ||

242

ಅರುವರಿತು ಮರಹು ನಷ್ಟವಾಗಿ
ಅದುವೆ ತಾನಾದ ಮಹಾಂತ, ಸಾಕಾರನೆ
ನಿರಾಕಾರನೆ ಭೋಗಿಯೆ ತ್ಯಾಗಿಯೆ ಯೋಗಿಯೆ
ಸಂಗಿಯೆ ನಿಸ್ಸಂಗಿಯೆ ಧ್ಯಾನಿಯೆ ಮೌನಿಯೆ
ಹಿತಾಹಿತವೆಂಬುದಿಲ್ಲ ಸಮದರ್ಶಿ
ಇದ್ದಂತಿರುವ ತೇಜೋಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 62 ||

243

ಪ್ರಸಾದ ಪರಿಣಾಮಿಯು ಆದಿ ತಾನೆ ಅನಾದಿ ತಾನೆ
ಆದಿ ಅನಾದಿಯಿಂದತ್ತತ್ತ ತಾನೆ
ತಾನು ಅವುದರೋಳ್ ಕೂಡಲಿಲ್ಲದ ಘನ
ತಾನು ಯಿದ್ದಂತಿರುವ ಅಪ್ರಮಾಣ
ತಾನೆಂಬುದು ತನ್ನಿಂದ ತಾನರಿವುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 63 ||

244

ಘಟಾಕಾಶವು ಆಕಾಶವತ್ ಆಕಾಶವು
ಘಟದ ಪ್ರತಿಬಂಧಕ ರೂಪಿ ದೃಷ್ಠಿ ದೋಷ
ನಾಶವಾಗದ ವಿನಃ ಆಕಾಶವೆನಿಸದು
ಯೋಗಿಯು ತತ್ತ್ವವೇತ್ತನಾಗಿದ್ದರೂ
ವಾಸನೆ ತ್ರಯಗಳ ದೃಷ್ಠಿ ದೋಷ
ನಾಶವಾಗದ ವಿನಃ ಅಖಂಡೈಕರಸವು ತನಗದು ಅವೇದ್ಯವು ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 64 ॥

245

ಆಕಾಶವು ಸೀಮಾರಹಿತವು ಇದು ನಿರುಪಾಧಿಯಾಗಿದ್ದರೂ
ಘಟದ ಪ್ರತಿಬಂಧಕವ ಕಾಣುವದರಿಂದ ಆಕಾಶದ ನಿಸ್ಸೀಮತ್ವದ
ದರ್ಶನದಿಂ ದೂರವು ಯೋಗಿಯು ಪೂರ್ಣಾತ್ಮನಾಗಿದ್ದರೂ
ತನ್ನೊಳಿಲ್ಲದ ಪ್ರತಿಬಂಧಕವ ಕಲ್ಪಿಸಿ ತನ್ನ ಅಖಂಡತ್ವದಿಂ ದೂರನು
ಇಲ್ಲದಭಿಮಾನ ರೂಪ ಪ್ರತಿಬಂಧಕ ಇಲ್ಲವಾಗಲು
ಇದ್ದಂತಿರುವ ಚಿನ್ಮಯ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 65 ॥

246

ಸ್ಥಿತಪ್ರಜ್ಞತ್ವ ಸರ್ವರಿಗೆಲ್ಲಿಯದು ಸ್ವಸ್ವರೂಪಮಾದ ಅವಿರಳಾನಂದ
ದೇಹಾಭಿಮಾನ ರೂಪ ಪ್ರತಿಬಂಧಕದಿಂ ದೂರವಾದವಂಗೆ
ತನ್ನೊಳ್ ತನ್ನಿಂದ ತನಗದು ವೇದ್ಯವು
ಯೋಗೀಶ್ವರನಿಗೆ ಅಹಂತ್ವ ನಿರಶನವಾಗಿರುವದರಿಂದ
ಅಖಂಡಾನಂದಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 66 ॥

247

ಘಟಾಕಾಶ ಮಹಾಕಾಶ ಸ್ವರೂಪವಿದ್ದರೂ
ಘಟ ಒಡೆಯದ ವಿನಃ ಮಹಾಕಾಶವೆನಿಸದು
ಯೋಗಿಯು ದೇಹಾದಿಗಳಿಗೆ ಸಾಕ್ಷಿ
ಅಸಂಗ ಸ್ವಯಂ ಪ್ರಕಾಶ ಚಿದಾನಂದ ತಾನೆಂಬ ಜ್ಞಾನವಿದ್ದರೂ
ಅಹಂ ಮಮ ನಾಶವಾಗದಿರೆ
ಸವೆಯದಾನಂದಮಾದ ಸಚ್ಚಿದಾನಂದ ಅದೆಲ್ಲಿಯದು

ಸವೆಯದಾನಂದ ಸವಿಯುವ ಯೋಗೀಶ್ವರಂಗೆ
ದೇಹಾಭಿಮಾನ ಅದೆಲ್ಲಿಯದು
ನಿರಂಜನ ಪ್ರಭು ನಾಗೇಶ್ವರಾ || 67 ||

248

ದೇಗುಲದೊಳಿರುವ ದೇವರೆಂದರೂ ಕರ್ಮದಿಂದುಕ್ತವು
ಅದು ಆವಕಾರಣದಿಂ ಭಿನ್ನವಾಗಲು
ದೇವರಾಗಿರಲು ಸಾಧ್ಯವೆ
ಅದರ ಗತಿ ಮಾನವರಿಚ್ಛೆಯ ಮೇರೆಗೆ ನಿಂತಿಹುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 68 ||

249

ಕರ್ಮಠರಾದ ಯೋಗಿಗಳು ಕುಂಭಕದಿಂ ಮೈ ಮರೆತು
ಗೆದ್ದಲು ಬೆಳೆದು ಮಹಾ ಯೋಗೀಶ್ವರನೆಂದು
ಲೋಕದೋಳ್ ಕೀರ್ತಿಕಾಯರಾದರೂ ಆವರಣದಿಂದುಕ್ತರು
ಅವರ ಗತಿ ಅವರ ಆಲೋಚನೆಯ ಮೇರೆಗೆ ನಿಂತಿದೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 69 ||

250

ಆವರಣದಿಂದುಕ್ತರಾದವರು ಸಕಾಮಿಯಾಗಿರಲಿ ನಿಷ್ಕಾಮಿಯಾಗಿರಲಿ
ಈಶ್ವರಾಧಕನಿರಲಿ ಲಿಂಗವಂತನಿರಲಿ ಜಂಗಮವಂತನಿರಲಿ ವೈದಿಕನಿರಲಿ
ಜಗತ್‌ಸತ್ಯ ಜೀವ ಬ್ರಹ್ಮಾದಿಗಳ ಭೇದಸತ್ಯ
ಸಾಲೋಕ್ಯಾದಿ ಪದಗಳು ಸತ್ಯವೆಂಬ ಕಲ್ಪಿತರ ಗತಿ
ಅಂತ್ಯಕಾಲದ ಆಲೋಚನೆಯ ಮೇರೆಗೆ ನಿಂತಿದೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 70 ||

251

ಆಕಾಶವು ಮನೆಯೊಳಿದ್ದರೇನು ಮಠದೊಳಿದ್ದರೇನು
ಆಕಾಶವತ್ ಆಕಾಶವು
ಯೋಗಿಯು ಅಂಬರನಾಗಿರಲಿ ದಿಗಂಬರನಾಗಿರಲಿ ಚಿದಾಕಾಶನು
ಚಿತ್‌ಸ್ವರೂಪನು ಕಲ್ಪನೆಗಳಿಲ್ಲದ ಅಕಲ್ಪಿತನು
ತಾನನ್ಯವೆಂಬುದಿಲ್ಲದ ನಿರಾಳ ನಿಜವಂತನಿಗೆ ಅಂತ್ಯಕಾಲವೆಲ್ಲಿಯದು
ನಿರಂಜನ ಪ್ರಭು ನಾಗೇಶ್ವರಾ || 71 ||

252

ಅಖಂಡದೊಳ್ ಖಂಡವ ಕಲ್ಪಿಸುವವರೇ ಕಲ್ಪಿತರು
ಅವರೆ ಕರ್ಮಿಗಳು ಇವರು ತಾವಾರೆಂದರಿಯಲಿಲ್ಲ
ಅರಿಯದ್ದರಿಂದ ಇವರ ದೃಷ್ಟಿಯು ಮಾಯಿಕ
ಮಾಯಿಕರಿಗೆ ಜಗವು ಜಗದೊಡೆಯನು
ಜೀವಿಗಳು ಮಾಯಿಕ ಕಾಣಾ
ನಿರಂಜನ ಪ್ರಭು ನಾಗೇಶ್ವರಾ ॥ 72 ॥

253

ಮಾಯಿಕದೊಳ್ ಮನವು ದೃಢವಾದವಂಗೆ ನಿರ್ಮಾಯದ
ಘನತ್ವ ಅದೆಂತು ಸಾಧ್ಯ
ಇವರು ಪಂಚಪ್ರಕಾರದ ಭೇದ ಜ್ಞಾನಿಗಳು
ಮೂಢಮತಿಯರು ಸದ್ಗುರು ಕರುಣಾಮೃತದಿಂ ದೂರವಾಗಿದ್ದರಿಂದ
ಇವರ ಗತಿ ಇವರ ಮಾತಿನ ಮೂಲಕ ವಿವರಿಸಬಹುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 73 ॥

254

ತಾನಾರೆಂದರಿತು ತನ್ನರುವು ಕರಿಗೊಂಡವನೆ ಸುಖಾಮೃತ
ಸುಖಾಮೃತವೆಂಬುದು ಸುಖದ ಸುಖ
ಅರುವಿನರುವು ಅರಿಯದರವು
ಅಲ್ಲಿ ಜೀವ ಶಿವರೈಕ್ಯವೆಂಬ ಯೋಗಾ ಯೋಗಕ್ಕೆಡೆಯಿಲ್ಲ
ಕೂಡಲಿಲ್ಲದ ಘನ ಅಗಲದನುಪಮ
ನಿಸ್ಸೀಮ ಅಚಿಂತ್ಯ ಘನಕ್ಕೆ ಅದಾವ ಗತಿ
ಅದಾವ ಸ್ಥಳವ ಪಡೆಯುವದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 74 ॥

255

ತನ್ನ ತಾನರಿತ ಘನಕ್ಕೆ ಘನ ಏನೆಂಬೇನೆಂಬೆ ಶೃತಿಗಗೋಚರ
ಅಂದು ಇಂದು ಎಂದೆಂದೂ ಇದ್ದಂತಿರುವ ಅನುಪಮ
ಆ ಮಹಾಂತನ ಘನ ಅದಾರು ವರ್ಣಿಸುವದು
ಗತಿ ಅದಾರು ನಿಶ್ಚಿಯಿಸುವದು ಏನೊಂದುಸರಲು
ಇಂಬಿಲ್ಲವಾದ್ದರಿಂದ ಆ ಮಾರ್ಗ ವಿಕಲ್ಪ ವರ್ಜನ
ಆದ್ದರಿಂದ ಸಾಕ್ಷಾತ್ಕಾರ ತನ್ನಿಂದ ತಾನಾಗಿ ಸ್ವತಃ ಸಿದ್ಧವು ನೋಡಾ

ನಿರಂಜನ ಪ್ರಭು ನಾಗೇಶ್ವರಾ || 75 ||

256

ಅರಿತ ಮಹಾಂತ ಏಕ ಏವ ಅದ್ವಿತೀಯ
ಘನ ನಿರಂತರ ಸ್ವಯಂ ಜ್ಯೋತಿ
ಅಲ್ಲಿ ಕಲಿತನವಿಲ್ಲ ಕಲ್ಪನೆ ಇಲ್ಲ ಕಲ್ಪಿತನೂ ಇಲ್ಲ
ಅಚಿಂತ್ಯಘನ ತಾನಾದವನ ಗತಿ ಅದಾರು ನಿಶ್ಚಯಿಸುವದು
ಕಲ್ಪನೆಗೆಡೆಗೊಡದ್ದರಿಂದ
ಅವನ ಮಾರ್ಗ ವಿಕಲ್ಪ ವರ್ಜವಿರುವದರಿಂದ
ಸಾಕ್ಷಾತ್ಕಾರ ತಾನಾಗಿ ಬರುವದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 76 ||

257

ಸ್ವಯಂಪ್ರಕಾಶ ತಾನೆಂದರಿತ ಘನ ಅವ್ಯಯ ಅಜನಾಗಿರುವಾಗ
ಅವನ ಗತಿ ಅದಾರು ನಿಶ್ಚಿಯಿಸುವರು, ಅವನೋಳ್ ಸ್ಮೃತಿ ವಿಸ್ಮೃತಿ
ಸತ್ಯವಾದುದಿಲ್ಲ ಉದಯಾಸ್ತವೆಂಬುದಿಲ್ಲ ಬಂಧ ಮೋಕ್ಷಗಳ
ದ್ವಂದ್ವ ಕಾಣದ್ದರಿಂದ
ತೇಜೋಮಯನ ಮಾರ್ಗ ವಿಕಲ್ಪ ವರ್ಜವಾದುದರಿಂದ
ಸಾಕ್ಷಾತ್ಕಾರವೆಂಬುದು ತನಗದು ಸ್ವತಃ ಸಿದ್ಧವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 77 ||

258

ಸರ್ವಾತ್ಮ ತಾನಾದ ಯೋಗಿ ಜ್ಞಾನಾಮೃತ ನಿರ್ಭಾವಸಂಪನ್ನ
ನಿತ್ಯಾನಂದ ಅಲ್ಲಿ ಕಲ್ಪನೆಗಳ ಕಟ್ಟಿ ಅದಾರು ನಿಶ್ಚಿಯಿಸುವದು
ಸರ್ವವೂ ತಾನಾದ ಶಿವಯೋಗಿಗೆ ಗತಿ ಆವುದು ಅಗತಿ ಆವುದು
ಅವಿಭಾಗವು ವಿಭಾಗವಾಗುವುದೆ
ಜ್ಞಾನಾಮೃತನಿಗೆ ಸತ್ತುದು ಆವುದು
ಬದುಕಿದುದು ಆವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 78 ||

259

ವರ ಯೋಗಿಯು ಗುಣರಹಿತನು ಸಮಸ್ವರೂಪನು ಅಲ್ಲಿ ಗುಣ
ಕಾರ್ಯಕ್ಕಿಂಬಿಲ್ಲ ಪೂರ್ಣಾನಂದಮಯನು

ಅವನ ದೇಹ ಕಾಶಿಯಲ್ಲಿ ಕಾಲವಾಗಲಿ
ಚಾಂಡಾಲ ಮನೆಯಲ್ಲಿ ಕಾಲವಾಗಲಿ ದೇಹ
ಭಾವ ಅತ್ಯಂತಾಭಾವವಾದ್ದರಿಂದ ಪುನಃ ಹುಟ್ಟುವದಿಲ್ಲ ಸಹಜ
ಪರಬ್ರಹ್ಮದಲ್ಲಿ ಸಮರಸ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 79 ||

260

ಯೋಗಿವರನು ನಿಜಾನಂದನು ಘನಮಹಿಮನೋಳ್
ಮಾಯೆಕ್ಕಿಂಬಿಲ್ಲವಾದುದರಿಂದ ತೀರ್ಥ ಅದುವೆ ಮನೆ ಅದುವೆ
ಮಠ ಅದುವೆ ಬ್ರಾಹ್ಮಣ ಅದುವೆ
ಚಾಂಡಾಲ ಅದುವೆ ನಾ ನೀನೆಂಬುದು ಅದುವೆ
ಇದ್ದುದಾವುದೋ ಅದುವೆ
ನಿಸ್ಸೀಮ ನಿಜ ಘನ ಅಲ್ಲಿ ಹುಟ್ಟಿದುದು ಇಲ್ಲ
ಸತ್ತುದು ಇಲ್ಲ ಎಂದೆಂದೂ ಇದ್ದಂತಿರುವ ಸಹಜನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 80 ||

261

ತನ್ನ ತಾನರಿವುಡೆ ತಾನೆ ಅಜ ಅಚಿಂತ್ಯ ಅಪ್ರಮಾಣ ಇದ್ದಂತಿರುವ
ಚಿನ್ಮಯನಾಗಿರುವಲ್ಲಿ ತನಗಾವ ದೇಹೇಂದ್ರಿಯಾದಿಗಳು
ತಾನು ಇಲ್ಲ ಅನ್ಯವೂ ಇಲ್ಲ ಏನೇನೂ ಇಲ್ಲ
ಇಲ್ಲದ ದೇಹೇಂದ್ರಿಯಂಗಳ
ಶುಭಾಶುಭಗಳಿಂದಾಗುವ ಸುಖದುಃಖದ ಬಾಧೆ ನನಗಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 81 ||

262

ವಿದೇಹಿಯು ಕೇವಲ ಅರುವು ಪೂರ್ಣಾತ್ ಪೂರ್ಣ
ಅಂದು ಇಂದು ಎಂದೆಂದೂ ಇದ್ದಂತಿರುವ ಸಹಜಾನಂದನು
ಅಲ್ಲಿ ಬದಲಾವಣೆಗಿಂಬಿಲ್ಲ ನಿರುಪಾಧಿ ನಿರಾಲಂಬನಾದುದರಿಂದ
ಆವಾವ ಬಾಧೆಯಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 82 ||

263

ಅರುವರಿತು ಮರಹು ಗೆಟ್ಟು ಸ್ವಯಸುಖದಲ್ಲಿದ್ದ ಘನಮಹಿಮಂಗೆ

ಮರವರುವೆಂಬ ಗಜಿ ಬಿಜಿ ಉಂಟೆ ಅದ್ವಿತೀಯ ಘನನು
ಇದ್ದಂತಿರುವ ಸಹಜನಿಗೆ ಆವಾವ ಬಾಧೆಯಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 83 ||

264

ಗಣನೆಗತೀತನಾದುದರಿಂದ ಅಪ್ರಮಾದಿಯು ಅಚ್ಯೆತ ಚಿನ್ಮಾತ್ರನು
ಈ ಚಿನ್ಮುದ್ರೆ ದೃಷ್ಟಿಗೆ ದೇಹವಿದ್ದರೇನು ನಶಿಸಿದರೇನು
ಬಯಕೆ ಇಲ್ಲ ಬೇಡಿಕೆ ಇಲ್ಲ ರತಿ ಇಲ್ಲ ವಿರತಿ ಇಲ್ಲವಾದುದರಿಂದ
ಸರ್ವೇಶ್ವರನಾಗಿರುವ
ಶಾಶ್ವತಾತ್ಮ ಸ್ಥಿತಿಯನ್ನು ಸೇರುವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 84 ||

265

ಜ್ಞಾನಾಮೃತನಿಗೆ ಬೇಕಾದುದು ಆವುದು ಬೇಡಾದುದು ಆವುದು
ವ್ಯಷ್ಟಿ ಸಮಷ್ಟಿ ಜಗವು ಇದ್ದುದಲ್ಲ ಇಲ್ಲದುದಲ್ಲ
ಒಡಲು ಇಲ್ಲದವನಾದುದರಿಂದ
ಸರ್ವೇಶ್ವರನಾಗಿರುವ ಶಾಶ್ವತಾತ್ಮ ಸ್ಥಿತಿಯನ್ನು ಸೇರುವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 85 ||

266

ಅಮೃತಕ್ಕೆ ಕಾಲ ಗತಿ ಉಂಟೆ ಜಲಕ್ಕೆ ಬಾಯಾರಿಕೆ ಉಂಟೆ
ಯೋಗಿಗೆ ಅತೃಪ್ತಿ ಉಂಟೆ ತೃಪ್ತರೂಪ ತೃಪ್ತಿಯ ನಿಧಿ
ಜ್ಞಾನಾನಂದಮಯನು ಜ್ಞಾನದೇವ
ಅಲ್ಲಿ ಅಹುದಾವುದು ಅಲ್ಲಾವುದು
ವಿಧಿ ಆವುದು ನಿಷೇಧ ಆವುದು
ನಿರಾಮಯನಾಗಿರುವದರಿಂದ
ಶಕ್ತಿ ನಾಶವಾಗದ ಶಾಶ್ವತಾತ್ಮ ಸ್ಥಿತಿಯನ್ನು ಸೇರಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 86 ||

267

ಯೋಗಿಯು ಅಶರೀರಿಯು ಅತೀಂದ್ರಿಯು ಅಲೌಕಿಕನು
ಅದೃಶಿಯಾದುದರಿಂದ ಶೈವನಲ್ಲ ಶಾಕ್ತೇಯನಲ್ಲ
ಭೇದಕನಲ್ಲ ಬಾಧಕನಲ್ಲ

ಆರಂಭ ಮುಕ್ತಾಯವಿಲ್ಲದ
ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 87 ॥

268

ಅವಿಕಾರಿಗೆ ವಿಕಾರವುಂಟೆ
ಅಲ್ಲಿ ಶಿವ ಶಕ್ತಿ ಎಂಬ ಭೇದವಿಲ್ಲ ಅಭೇದವಿಲ್ಲ
ಆದಿ ಅನಾದಿ ಎಂಬುದು ಮುನ್ನಿಲ್ಲ
ಕುರುಹು ಕೂನಂಗಳ್ ಹಂಗು ಹರಿದಿರುವದರಿಂದ
ಭಾವಾತೀತವಾದ ಶಾಶ್ವತಾತ್ಮ ಸ್ಥಿತಿಯುಳ್ಳವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 88 ॥

269

ಸತ್‌ಸ್ವರೂಪನು ಮಿಥ್ಯಾರೂಪ ಪಿಂಡಾಂಡ ಬ್ರಹ್ಮಾಂಡವು
ತನ್ನಲ್ಲಿಯೆ ಹುಟ್ಟಿ ತನ್ನಲ್ಲಿಯೆ ಇದ್ದಂತಾಗಿ
ಕೊನೆಗೆ ತನ್ನಲ್ಲಿಯೆ ಲೀನವಾದುದ ಕಂಡು
ಸ್ವ ಸ್ವರೂಪದೋಳ್ ಮತಿಯು ನಿಶ್ಚಿಯವಾದುದರಿಂದ
ಇದ್ದಂತಿರುವ ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 89 ॥

270

ಶಿವಯೋಗಿಯು ಶಿವಸ್ವರೂಪನು
ಸಕಲ ತತ್ವಂಗಳಾಧಾರನು ಸತ್‌ಸ್ವರೂಪನು
ಘನಮಹಿಮ ಏನೊಂದಾಗದವನು
ಪ್ರಮಾದವುಳ್ಳ ಅಜ್ಞರಿಗೆ ಯೋಗಿಯು
ದೇಹ ಹುಟ್ಟಿದಂತಾಗಿ ಇದ್ದಂತಾಗಿ ನಾಶವಾದಂತಾಗಿ ಭಾಸಿಸಿದರೂ
ಇದ್ದಂತಿರುವ ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 90 ॥

271

ತಾನಾರೆಂದರಿತು ತನ್ನ ಸ್ವರೂಪದೋಳ್
ಮನ ಮಗ್ನವಾದ ಯೋಗಿಗೆ
ಪ್ರಾಣಾಯಾಮವೇಕೆ ನಾಸಾಗ್ರಸ್ಥಾನವೇಕೆ

ಭ್ರೂಮಧ್ಯದೃಷ್ಠಿಯೇಕೆ ಪದ್ಮಾಸನ ಸಿದ್ಧಾಸನವೇಕೆ
ವಿಸ್ಮೃತಿ ಆವುದು ಸ್ಮೃತಿ ಆವುದು
ನಿರವಯನಿಗೆ ವಿಧಿ ಆವುದು ನಿಷೇಧವಾವುದು
ಅಂದು ಇಂದು ಎಂದೆಂದೂ ಇದ್ದಂತಿರುವ
ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು
ನಿರಂಜನ ಪ್ರಭು ನಾಗೇಶ್ವರಾ ॥ 91 ॥

272

ತನ್ನ ತಾನರಿತ ಯೋಗಿ ಅಂದು ಇಂದು ಎಂದೆಂದೂ
ಆತ್ಮ ತಾನೆಂಬುದು ದೃಢವಾಗಿರುವದರಿಂದ
ಯಮ ನಿಯಮಗಳಿಲ್ಲ ಆಸನ ಪ್ರಾಣಾಯಾಮವಿಲ್ಲ
ಅಂತರದೃಷ್ಠಿ ಬಹಿರದೃಷ್ಠಿ ಇಲ್ಲ
ಅಜ್ಞಾನ ಜ್ಞಾನವಿಲ್ಲ
ಇದ್ದಂತಿರುವದರಿಂದ ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 92 ॥

273

ಗುಣರಹಿತನಿಗೆ ಗುಣಂಗಳೆಲ್ಲಿ ಗುಣವಿಲ್ಲದವನು ಸಾತ್ವಿಕನೆ
ರಾಜಸಿಯೆ ತಾಮಸಿಯೆ ಗುಣಗಂಧನೆ ಅಲ್ಲಲ್ಲ
ಸಕಲ ತತ್ವಂಗಳ ಸತ್ತಾ ಸ್ವರೂಪ ತಾನೆಂಬುದು
ಕರಿಗೊಂಡಿರುವದರಿಂದ ಈಶನಾಗಿರುವ
ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 93 ॥

274

ಅಂಗ ಗುಣಗಳಳಿದ ಘನಲಿಂಗಕ್ಕೆ ಅರ್ಪಿತ ಉಂಟೆ
ಅರ್ಚನೆ ಅನುಸಂಧಾನವಾದರೂ ಉಂಟೆ
ಅಲ್ಲಿ ಕರಣಂಗಳೆಂಬ ಕಲ್ಪನೆ
ಇಲ್ಲವಾದುದರಿಂದ ಬೋಧವಿಲ್ಲ ಅಬೋಧವಿಲ್ಲ
ಮಂತ್ರವಿಲ್ಲ ಮುದ್ರೆಯಿಲ್ಲದುದರಿಂದ
ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ

ನಿರಂಜನ ಪ್ರಭು ನಾಗೇಶ್ವರಾ || 94 ||

275

ಸೂರ್ಯನಿಗೆ ಕೈ ದೀಪವೇಕೆ ಭೂದೇವಿಗೆ ಆಸನವೇಕೆ
ಜಲಕ್ಕೆ ವಿಧಿ ಆವುದು ನಿಷೇಧ ಆವುದು
ಸ್ವಯಂಪ್ರಕಾಶ ತಾನೆಂದರಿತ ಮಹಾಂತನಿಗೆ
ಅದಾವ ಪ್ರಕಾಶ ಅದಾವ ದೃಷ್ಠಿ
ತುಂಬಿ ತುಳಕದವನಿಗೆ ವಿಧಿ ಆವುದು ನಿಷೇಧ ಆವುದು
ನಿರ್ಮಾಯನಿಗೆ ಬೋಧವಾವುದು ಅಬೋಧವಾವುದು
ಇದ್ದಂತಿರುವ ಅಖಂಡಾತ್ಮ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 95 ||

276

ಅರಿತವಂಗೆ ನಾನತ್ವವಿಲ್ಲ ಏಕತ್ವವಿಲ್ಲ ಅಣುವೆಂಬುದಿಲ್ಲ ಮಹತ್
ಎಂಬುದಿಲ್ಲ ಕಲ್ಪಿತನೆಂಬುದಿಲ್ಲ ಕಲಿತನವೂ ಇಲ್ಲ ಕಲ್ಪನೆಯೂ
ಇಲ್ಲವಾದ್ದರಿಂದ ಶಾಶ್ವತಾತ್ಮ ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 96 ||

277

ಅನುಪಮನಿಗೆ ಅಂಗನೆಂಬುದಿಲ್ಲ ಲಿಂಗನೆಂಬುದಿಲ್ಲ ಸಮರಸನೆಂಬುದಿಲ್ಲ
ಭವಿಯಲ್ಲ ಭಕ್ತನಲ್ಲ ಅರಿತೆನೆಂಬುದಿಲ್ಲ ಅರಿಯೆನೆಂಬುದಿಲ್ಲ
ನೋಡುವ ನೋಟವಿಲ್ಲ ಮಾಡುವ ಮಾಟವಿಲ್ಲ ಕೂಡುವ ಕೂಟವಿಲ್ಲ
ಅಗಲದನುಪಮ ಅಂತಿಂತೆನಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 97 ||

278

ತಾನಾರೆಂದರಿತ ಸ್ವಪ್ರಭೆ ಸುಸಂಯಮಿ ಎಂಬೆನೆ
ಅಸಂಯಮಿಯು ಅಸಂಗ್ರಹಿಯೆಂಬೆನೆ ಸಂಗ್ರಹಿ ನಿಷ್ಕರ್ಮಿ ಎಂಬೆನೆ
ಸಕರ್ಮಿ ಅವನು ಲೀಲಾಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 98 ||

279

ಯೋಗಿ ವರೇಣ್ಯನು ಸರ್ವಾತ್ಮನೆಂಬೆನೆ ನೇತಾತ್ಮನೆಂಬೆನೆ

ಸರ್ವಾತ್ಮನು ಸವಿಕಲ್ಪನೆಂಬೆನೆ ನಿರ್ವಿಕಲ್ಪನು ನಿರ್ವಿಕಲ್ಪನೆಂಬೆನೆ
ಸವಿಕಲ್ಪನು ಘನಕ್ಕೆ ಘನನಾಗಿರುವದರಿಂದ
ಶಾಶ್ವತಾತ್ಮ ಸ್ಥಿತಿಯ ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 99 ||

280

ಯೋಗಿವರನು ಸರ್ವಾತ್ಮನಾದುದರಿಂದ ಸುಸಂಯಮಿಯು
ನೇತಾತ್ಮನಾದುದರಿಂದ ಅಸಂಯಮಿಯು
ಸವಿಕಲ್ಪನಾದುದರಿಂದ ಸಂಗ್ರಹಿ
ನಿರ್ವಿಕಲ್ಪನಾದುದರಿಂದ ಅಸಂಗ್ರಹಿ
ತಾನೆ ತಾನಾದುದರಿಂದ ನಿಷ್ಕರ್ಮಿ
ಸರ್ವಭೂತ ಹಿತನಾದುದರಿಂದ
ಸಕರ್ಮನಾಗಿಯೂ ಶಾಶ್ವತಾತ್ಮ
ಸ್ಥಿತಿಯನ್ನು ಪಡೆದಿಹನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 100 ||

281

ಮಾತು ಮನಂಗಳಿಗೆ ಮೀರಿರುವದನ್ನು
ಗುರುವಿನಿಂದ ಉಪದೇಶ ಪಡೆಯುವುದು ಹೇಗೆ
ಪಡೆಯುವದದು ಪಡೆದಲ್ಲಿ ಬೋಧಿಸಿದ ಗುರು
ಕಲಿತ ಶಿಷ್ಯ ಸಮ ಪ್ರಕಾಶವಾದ ಸ್ವರೂಪ ತಿಳಿಸಿರುವದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 101 ||

282

ಬೋಧವೆಂಬುದು ಮಾತು ಮನಂಗಳಿಂದುಕ್ತವಾದುದು
ಮಾತು ಮನಂಗಳಿಗೆ ಮೀರಿದ ಘನವ ಬೋಧಿಸುವದಾದರೂ ಅದೆಂತು
ಬೋಧ ಬಾಧಿಸುವುದೆ ಶೃತಿಗಗೋಚರವಾದುದ ಪಡೆದಂತೆ
ಅಲ್ಲಿ ಬೋಧಿಸಿಯೂ ಬೋಧಿಸದವನು ಶ್ರವಣ ಮಾಡಿ ಮಾಡದವನು
ಕಲಿತು ಕಲಿಯದವನು ಎರಡೆಂಬುದು ಒಂದು ಒಂದೆಂಬುದು
ಸಮಪ್ರಕಾಶವಾದ ಸ್ವಯಂಜ್ಯೋತಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 102 ||

ಜ್ಞಾನಾಮೃತ

283

ಅತೀತವು ಮಾತು ಮನಂಗಳಿಂದರಸಬಹುದೆ
ಕಾರ್ಯ ಕಾರಣರೆಂಬ ಕಲ್ಪನೆಯಿಂದ ಕಲ್ಪಿಸಬಹುದೆ
ಗುಣ ಮಣಿ ಗುಣರಹಿತನೆಂದು ಗಣಿಸಬಹುದೆ
ಅಲ್ಲಿ ಒಂದೆಂಬುದಿದೆಯೆ ಎರಡೆಂಬುದಿದೆಯೆ
ಅಖಂಡೈಕರಸದಲ್ಲಿ ಸುಖವನ್ನರಸುವದಾಗಲಿ ತ್ಯಜಿಸುವದಾಗಲಿ ಇದೆಯೆ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

284

ಸರ್ವರೂಪನು ವಿಶ್ವದಂತೆ ಕಂಡರೂ ವಿಶ್ವಂಭರನು ವಿಶ್ವಾತೀತನು
ಅಲ್ಲಿ ಶುದ್ಧಾ ಶುದ್ಧನೆಂಬುದಕ್ಕೆಡೆಯಿಲ್ಲ
ಪ್ರಕೃತಿ ಧರನಲ್ಲ ಪುರುಷ ರೂಪನೂ ಅಲ್ಲ
ರೂಹಿಲ್ಲದವಂಗೆ ಆರಾಧಿಸುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

285

ಪರಾತ್ಪರನಿಗೆ ಪವಿತ್ರವಾವುದು ಅಪವಿತ್ರವಾವುದು
ಸಕಲಕ್ಕಾಧಾರನಾದವಂಗೆ ಆಸನವಾವುದು
ಅಲುಪ್ತ ಪ್ರಕಾಶಕ್ಕೆ ಅದಾವ ದೀಪ ತರುವದು
ಅಲ್ಲಿ ಹಗಲು ರಾತ್ರಿ ಎಂದರಸಲುಂಟೆ
ಜ್ಞಾನಸ್ವರೂಪಕ್ಕೆ ಜ್ಞಾನವಾವುದು ಅಜ್ಞಾನವಾವುದು
ನಿರ್ವಾಣನಿಗೆ ನಾಮ ಅನಾಮ ಎಂದುಸರಲುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

286

ಒಂದಾದ ಘನವ ನೇನೆಂಬೇನೆಂಬೆ ನಾನು ಅದುವೆ ನೀನು ಅದುವೆ
ಸಕಲ ನಾಮರೂಪಂಗಳಾದುದದುವೆ ನಾಮ ರೂಪಕ್ಕಾಧಾರ ಅದುವೆ
ತತ್ವ ತಾತ್ವಿಕಂಗಳಾದುದದುವೆ ಭಾವ ಅದುವೆ ನಿರ್ಭಾವ ಅದುವೆ
ಇರುವದದುವೆ ಇರುವಲ್ಲಿ ನಾನಾರಿಗೆ ನಮಿಸುವದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 4 ॥

287

ಕೂಡದಗಲದ ಪದವೆ ತನ್ನ ಪದ ಸಕಲರ ಪದ ಅದು ಶಿವಪದ
ಏಕಮೇವಾ ದ್ವಿತೀಯ ಘನಪದ ಅದುವೆ ನೆಲೆಯಿಲ್ಲದ ನಿಲುವು
ತನ್ನ ನಿಲುವು ನಿಜನಿವಾಸ ಅಲ್ಲಿ ಕಾರ್ಯಕಾರಣಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 5 ||

288

ನಾನು ಶಿವ ಶಿವ ನಾನು ನನ್ನೊಳ್ ಕೂಡುವದಿಲ್ಲ ಅಗಲುವದಿಲ್ಲ
ನನ್ನ ಪದ ಅಖಂಡ ಪದ ವಿಭಾಗವಾಗದ ಪದ
ಅಲ್ಲಿ ಕಾಣಿಸುವ ದೃಶ್ಯವಿಲ್ಲ
ಕಾಣುವ ದೃಕ್ ಇಲ್ಲ ಶ್ರೇಷ್ಠವಿಲ್ಲ ಕೀಳು ಇಲ್ಲ ಅಹಂ ಇಲ್ಲ ನಿರಹಂ ಇಲ್ಲ
ನಾನೆ ನಾನಾಗಿರುವ ನನ್ನ ಸ್ವರೂಪ ಅದಾರಿಗೆ ನಮಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 6 ||

289

ಆಧಾರ ಆಧೇಯನಾಗದವಂಗೆ ನನಗಾವ ಆಧಾರ
ನಾನಿಲ್ಲದ ದೇಶ ಕಾಲ ವಸ್ತುವುಂಟೆ
ನನಗೆ ಆರಂಭವಿಲ್ಲ ಮುಕ್ತಾಯವಿಲ್ಲ ಭ್ರಾಂತಿಯ ಧೂಮ್ರವಿಲ್ಲ
ನಾನು ಬೆಳಕಿನ ಬೆಳಕು ಮಹಾಬೆಳಕು ಅಖಂಡ ಬೆಳಕಿಗೆ
ಮತ್ತೊಂದು ಬೆಳಕೇಕೆ ನಾನು ಸದಾ ಬೆಳಗುತ್ತಿರುವದರಿಂದ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 7 ||

290

ಜ್ಞಾನಾಮೃತವು ಜ್ಞಾನಾನಂದವು ಸವೆಯದಾನಂದವು
ಅಲ್ಲಿ ಬೇಕಾದುದು ಆವುದು ಬೇಡಾದುದು ಆವುದು
ಕರಣಂಗಳಿವೆ ಇಲ್ಲವೆಂದು ಹೇಳಲಾರೆ
ವಿಷಯಂಗಳಿವೆ ಇಲ್ಲವೆಂದು ಹೇಳಲಾರೆ
ಅವಿಚಾರ ವಿಚಾರಗಳಿವೆ ಇಲ್ಲವೆಂದು ಹೇಳಲಾರೆ
ನಿರಂಜನ ಪ್ರಭುವೆಂಬ ಘನವು ಗಗನದಂತಿರುವ
ಜ್ಞಾನಾಮೃತವ ನೇನೆಂಬೇನೆಂಬೆ || 8 ||

291

ಘನಾನಂದವು ಎಂದೆಂದೂ ಇದ್ದಂತಿರುವ ಸುಖಾಮೃತವು
ಅಲ್ಲಿ ಇಚ್ಛಾನಿಚ್ಛೆ ಇವೆ ಇಲ್ಲವೆಂದು ಹೇಳಲಾರೆ
ಸಾರನಿಸ್ಸಾರವಾವುದು ಅಲ್ಲಿ ಸಂಗಿಯಾರು ನಿಸ್ಸಂಗಿಯಾರು
ನಿರಂಜನ ಪ್ರಭುವೆಂಬ ಘನವು
ಗಗನದಂತೆ ಅಖಂಡವಾದ ಜ್ಞಾನಾಮೃತವನೇನೆಂಬೇನೆಂಬೆ ॥ 9 ॥

292

ಆದುದು ಹೋದುದು ಜ್ಞಾನಾಮೃತವೇ
ಜ್ಞಾನಾಮೃತವೆಂಬುದು ಇದ್ದಂತಿದ್ದುದು
ಅಲ್ಲಿ ಮೋಹ ಇದೆ ಇಲ್ಲವೆಂದು ಹೇಗೆ ಹೇಳುವುದು
ಅದನ್ನು ಹಿತ ಅಹಿತವೆಂದು ಹೇಗೆ ಹೇಳುವದು
ಗಗನದಂತೆ ವ್ಯಾಪಕವಾದ ಜ್ಞಾನಾಮೃತವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 10 ॥

293

ಗಣಿತಗೊಳಪಟ್ಟುದು ಅಖಂಡವೆ ಅಖಂಡವಾದ ನನ್ನ ಸ್ವರೂಪ
ಆವಾವ ಮತಾಂತರವಾಗದು, ಪಕ್ಷಾಂತರವಾಗದು
ನಿಸ್ಸೀಮವು ಸೀಮೆಗೊಳಗಾಗದು
ನಿರಂಜನ ಪ್ರಭುವೆಂಬ ಘನವು ಗಗನದಂತೆ
ಪೂರ್ಣವಾಗಿರುವ ಜ್ಞಾನಾಮೃತವನೇನೆಂಬೆ ॥ 11 ॥

294

ಇದ್ದಂತಿರುವ ನನ್ನ ಸ್ವರೂಪ ಜೀವನೆನ್ನಲು ಬರದು
ಬ್ರಹ್ಮನೆನ್ನಲು ಬರದು ಜೀವಬ್ರಹ್ಮೈಕ್ಯನೆನ್ನಲು ಬರದು
ಅನೈಕ್ಯನೆನ್ನಲು ಬರದು ಸಂಗಿ ಎನ್ನಲು ಬರದು ನಿಸ್ಸಂಗ
ಎನ್ನಲು ಬರದು ನಾಶವುಳ್ಳುದು ನಾಶರಹಿತನೆನ್ನಲು ಬರದು
ಗಗನದಂತೆ ಸಮರಸವಾಗಿರುವ ಜ್ಞಾನಾಮೃತರೂಪಿ
ನಿರಂಜನ ಪ್ರಭು ಏನೆಂಬೇನೆಂಬೆ ॥ 12 ॥

295

ನಿರಾಲಂಬವು ಆಲಂಬನದಿಂದುಕ್ತವೆ ಆಲಂಬನವು ನಿರಾಲಂಬನವೆ

ಆಲಂಬನ ತಿಳಿಯದ್ದರಿಂದ ನಿರಾಲಂಬನ ಘನವು ತಿಳಿಯದು
ನಿರಾಲಂಬ ಅಂದು ಇಂದು ಎಂದೆಂದೂ ನಿರಾಲಂಬವೆ
ಅದು ಗಗನದಂತೆ ಕೊನೆಮೊದಲಿಲ್ಲದ ಜ್ಞಾನಾಮೃತವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 13 ||

296

ಅರುವು ಎಂದೆಂದೂ ಇದ್ದಂತಿರುವ ಅರುವು
ಸೊಕ್ಕಿದುದು ಅಲ್ಲ ಸೊರಗಿದುದು ಅಲ್ಲ
ಬಂದದ್ದಲ್ಲ ಹೋದದ್ದಲ್ಲ ಪ್ರಾರಂಭವಿಲ್ಲ ಮುಕ್ತಾಯವಿಲ್ಲ
ಅದನ್ನು ಶೇಷವೆಂದು ಅಶೇಷವೆಂದು ಹೇಗೆ ಹೇಳುವದು
ಗಗನದಂತೆ ಸಮಗಸವಾಗಿರುವ ಜ್ಞಾನಾಮೃತವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 14 ||

297

ಸಮರಸ ತತ್ವ ಕೆಡುವದಲ್ಲ ನೆಟ್ಟಗಾಗುವದಲ್ಲ
ರೂಪವಲ್ಲ ನಿರೂಪವಲ್ಲ ಗಮನಾಗಮನವುಳ್ಳುದಲ್ಲ
ನೆನಹಿಂಗೆ ನಿಲುಕದು ನಿರ್ಣಯಕ್ಕೆ ಮೀರಿದುದು
ಆದಿ ಮಧ್ಯಾಂತವುಳ್ಳುದಲ್ಲ
ಅದಕ್ಕೆ ಕ್ಷರ ಅಕ್ಷರವೆಂದು ಹೇಗೆ ಹೇಳುವದು
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

298

ನಿರ್ದೇಹಿಯಾದ ನನಗೆ ಇಂದ್ರಿಯಂಗಳು ನಭದಂತೆ
ಅದರ ವಿಷಯಗಳು ನಭದಂತೆ
ಶುದ್ಧ ಚೈತನ್ಯನಾದ ನನಗೆ ಬಂಧವೂ ಇಲ್ಲ ಮೋಕ್ಷವೂ ಇಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 16 ||

299

ಅರುವೆಂಬುದು ಕೇವಲ ಅರುವು ಅರಿಯದರವು
ಅಲ್ಲಿ ನೋಟವೂ ಇಲ್ಲ ಮಾಟವೂ ಇಲ್ಲ
ಕುರುಹು ಕೂನ ಮುನ್ನಿಲ್ಲ

ಅದು ಸ್ಮೃತಿ ವಿಸ್ಮೃತಿಯುಳ್ಳುದು ಅಲ್ಲ
ಅಲ್ಲಿ ಬದ್ಧ ಮುಕ್ತನೆಂದರಸಲುಂಟೆ?
ನಿರಂಜನ ಪ್ರಭುವೆ
ಗಗನದಂತೆ ಕೊನೆ ಮೊದಲಿಲ್ಲದ ಜ್ಞಾನಾಮೃತವನೇನೆಂಬೇನೆಂಬೆ ॥ 17 ॥

300

ಜ್ಯೋತಿಗೆ ಜ್ಯೋತಿಯೆಂದು ಬೋಧಿಸಲು ಗಹನವಾದುದೇನು
ಜ್ಞಾನಮೂರ್ತಿಗೆ ಜ್ಞಾನ ಸ್ವರೂಪನೆಂದು
ಬೋಧಿಸಲು ಗಹನವಾದುದೇನು
ಅರುವಿನಿಂದ ತನ್ನಿರವರಿಯಲು ಸಮೀಪ ದೂರವೆಂಬುದಳಿದು
ನಿರಂಜನ ಪ್ರಭುವೆ
ಗಗನದಂತೆ ಪೂರ್ಣಾತ್ ಪೂರ್ಣವಾದ ಜ್ಞಾನಾಮೃತ
ತಾನೆ ತಾನಾದುದು ಇದನೇನೆಂಬೇನೆಂಬೆ ॥ 18 ॥

301

ಕಣ್ಣಿಗೆ ಕಣ್ಣೆಂದು ಬೋಧಿಸಲು ಗಹನವಾದುದೇನು
ಸಕಲವು ಅರುವು ಇದ್ದು
ಅರುವಿಗೆ ಅರುವೆಂದು ಬೋಧಿಸಲು ಗಹನವಾದುದೇನು
ಅಲ್ಲಿ ನಾ ನೀನೆಂಬುದುಂಟೆ
ಇಲ್ಲದುದು ಇಲ್ಲವಾದಲ್ಲಿ
ಅಖಂಡ ಜ್ಞಾನಾಮೃತವು ಸಹಜ ಸಿದ್ಧ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 19 ॥

302

ಬಯಲಿಗೆ ಬಯಲೆಂದು ಬೋಧಿಸಲು ಗಹನವಾದುದೇನು
ಪೂರ್ಣಾತ್ ಪೂರ್ಣನಿಗೆ ಪೂರ್ಣನೆಂದು
ಬೋಧಿಸಲು ಗಹನವಾದುದೇನು ನಿರ್ಭಾವ ತಾನಿದ್ದು
ಭಾವಂಗಳಿಗೆ ಮೀರಿದವನೆಂದು ತಿಳಿಯಲು ಕಠಿಣವಾದುದೇನು
ಇದ್ದಂತಿರುವ ಘನಕ್ಕೆ ಘನವಾದ ತನ್ನಿರವ ನೋಡಲು
ತಾನೆ ಇದ್ದುದರಿಂದ ತನಗದು ಸಹಜ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 20 ॥

303

ಜ್ವಾಲೆ ಇದು ಕಣ್ಣಿಂಗೆ ಕಾಣದ ಜ್ವಾಲೆ ಭೂಮಿ ತಲ್ಲಣಿಸದ ಜ್ವಾಲೆ
ನೀರು ಕುದಿಸದ ಜ್ವಾಲೆ ಅಗ್ನಿಗೆ ಸುಡದ ಜ್ವಾಲೆ
ಪವನದಿಂದ ಫುಟವಾಗದ ಜ್ವಾಲೆ
ಗುರು ಕರುಣೆ
ಯಿಂ ತನ್ನೊಳ್ ಫುಟಿಯುವ ಜ್ವಾಲೆ
ಇದು ಅಖಿಲ ಕರ್ಮಂಗಳ ದಹಿಸುವ ಜ್ವಾಲೆ
ಮರವು ಮಾಯೆಯ ಸುಡುವ ಜ್ವಾಲೆ
ಇದು ಜ್ಞಾನಘನ ಜ್ವಾಲೆ ಅಖಂಡ ಜ್ವಾಲೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 21 ॥

304

ಪ್ರಭೆ ಸ್ವಯಂ ಪ್ರಭೆ ಸಹಜ ಪ್ರಭೆ
ಈ ಪ್ರಭೆ ಆತ್ಮನ ಪ್ರಮಾದರೂಪಿ
ಕತ್ತಲೆ ಕೆಡಿಸುವ ಪ್ರಭೆ
ಜೀವಾತ್ಮನ ತ್ರಿವಿಧ ತಾಪ ಕೆಡಿಸುವ ಸ್ವಯಂ ಪ್ರಭೆ
ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತರೂಪಿ
ಪ್ರಾಪ್ತಿ ಮಾಡುವ ಸಹಜ ಪ್ರಭೆ
ಇದು ಗಗನದಂತಿರುವ ಅಪಾರಜ್ಞಾನಾಮೃತ ಪ್ರಭೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 22 ॥

305

ಅಕಳಂಕವಾದ ನನ್ನ ನಿರವಧಿ ಜ್ಞಾನ ಪ್ರಭೆಯೆ
ಅಕರ್ಮಿ ಆತ್ಮನ ಕರ್ಮ ಕೋಟಿಯನ್ನೆ ಕೆಡಿಸುವ ಪ್ರಭೆ
ಅಚಿಂತ್ಯವಾದ ನನ್ನ ಪ್ರಭೆಯೆ ನಿರ್ದುಃಖ
ಆತ್ಮನ ದುಃಖ ಕಳೆಯುವ ಪ್ರಭೆ
ನಿರ್ವಿಕಾರವಾದ ನನ್ನ ಪ್ರಭೆಯೆ ನಿರ್ದೇಹಿ
ಆತ್ಮನ ದೇಹವನ್ನು ದಹಿಸುವ ಸುಪ್ರಭೆಯಾದುದರಿಂದ
ಗಗನದಂತಿರುವ ನಿಸ್ಸೀಮ ಜ್ಞಾನಾಮೃತ ಪ್ರಭೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 23 ॥

306

ಅಗ್ನಿ ಇದು ಜ್ಞಾನಾಗ್ನಿ ನಿಜಾಗ್ನಿ

ಕೋಹಂ ಎಂಬ ಮರವ ಸುಡುವ ಅಗ್ನಿ
ದೇಹೋಹಂ ಎಂಬ ಬಹಿರಂಗ ಮದವ ಸುಡುವ ಅಗ್ನಿ
ಸೋಹಂ ಎಂಬ ಅಂತರಂಗ ಮದವ ಸುಡುವಅಗ್ನಿ
ಚಿದಹಂ ಎಂಬ ಗುಹ್ಯವಾದ
ತೂರ್ಯಾ ಮದವ ಸುಡುವ ಅಗ್ನಿಯಾದುದರಿಂದ
ಗಗನದಂತಿರುವ ಚಿನ್ನಿಧಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 24 ॥

307

ಅಗ್ನಿ ಇದು ಸಹಜಾಗ್ನಿ ಅಕ್ಷರ ನಾನೆಂಬಹಂಕಾರವ ದಹಿಸುವ ಅಗ್ನಿ
ಅತೀಂದ್ರಿ ನಾನೆಂಬಹಂಕಾರವ ದಹಿಸುವ ಅಗ್ನಿ
ನಿಸ್ಸಂಗ ಕೂಟಸ್ಥ ನಾನೆಂಬಹಂಕಾರವ ದಹಿಸುವ ಅಗ್ನಿಯಾದುದರಿಂದ
ಗಗನದಂತಿರುವ ಜ್ಞಾನಾಮೃತವಾದ ಸಹಜಾಗ್ನಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 25 ॥

308

ಭಾವರಹಿತಂಗೆ ಭಾವವಿಲ್ಲ ಅಭಾವವಿಲ್ಲ
ಯೋಗವಿಲ್ಲ ವಿಯೋಗವಿಲ್ಲ ಮರೆದುದಿಲ್ಲ ಅರಿದುದಿಲ್ಲ
ಕಳಕೊಂಡುದಿಲ್ಲ ಪಡೆದುದಿಲ್ಲ ಆಸಕ್ತಿ ಇಲ್ಲ ಅನಾಸಕ್ತಿ ಇಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 26 ॥

309

ನಿಜವರಿತ ಮಹಾಂತ ಅಸದ್ಭಾವಿಯಲ್ಲ ಸದ್ಭಾವಿಯಲ್ಲ
ಸಂಸಾರಿಯಲ್ಲ ಸನ್ಯಾಸಿಯಲ್ಲ ದೇವತನಲ್ಲ ದೈತ್ಯನಲ್ಲ
ಮನು ಅಲ್ಲ ಮಹರ್ಷಿ ಅಲ್ಲ ಧ್ಯಾನಿಯಲ್ಲ ಮೌನಿಯಲ್ಲ
ಗಗನದಂತೆ ಇದ್ದಂತಿರುವ ಜ್ಞಾನಾಮೃತನಾದ
ಸಹಜ ಮೂರ್ತಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 27 ॥

310

ಅಭವನಿಗೆ ಬದುಕಿದುದು ಇಲ್ಲ ಸತ್ತುದು ಇಲ್ಲ
ಬಂದುದಿಲ್ಲ ಹೋದುದಿಲ್ಲ ರಾಗವಿಲ್ಲ ವಿರಾಗವಿಲ್ಲ

ಕರ್ತೃವಲ್ಲ ಅಕರ್ತೃವಲ್ಲ ಅಹುದಾದುದಿಲ್ಲ ಅಲ್ಲಾದುದಿಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 28 ||

311

ನಾನು ಪೂರ್ಣನು ಎಂದೆಂದೂ ಇದ್ದಂತಿರುವವನು
ಅಲ್ಲಿ ಭಾವಾಭಾವಕ್ಕಿಂಬಿಲ್ಲ ಕೂಡಿದೆನೆಂಬುದಿಲ್ಲ ಅಗಲಿದೆನೆಂಬುದಿಲ್ಲ
ಎರಡಲ್ಲ ಒಂದಲ್ಲ ನಾನೀನೆಂಬುದು ಮುನ್ನಿಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 29 ||

312

ಕಲ್ಪಿತನಾಗದ ನನ್ನೊಳ್ ಕಲ್ಪನೆಯಿಲ್ಲ ಕಲಿತನವು ಇಲ್ಲ
ಕಲಿಯುವದಿಲ್ಲ ಕಲಿಸುವದಿಲ್ಲ ಒಡಲಿಲ್ಲ ನೆರಳಿಲ್ಲ
ಮಾಯೆಯಿಲ್ಲ ಮಾಟವಿಲ್ಲ ಪ್ರಿಯವಾದುದಿಲ್ಲ ಅಪ್ರಿಯವಾದುದಿಲ್ಲ
ಭ್ರಮರಹಿತಂಗೆ ಶೋಕಾ ಶೋಕವೆಂಬುದಿಲ್ಲವಾದುದರಿಂದ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 30 ||

313

ಕ್ಷರಾಕ್ಷರವಾಗದವಂಗೆ ಕರ್ತೃವೆಂಬೆನೆ ಅಕರ್ತೃವೆಂಬೆನೆ
ಕರ್ತಾಕರ್ತೃವಾಗದವನು ಅಹಂಭಾವಿಯಲ್ಲ ನಿರಹಂಭಾವಿಯಲ್ಲ
ಭಾವಾಭಾವಂಗಳ ಗಜಿ ಬಿಜಿ ಇಲ್ಲ ಭೋಗ ತ್ಯಾಗದ ತಾಕಲಾಟವಿಲ್ಲ
ವಿವೇಕಿಯಲ್ಲ ಅವಿವೇಕಿಯಲ್ಲ ಗುಣಾಗುಣಿಯಾಗದ್ದರಿಂ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 31 ||

314

ಚಿದ್ಬಯಲಿಗೆ ಸಂಗರೂಪ ವಿಷಯಾಕಾರವುಂಟೆ
ನಿಸ್ಸಂಗ ರೂಪ ಬ್ರಹ್ಮಾಕಾರವುಂಟೆ
ಅಲ್ಲಿ ಸುಖ ದುಃಖಂಗಳನರಸುವರೆ
ವಿಸ್ಮೃತಿರೂಪ ಬಂಧನವೆಂಬುದಿಲ್ಲ
ಸ್ಮೃತಿ ರೂಪ ಮೋಕ್ಷವೆಂಬುದಿಲ್ಲ

ಇದ್ದಂತಿರುವ ಗಗನ ಸದೃಶಮಾದ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 32 ॥

315

ಕಾಂಡತ್ರಯ ಕಾಣದವಂಗೆ ಪಾಪಿಗಣರಿಲ್ಲ
ಹರಿದಾಡುವ ಮನವಿಲ್ಲ ಮರವಿನ ಮತಿಯಿಲ್ಲ
ಅಲ್ಲಿ ಕರ್ಮ ಉಪಾಸನಾ ಜ್ಞಾನ ಕಾಂಡಕ್ಕಿಂಬಿಲ್ಲವಾದುದರಿಂದ
ಗಗನದಂತಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 33 ॥

316

ಭ್ರಮರಹಿತನಾದ ನನ್ನಲ್ಲಿ ಗುಣತ್ರಯಗಳಿಗಿಂಬುಂಟೆ
ವಿಷಯವಿಲ್ಲ ವಿಷಯಿ ಇಲ್ಲ ಇಂದ್ರಿಯಂಗಳಿಲ್ಲ
ಯಿಲ್ಲಿ ಸ್ವಧರ್ಮವಾವುದು ಪರಧರ್ಮವಾವುದು
ತಿಳಿಯದ್ದು ಇಲ್ಲ ತಿಳಿವುದು ಇಲ್ಲ ಸ್ತುತಿ
ನಿಂದೆ ಇಲ್ಲ ಸದ್‌ಜ್ಞಾನ ಭರಿತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 34 ॥

317

ಬಾಧಾರಹಿತಂಗೆ ಗುಣವಿಲ್ಲ ಗುಣಕಾರ್ಯವಿಲ್ಲ
ಗುಣ ಗಂಧವಿಲ್ಲ ಗುಣಿಯಲ್ಲ ಕಾಮವಿಲ್ಲ ಕಾಮಾಕಾರವಿಲ್ಲ
ವಿವೇಕವಿಲ್ಲ ಅವಿವೇಕವಿಲ್ಲ ಜ್ಞಾನಾಜ್ಞಾನವಿಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 35 ॥

318

ಕಾರ್ಯಕಾರಣ ಕಾಣದವಂಗೆ ಪುರವೆಂಬುದಿಲ್ಲ ಪುರುಷನೆಂಬುದಿಲ್ಲ
ಜಗವಿಲ್ಲ ಜಗದೊಡೆಯರಿಲ್ಲ ಬೃತ್ಯರಿಲ್ಲ ಸ್ವಾಮಿಯಿಲ್ಲ
ಅಂತರಿಲ್ಲ ಬಹಿರ್ ಇಲ್ಲ ಅಲ್ಲಿ ಸತ್ವ ರಜ ತಮಂಗಳ ಅರಸುವರೆ
ಅರಿತ ಪಂಡಿತರಿಲ್ಲ ಮರೆತ ಮಾನವರಿಲ್ಲ
ಗಗನದಂತೆ ಸಮರಸವಾಗಿರುವ
ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 36 ॥

319

ಅಮೃತಕ್ಕೆ ಸಂತಾಪ ಹುಟ್ಟಿಸುವ ಕಹಿ ಇರುವುದೆ
ಅದರ ಸೇವನೆಯಿಂ ಸಂತಾಪವೆ ದುಃಖವೆ
ಅಖಂಡಾನಂದನಾದ ನನಗೆ ಸಂತಾಪ ದುಃಖ
ಕೊಡುವ ಅದಾವ ಗುಣಕಾರ್ಯ
ಜ್ಞಾನಾಮೃತನಾದ ನನ್ನೊಳ್ ಭೀತಿಯೆ
ಅಶಾಂತಿಯೆ ಅಲ್ಲಿ ಕರಣಂಗಳಾದರೂ ಇವೆಯೆ
ಗಗನದಂತೆ ಇದ್ದಂತಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 37 ||

320

ಪರಮಾನಂದ ಪ್ರಾಪ್ತರೂಪನಾದ ನನ್ನಲ್ಲಿ ವಿಧಿ ನಿಷೇಧಗಳುಂಟೆ
ವಿಧಿ ಇದ್ದಲ್ಲಿ ಸುಖ ಸಮಾಧಾನದ ಕಾರ್ಯ ಉಂಟು
ನಿಷೇಧವಿದ್ದಲ್ಲಿ ದುಃಖ ಸಂತಾಪ ಭಯ
ಅಶಾಂತಿಯ ಕಾರ್ಯ ಉಂಟು
ಪೂರ್ಣನಾದ ನನ್ನಲ್ಲಿ ಅಪೂರ್ಣತ್ವಕ್ಕಿಂಬುಂಟೆ
ನನ್ನಲ್ಲಿ ಮನವೂ ಇಲ್ಲ ಅಹಂಕಾರವೂ ಇಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 38 ||

321

ಶಾಂತಿಗೆ ಅಶಾಂತತೆಯೆ ಭಯವೆ ತಾಪತ್ರಯಂಗಳೆ
ಶಾಂತಿ ಅದು ಘನಶಾಂತಿ ನೋಡಾ
ಅಲ್ಲಿ ಚಿತ್ತವೂ ಇಲ್ಲ ಅಹಂಕಾರವೂ ಇಲ್ಲ
ಇಲ್ಲ ಇಲ್ಲವೆಂಬುದು ಇಲ್ಲವಾಗುವುಡೆ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 39 ||

322

ಎರಡೆಂಬುದಿಲ್ಲದವಂಗೆ ಭೀತಿ ಆವುದು ನಿರ್ಭೀತಿ ಆವುದು
ಸಂಕಲ್ಪವಾವುದು ವಿಕಲ್ಪವಾವುದು
ಹಿತವಾವುದು ಅಹಿತವಾವುದು
ಸಾರವಾವುದು ನಿಸ್ಸಾರವಾವುದು ಅಕಲ್ಪಿತ ಘನ ತಾನಾದುದರಿಂ

ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 40 ||

323

ಘನ ಗಂಭೀರಂಗೆ ಭಯಾಭಯಂಗಳುಂಟೆ
ಜೀವ ಈಶ್ವರರೆಂಬುದುಂಟೆ
ಅಲ್ಲಿ ವಿದ್ಯಾವಿದ್ಯೆಂಗಳ ನರಸುವರೆ ಅವಸ್ಥಾದಿಗಳ ಕಲ್ಪಿಸುವರೆ?
ನಿರ್ವಿಕಾರನಾದ ನನ್ನೊಳ್
ಸ್ವಗತ ಸಜಾತಿ ವಿಜಾತಿಗಳೆಂಬ ಭೇದತ್ರಯವಿಲ್ಲದ್ದರಿಂದ
ಗಗನದಂತೆ ಇದ್ದಂತಿರುವ ಅಖಂಡ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 41 ||

324

ಕಡೆ ಮೊದಲಿಲ್ಲದ ಘನಕ್ಕೆ ಆದಿ ಅಂತ್ಯವನರಸುವರೆ
ಅದು ಒಳ ಹೊರಗೆನ್ನದೆ ಭರಿತವು ಅಖಂಡವು
ವಿಚಾರಿಸುವುಡೆ ತಾನೆ ಅಜ ಅವ್ಯಯನಾಗಿರುವದರಿಂದ
ತಾನು ಅದೆಲ್ಲೊ ಹಿಂದೆ ಹುಟ್ಟಿ ಈಗ ನಾಶವಾದನಲ್ಲ ಎಂದೆಂದೂ
ಗಗನದಂತೆ ಇದ್ದಂತಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 42 ||

325

ಪರಮಾರ್ಥತತ್ವ ತನಗಿಂತ ಭಿನ್ನವಾದುದೆ ಅಭಿನ್ನವಾದುದೆ
ಪೂರ್ವಿಕವೊ ಈಗಿನದೋ ಜೀವನದ್ದೊ ಈಶನದ್ದೊ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತವು ನಿರಂತರ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 43 ||

326

ಏಕಮೇವಾ ದ್ವಿತೀಯ ಘನವು ಪರಮಾರ್ಥ ತತ್ವವಾದುದರಿಂದ
ತನಗಿಂತ ಬೇರಾದುದಿಲ್ಲ ಕೂಡಿದುದಲ್ಲ
ಹಿಂದಿನದೆನ್ನಲೂ ಬರದು ಈಗಿನದೆನ್ನಲೂ ಬರದು
ಗಗನದಂತೆ ಎಂದೆಂದೂ ಇದ್ದಂತಿರುವ
ಅಖಂಡ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 44 ||

327

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣ ಮುದಚ್ಯತೆ
ಎಂದು ಹೇಳುವದೆ ಪರಮಾರ್ಥ ತತ್ವವು
ಅದು ಸರ್ವತ್ರ ಸದಾ ಅಂತರ ಬಹಿರ ಭರಿತವು
ಆದುದರಿಂದ ಗಗನದಂತೆ ಅಖಂಡವಾಗಿರುವ
ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 45 ||

328

ರಾಗಾದಿ ದೋಷಗಳಿಂದ ಪಾರಾದುದು ಜ್ಞಾನಾಮೃತವು
ದ್ವೈವಾದಿ ದೋಷಗಳಿಂದ ಪಾರಾದುದು ಜ್ಞಾನಾಮೃತವು
ಸಂಸಾರ ಶೋಕದಿಂದ ಪಾರಾದುದು ಜ್ಞಾನಾಮೃತವು
ಜ್ಞಾನಾಮೃತವು ತಾನು ಇದ್ದಂತಿರುವದರಿಂ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 46 ||

329

ಅವಿದ್ಯಾದಿ ದೋಷಗಳಿಂದ ಪಾರಾದುದು ಜ್ಞಾನಮೃತವು
ವಿದ್ಯಾದಿ ದೋಷಗಳಿಂದ ಪಾರಾದುದು ಜ್ಞಾನಮೃತವು
ವಿದ್ಯಾವಿದ್ಯಾದಿ ದೋಷಗಳಿಂದ ಪಾರಾದುದು ಜ್ಞಾನಾಮೃತವು
ಜ್ಞಾನಾಮೃತವೆಂಬುದು ಅಖಂಡವು ಗಗನದಂತೆ
ವ್ಯಾಪಕವಾದ ಚಿನ್ನಿಧಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 47 ||

330

ಸಮಸ್ವರೂಪವು ಮರೆಯುವ ಅರಿಯುವ ದೋಷದಿಂದ
ಪಾರಾದ ತತ್ವ ನಿರ್ವಿಕಾರವು
ರೂಪಾರೂಪವೆಂಬ ವಿಭಾಗದಿಂದ
ಪಾರಾದ ತತ್ವ ನಿರ್ವಿಶೇಷವು
ನಿತ್ಯಾನಿತ್ಯವೆಂಬ ವಿಭಾಗದಿಂದ ಪಾರಾದ ತತ್ವವಾದುದರಿಂದ
ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 48 ||

331

ಸರ್ವಾತ್ಮಂಗೆ ಮಾಯೆ ಅವಿದ್ಯೆಯೆಂಬ ಉಪಾಧಿವುಂಟೆ
ಅಲ್ಲಿ ಜೀವ ಈಶರೆಂಬ ಆಭಾಸರುಂಟೆ
ಅಲ್ಲಿ ರೂಪಾರೂಪವೆಂಬುದಕ್ಕೆಡೆಯುಂಟೆ
ಅಲ್ಲಿ ಕರ್ತರಾರು ಅಕರ್ತರಾರು ಎಂಬುದನರಿಯೆ
ಗಗನದಂತೆ ಇದ್ದಂತಿರುವ ಅಖಂಡ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 49 ॥

332

ತ್ರಿಪುಟಿ ರಹಿತಂಗೆ ಒಡಲೆಲ್ಲಿ
ಒಡಲಿದ್ದಲ್ಲಿ ಜ್ಞಾತೃ ಜ್ಞಾನ ಜ್ಞೇಯಂಗಳುಂಟು
ಇಲ್ಲದ ತ್ರಿಪುಟಿ ಇಲ್ಲವಾದಲ್ಲಿ ತಿಳಿಯುವ ಚೇತನವೆಲ್ಲಿ
ಅವನ ಸಾಧನಂಗಳೆಲ್ಲಿ ತಿಳಿಯಬೇಕಾದ ಜ್ಞೇಯವಾವುದು
ಮನವಾಣಿಂಗೆ ಮೀರಿರುವದನ್ನು ವಿವರಿಸುವುದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 50 ॥

333

ಅಪ್ರಮಾಣಂಗೆ ಪ್ರಮಾಣಂಗಳೆಲ್ಲಿ
ಪ್ರಮಾಣವಿದ್ದಲ್ಲಿ ಪ್ರಮಾತೃ ಪ್ರಮೇಯ ಉಂಟು
ಇಲ್ಲದ ತ್ರಿಪುಟಿ ಇಲ್ಲವಾಗಲು ಇದ್ದಕ್ಕಿದ್ದಂತಿದ್ದ ಅಚಿಂತ್ಯಾತ್ಮ ತಾನೆ
ಅಚಿಂತ್ಯವೆಂಬುದು ಏನೊಂದುಸರಲು ಎಡೆಗೊಡದ ಘನ ತಾನೆ
ತನ್ನರಿವು ತನ್ನಿಂದ ತನಗದು ವೇದ್ಯವಾಗುವುಡೆ ಶೃತಿಗಗೋಚರ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 51 ॥

334

ನಿರ್ನಾಮನಿಗೆ ವೇದಗಳಿಂದ ತಿಳಿಯುವದಾದರೂ ಅದೆಂತು
ತಿಳಿಸುವದಾದರೂ ಅದೆಂತು ಅವರ್ಣೀಯವು ವರ್ಣನೆಯಿಂದುಕ್ತವೆ
ನಿರ್ಬೇಧ್ಯವು ಭೇದಿಸುವರೆ
ಅಗಮ್ಯ ತಾನಾರೆಂದರಿವುಡೆ ತಾನೆ ನಿರ್ವಾಣ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 52 ॥

335

ಅನುಪಮವು ದ್ವೈತದಿಂದ ತಿಳಿಯಲು ಬರದು
ವಿಶಿಷ್ಠಾದ್ವೈತದಿಂದ ತಿಳಿಯಲು ಬರದು
ಅದ್ವೈತದಿಂದ ತಿಳಿಯಲು ಬರದು
ಜ್ಞಾನಕ್ಕೆ ನಿಲುಕದು ವಿಜ್ಞಾನಕ್ಕೆ ನಿಲುಕದು
ತಾನಾರೆಂದು ತನ್ನ ಸ್ವರೂಪ ತನಗದು ಸಿದ್ಧವಾಗುವುಡೆ
ನಿರಂಜನ ಪ್ರಭುವೆಂಬುದು ಶಬ್ದಮುಗ್ದವಾದುದನೇನೆಂಬೆ ॥ 53 ॥

336

ವಾಣಿಯಿಂದುಕ್ತವಾದುದು ನಿರ್ವಾಣವೆ
ನಿರ್ವಾಣ ಅದನ್ನು ದ್ವೈತವೆಂದು ಹೇಗೆ ಹೇಳುವದು
ಅದ್ವೈತವೆಂದು ಹೇಗೆ ಹೇಳುವದು
ಅಲ್ಲಿ ಹೌದಾವುದು ಅಲ್ಲಾವುದು
ಆಸ್ತಿ ಆವುದು ನಾಸ್ತಿ ಆವುದು ಸತ್ಯಾಸತ್ಯವೆಂಬುದಕ್ಕೆಡೆಯಿಲ್ಲ
ಅದು ಚಿತ್ ಅಲ್ಲ ಎಂದು ಚಿತ್ ಹೌದೆಂದು
ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 54 ॥

337

ಮಾಯಿಕವು ಅವಸ್ಥಾದಿಗಳಿಂದುಕ್ತವು ಭಾವದಿಂದುಕ್ತವು
ಅತೀತವು ಜಾಗೃತವಲ್ಲ ಸ್ವಪ್ನ ಸುಷುಪ್ತಿಯಲ್ಲ
ಅದು ತುರೀಯವಾದರೂ ಹೇಗಾಗುವುದು
ಅದು ಪರಮ ಶಾಂತಿಮಯವು
ಗಗನದಂತೆ ಇದ್ದಂತಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 55 ॥

338

ಗುಣಯುಕ್ತವು ಗುಣಾತೀತವೆ
ಗುಣಾತೀತವೆಂಬುದು ಇದ್ದಂತಿರುವ ಅಖಂಡ ಜ್ಞಾನಸ್ವರೂಪವು
ಅದು ವಿಶ್ವ ತೈಜಸ ಪ್ರಾಜ್ಞವಾಗದು ಅಲ್ಲಿ
ಪ್ರತ್ಯಗಾತ್ಮ ಪರಮಾತ್ಮನೆಂಬುದಾದರೂ ಇದೆಯೆ
ಅದು ಕೇವಲ ಶಾಂತಾನಂದವು
ಗಗನದಂತೆ ಪೂರ್ಣಾತ್ ಪೂರ್ಣಮಯವಾದ

ಜ್ಞಾನಾಮೃತವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 56 ||

339

ತಾನಾರೆಂಬುದು ತಾನು ತಾನೆ ತಾನು ಅವಸ್ಥಾದಿಗಳಿಂದುಕ್ತನೆ
ತಾನು ಏನೊಂದಾಗದವನು ಆದುದೆಲ್ಲ ಕೃತ್ರಿಮ ಮಾಯಿಕ ಭ್ರಾಂತಿ
ಇದ್ದಂತಿರುವ ತನ್ನಂ ಅದಾವ ಭಾಷೆಯಿಂ ವಿವರಿಸುವದು
ನಿರಂಜನ ಪ್ರಭುವೆ ತಾನು ಅವರ್ಣೀಯನೆಂಬುದು
ನಾಚಿ ಶಬ್ದ ಮುಗ್ದವಾದುದನೇನೆಂಬೇನೆಂಬೆ || 57 ||

340

ನಾನು ಅಂದು ಇಂದು ಎಂದೆಂದೂ ಇದ್ದಂತಿರುವ ನಾನು
ನಾನು ಉದ್ದವೂ ಅಲ್ಲ ಅಗಲವೂ ಅಲ್ಲ ಗಿಡ್ಡವೂ ಅಲ್ಲ ನಾನೇ
ವರ್ಣವೂ ಅಲ್ಲ ಸೊಕ್ಕಿದುದು ಅಲ್ಲ ಸೊರಗಿದುದು ಅಲ್ಲ
ನಾನಾವ ಗಣಿತದಿಂದುಕ್ತವಾದ ಭಾಗವೂ ಅಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 58 ||

341

ಏನೊಂದಾಗ ನನ್ನೊಳ್
ದೂರ ದೃಷ್ಠಿಯೂ ಇಲ್ಲ ಸಮೀಪ ದೃಷ್ಠಿಯೂ ಇಲ್ಲ
ಸಣ್ಣತನವಿಲ್ಲ ದೊಡ್ಡಸ್ತನವಿಲ್ಲ ವಿಭಾಗದೃಷ್ಠಿ ಕೋಣವೂ ಇಲ್ಲ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 59 ||

342

ಮರವು ಮಾಯೆಯ ಕಾಣದವಂಗೆ ಭಾವ ನಿರ್ಭಾವವೆಂಬುದುಂಟೆ
ಅಲ್ಲಿ ಹೀನ ಘನವೆಂಬುದುಂಟೆ
ಒಡಲಿಲ್ಲದವಂಗೆ ಹಿತಾಹಿತವೆಂಬುದೆಲ್ಲಿ
ಪ್ರಕೃತಿ ಪುರುಷನೆಂಬುದಿದೆಯೆ
ಗಗನದಂತೆ ಇದ್ದಂತಿರುವ ಅಖಂಡ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 60 ||

343

ನಿರವಯಂಗೆ ಅವಯವಂಗಳುಂಟೆ
ನಿರ್ಮಾಯಂಗೆ ಜನನಿ ಯಾರು
ಜನಕನಾರು ತಾನು ಹುಟ್ಟಿದುದೆಂದು ಸತ್ತುದೆಂದು
ಒಡಲಿಲ್ಲದವಂಗೆ ಮನ ಬುದ್ಧ್ಯಾದಿಗಳೆಲ್ಲಿ
ಪರಮಾರ್ಥ ತತ್ವ ನಿಶ್ಚಿಂತ ನಿರಾಳವು
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 61 ॥

344

ತೋರದಡಗದ ಘನವಂತನಿಗೆ ತೋರಿ ಕೆಡುವ ತನುವೆಲ್ಲಿ
ತನುವೆ ಇಲ್ಲದಿರುವಲ್ಲಿ ಹೆತ್ತವರೆಲ್ಲಿ ಹುಟ್ಟಿದವರೆಲ್ಲಿ
ಅಜನೆಂತು ಜನಿಸಿದನು
ಭಾವ ರಹಿತಂಗೆ ಭ್ರಮೆ ಉಂಟೆ
ಗಗನದಂತೆ ಇದ್ದಂತಿರುವ ಅಖಂಡ ಜ್ಞಾನಾಮೃತ ತಾನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 62 ॥

345

ತಾನಾರೆಂದರಿವುಡೆ ತಾನು ತನುತ್ರಯಂಗಳೆ
ಅಲ್ಲವಾದಲ್ಲಿ ತನಗೆ ಆದಿ ಮಧ್ಯಾಂತ ಉಂಟೆ
ತಾನು ಅನಂತ ಅನಾಮ ಅಚಿಂತ್ಯ
ತನಗಿಂತಧಿಕ ಪೆರತೊಂದುಂಟೆ
ತಾನೆ ಗಗನದಂತೆ ಅಖಂಡವಾಗಿರುವ ಚಿನ್ನಿಧಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 63 ॥

346

ವಿಚಾರ ಅವಿಚಾರಕ್ಕೆ ದೊರಕದ್ದಾವುದೊ
ಅದು ನಿರಂತರವಾಗಿರುವ ಪರ ತತ್ವ
ಅದು ವಿಶುದ್ಧವು ಘನ ಗಂಭೀರವು
ಆವುದರ ಲೇಪನದಿಂದ ಕೆಡದ್ದು ನೆಟ್ಟಗಾಗದ್ದು ಅಂಶಾಂಶಿಗಳಾಗದ್ದು
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 64 ॥

347

ಕ್ಷರಾಕ್ಷರವೆಂಬ ಚಿಂತನೆಗೆ ನಿಲುಕದ್ದಾವುದೋ ಅದುವೆ ಅಚಿಂತ್ಯವು
ಪ್ರಾಪ್ತಿ ಅಪ್ರಾಪ್ತಿ ಎಂಬುವದಕ್ಕತೀತವಾವುದೊ ಅದುವೆ ಸಹಜವು
ಅದು ಅಜ್ಞಾನದಿಂದ ಕೆಡದು ಜ್ಞಾನದಿಂದ ಪವಿತ್ರವಾಗದು
ಅದು ಏನೊಂದಾಗದ ಘನ
ಗಗನದಂತೆ ಇದ್ದಂತಿರುವ ನಿರಂತರ ಅಖಂಡವಾಗಿರುವ
ಜ್ಞಾನಾಮೃತನು ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 65 ||

348

ಬೆರೆಯದ ಬೇರಾಗದಿರುವ ಘನವು ಭೇದಕರಿಗೆ ನಿಲುಕದು
ಬಾಧಕರಿಗೆ ನಿಲುಕದು
ಪ್ರವೃತ್ತಿ ಪರರಿಗೆ ಸಿಗದು ನಿವೃತ್ತಿ ಪರರಿಗೆ ಸಿಗದು
ಅದು ಇದ್ದಕ್ಕಿದ್ದಂತಿರುವ ಜ್ಞಾನಾಮೃತವು ವಿಶುದ್ಧವು
ಸ್ಥಾವರ ಜಂಗಮಾದಿ ಸಕಲ ತತ್ವಂಗಳ ಲೇಪನದಿಂದ ಅಶುದ್ಧವಾಗಿಲ್ಲ
ಅಲ್ಲಿ ಅಂಶಾಂಶಿ ಭಾವವಿಲ್ಲ
ನಿರಂಜನ ಪ್ರಭು ನಾಗೇಶ್ವರಾ || 66 ||

349

ನಿರ್ಮಲಂಗೆ ಮಲತ್ರಯ ಉಂಟೆ
ನಿರಂಜನನಿಗೆ ರಂಜನಾದಿಗಳುಂಟೆ
ನಿರಾಲಂಬನಿಗೆ ಆಲಂಬನ ಉಂಟೆ
ಅಲ್ಲಿ ಸತ್ವಗುಣದಿಂದುಕ್ತವಾದ ದೇವತಾಗಣ ಎಲ್ಲಿ
ಅವರು ವಾಸಿಸುವ ಸ್ವರ್ಗಲೋಕವೆಲ್ಲಿ
ನಾನೆಂಬುದೆಲ್ಲಿ ನೀನೆಂಬುದೆಲ್ಲಿ
ಇದ್ದುದೊಂದೆ ಇರುವದರಿಂದ ಗಗನದಂತೆ ಅಖಂಡವಾದ
ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 67 ||

350

ನಿರ್ಮಾಯಂಗೆ ತಪಸ್ಸು ತ್ಯಾಗವುಂಟೆ ಯೋಗ ವಿಯೋಗವುಂಟೆ
ಕಲಿಯುವದು ಕಲಿಸುವುದು ಉಂಟೆ ಅರಿತೆ ಅರಿಯೆನೆಂಬುದುಂಟೆ

ದ್ವಂದ್ವಾತೀತನು ಸಮದರ್ಶಿ ಸವೆಯದ ಸುಖಿ
ಅಚ್ಚ ಸುಖಿ ತಾನೆ ಕಾಣಾ
ನಿರಂಜನ ಪ್ರಭು ನಾಗೇಶ್ವರಾ || 68 ||

351

ವಿಭಾಗಕ್ಕಿಂಬಿಲ್ಲದ ಘನದೊಳ್
ಇದು ದೃಶ್ಯ ಇದು ದೃಕ್ ಎಂಬುದು
ಆಶ್ಚರ್ಯ ಆಶ್ಚರ್ಯ ನೋಡಾ
ಇದು ನಿತ್ಯವಿದು ಅನಿತ್ಯ ಎಂಬುದು ಆಶ್ಚರ್ಯ ಆಶ್ಚರ್ಯ
ಇದು ಶೇಷ ಅಶೇಷ ಎಂಬುದು ಆಶ್ಚರ್ಯ ಆಶ್ಚರ್ಯ
ಆಶ್ಚರ್ಯವಕಂಡರಲ್ಲದೆ ಏನೊಂದುಸರಲು ಬಾರದ ಘನವು
ತಾನೆಂಬುದು ಅರಿಯಲಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 69 ||

352

ಅಕಳಂಕದೊಳ್ ಕಳಂಕವುಂಟೆ
ಅಲ್ಲಿ ಕಾರಣ ಕಾರ್ಯಗಳನರಸುವರೆ
ಅರಸದಿದ್ದಲ್ಲಿ ಬದ್ಧನೆಂದು ಹೇಗೆ ಅರಸುವದು
ಬುದ್ಧನೆಂದು ಹೇಗೆ ಅರಸುವದು
ವಿಷಯಿ ನಿರ್ವಿಷಯಿ ಎಂದು ಹೇಗೆ ಅರಸುವದು
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 70 ||

353

ಅರಸುವರ ಕಂಡೆ ಅಲಾಪಿಸುವರ ಕಂಡೆ ಅರ್ಚಿಸುವರ ಕಂಡೆ
ತಾಪಸಿಗಳ ಕಂಡೆ ತ್ಯಾಗಿಗಳ ಕಂಡೆ ಅರಿಯುವವರ ಕಂಡೆ
ಅರಿಯದವರ ಕಾಣೆ ಅರಸದವರ ಕಾಣೆ
ಕಂಡರೆ ಎನ್ನಕಂಡವರ ಕಂಡೆ
ತನ್ನ ಕಂಡವರ ಕಂಡೆ ಲೋಕಾಲೋಕ ಕಂಡವರ ಕಂಡೆ
ನಿರಂಜನ ಪ್ರಭು ನಾಗೇಶ್ವರನಕಂಡೆ || 71 ||

354

ಅಂದು ಇಂದು ಎಂದೆಂದೂ ಇದ್ದಂತಿರುವಂಗೆ ಸರ್ವಾತ್ಮನೆಂದು

ಬೋಧಿಸುವದಾದರೂ ಹೇಗೆ
ನೇತಾತ್ಮನೆಂದು ಬೋಧಿಸುವದಾದರೂ ಹೇಗೆ
ಇದು ಉಪಾಧಿ ಇದು ನಿರುಪಾಧಿ ಎಂದು
ವಿಭಾಗಿಸುವದಾದರೂ ಹೇಗೆ
ಇದು ಉಪಾಧಿಗತ ಚೇತನ ಇದು ಉಪಾಧಿರಹಿತ ಚೇತನವೆಂದು
ವಿಭಾಗಿಸುವದಾದರೂ ಹೇಗೆ
ಗಗನದಂತೆ ಅಖಂಡವಾಗಿರುವ
ಜ್ಞಾನಾಮೃತ ತಾನೊಂದೆ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 72 ||

355

ಅನಂಗನಾದ ನಾನು ನಿಷ್ಕರ್ಮನಾದರೂ ನನ್ನ ಸತ್ತಾಸ್ವರೂಪ
ನಿರಂತರ ಪರಮ ಕರ್ಮದಲ್ಲಿ ನಿರತವು
ನನ್ನ ನಿರ್ವಿಕಾರದ ವಿನೋದವೆ ನಿಸ್ಸಂಗ ಮತ್ತು ಪಾರಾಗಿರುವದು
ನಾನು ದೇಹಿಯಲ್ಲ ನಿರ್ದೇಹಿಯಲ್ಲ
ಗಗನದಂತೆ ಅಖಂಡಾಗಿರುವ ಜ್ಞಾನಾಮೃತ ನಾನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 73 ||

356

ನಿರಾಮಯನಾದ ನಾನು ಕರ್ಮರಹಿತನಾಗಿದ್ದರೂ
ನನ್ನ ಸನ್ನಿಧಾನ ಸತ್ತೆಯಿಂ ಸದಾಕರ್ಮದಲ್ಲಿ ರತವು
ನನ್ನ ಸಹಜತ್ವವೆ ನಿಸ್ಸಂಗ ಅದು ಸಂಗದಿಂದ ಅತೀತವು
ನಾನು ಪ್ರಕೃತಿಯಲ್ಲ ವಿಕೃತಿಯಲ್ಲ ಪುರವಲ್ಲ ಪುರದವಾಸಿಯಲ್ಲ
ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 74 ||

357

ಅಲುಪ್ತ ಪ್ರಕಾಶನಾದ ನನಗೆ ಉದಯಾಸ್ತಂಗಳುಂಟೆ
ಸರ್ವವ್ಯಾಪಿಯಾದ ನನಗೆ ದೇಶವೆಲ್ಲಿ ಕಾಲವೆಲ್ಲಿ ವಸ್ತುವೆಲ್ಲಿ
ನಿರವಯನಿಗೆ ಅವಯವಂಗಳೆ
ಅವಯವಂಗಳಿಲ್ಲದಿರುವಾಗ
ದೇಹ ಇಂದ್ರಿ ಪ್ರಾಣ ಮನಾದಿಗಳುಂಟೆ
ಇಲ್ಲದುದು ಇಲ್ಲವಾದಾಗ

ನಾನು ಕಿವಿಡನೂ ಅಲ್ಲ ಮೂಕನೂ ಅಲ್ಲ
ಆವಾವ ಭಾವಂಗಳೂ ನನಗಿಲ್ಲ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ನಾನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 75 ॥

358

ಅಪ್ರತಿಮ ಘನವದು ಪ್ರತಿಮಾರೂಪವೆ
ಇದ್ದಂತಿರುವ ಘನ ಅಲ್ಲಿ ಕಲ್ಪಿತನು
ಇಲ್ಲ ಕಲ್ಪನೆಯಿಲ್ಲ ಕಲ್ಪನಕ್ಕಿಂಬು ಎಡೆಗೊಡದಿರುವಾಗ
ಅಲ್ಲಿ ಇದ್ದವನೆಂದು ಇಲ್ಲದವನೆಂದು ಹೇಗೆ ಹೇಳುವದು
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 76 ॥

359

ಕಾಯ ಚೇತನವುಳ್ಳದ್ದಾಗಿರಲಿ ಅಚೇತನವುಳ್ಳದ್ದಾಗಿರಲಿ
ನಾನು ನಿರಂತರ ಸ್ವಪ್ರಕಾಶದಿಂ ಪ್ರಕಾಶಿಸುತ್ತಿರುವೆ
ಜಗವು ಹುಟ್ಟಲಿ ಹುಟ್ಟದಿರಲಿ
ನಾನು ನಿರಂತರ ಸ್ವಯಂ ಪ್ರಕಾಶದಿಂ ಪ್ರಕಾಶಿಸುತ್ತಿರುವೆ
ಬ್ರಹ್ಮಾದಿಗಳು ಕಾರಣ ಕಾರ್ಯವಾಗಲಿ ಆಗದಿರಲಿ
ನಾನು ಸದಾ ಸ್ವಯಂಪ್ರಕಾಶನಾಗಿ ಪ್ರಕಾಶಿಸುವದರಿಂದ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 77 ॥

360

ಮನವು ವಿದ್ಯೆಯಿಂದುಕ್ತವಾಗಿರಲಿ ಅವಿದ್ಯೆಯಿಂದುಕ್ತವಾಗಿರಲಿ
ವಿದ್ಯಾವಿದ್ಯೆಯಿಂದುಕ್ತವಾಗಿರಲಿ
ನಾನು ಸದಾ ಸ್ವಯಂ ಪ್ರಕಾಶನಾಗಿ ಪ್ರಕಾಶಿಸುತ್ತಿರುವೆ
ಜಗವು ತೋರಲಿ ತೋರದಿರಲಿ
ನಾನು ಸದಾ ಸ್ವಯಂ ಪ್ರಕಾಶನಾಗಿ ಪ್ರಕಾಶಿಸುವದರಿಂದ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 78 ॥

361

ಮನವು ವಾಸನೆಯುಳ್ಳದ್ದಾಗಿರಲಿ ಆಗದಿರಲಿ
ನಾನು ಸದಾ ಸ್ವಯಂಪ್ರಕಾಶನಾಗಿ ಪ್ರಕಾಶಿಸುತ್ತಿರುವೆ
ಮನವು ಲೌಕಿಕ ನೆನವುಳ್ಳದ್ದಾಗಿರಲಿ
ವೀರ ವಿರತಿ ಭಾವವುಳ್ಳದ್ದಾಗಿರಲಿ
ನಾನು ಸದಾ ಸ್ವಯಂ ಪ್ರಕಾಶನಾಗಿ ಪ್ರಕಾಶಿಸುವೆ
ಮನವು ಶೋಕಿಯಾಗಿರಲಿ ಆಗದಿರಲಿ
ನಾನು ಸದಾ ಸ್ವಯಂ ಪ್ರಕಾಶನಾಗಿ ಪ್ರಕಾಶಿಸುವದರಿಂದ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 79 ॥

362

ಪ್ರಕೃತಿ ವಿಕೃತಿ ಹೊಂದದಿದ್ದರೂ ನನ್ನ ಸ್ವರೂಪ
ಸದಾ ಸ್ವಯಂಪ್ರಕಾಶವಾಗಿ ಪ್ರಕಾಶಿಸುತ್ತಿರುವದು
ವಿಕೃತಿ ಹೊಂದಿದರೂ ನನ್ನ ಸ್ವರೂಪ
ಸದಾ ಸ್ವಯಂಪ್ರಕಾಶನಾಗಿ ಪ್ರಕಾಶಿಸುತ್ತಿರುವೆ
ಪ್ರಕೃತಿ ಇದ್ದಂತಿದ್ದರೂ ನನ್ನ ಸ್ವರೂಪ
ನಿರಂತರ ಸ್ವಯಂಪ್ರಕಾಶದಿಂ ಪ್ರಕಾಶಿಸುವದರಿಂದ
ಗಗನದಂತೆ ಅಖಂಡವಾದ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 80 ॥

363

ಅಚಿಂತ್ಯ ಜ್ಯೋತಿಗೆ ಮಾಯಿಕ ಹುಟ್ಟಿದರೇನು ಹುಟ್ಟದಿದ್ದರೇನು
ಅದು ಲೀಲೆಯುಳ್ಳದ್ದಾದರೇನು ಅಲೀಲೆಯುಳ್ಳದ್ದಾದರೇನು
ಪರಾತ್ಪರ ಜ್ಯೋತಿಯೆಂಬುದು
ಎಂದೆಂದೂ ಇದ್ದಕ್ಕಿದ್ದಂತೆ ಬೆಳಗುವದರಿಂದ
ಗಗನದಂತೆ ಸಮರಸವಾಗಿರುವ ಅಖಂಡ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 81 ॥

364

ಬೆಳಕಿನೋಳ್ ಸುಮ್ಮನೆ ಹೇಳುವದಕ್ಕಾದರೂ ಕತ್ತಲು ಉಂಟೆ
ಘನಕ್ಕೆ ಘನವಾಗಿರುವ ಜ್ಞಾನಾಮೃತದೋಳ್ ಜೀವ ಬ್ರಹ್ಮರೆಂದು

ಸುಮ್ಮನೆ ಹೇಳುವದಕ್ಕಾದರೂ ಇಂಬುಂಟೆ
ಜ್ಞಾನಾಮೃತದಂಥ ಜ್ಞಾನನಿಧಿಯು ಇನ್ನೊಂದುದಿದೆಯೆ ಇಲ್ಲ
ಇಲ್ಲವೆಂದಲ್ಲಿ ಎಲೆ ಮನವೆ
ವ್ಯರ್ಥ ಬಡಬಡಿಸಲು ನಿನಗೆನಾಚಿಕೆಯಾಗುವದಿಲ್ಲವೆ
ಗಗನದಂತೆ ಇದ್ದಂತಿರುವ ಅಖಂಡ ಜ್ಞಾನಾಮೃತ
ತಾನೊಂದೆ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 82 ||

365

ಅಖಂಡವಾದ ನನ್ನ ಸ್ವರೂಪದಲ್ಲಿ ನೀನು ನನಗಿಂತನ್ಯವಾಗದ್ದರಿಂದ
ಎಲೆ ಮನವೆ ನೀನು ನನ್ನ
ಸ್ವರೂಪ ಅಬಾಧಿತ ಅಜ ನಿರೂಪ ನಿರುಪಾಧಿ
ನಿನಗೆ ಇಂದ್ರಿಯಗಳಿಲ್ಲ ಪ್ರಾಣಾದಿಗಳಿಲ್ಲ
ಅದಾವ ಕಾರಣದಿಂ ನೀನು ರೋಧಿಸುವದು
ಗಗನದಂತೆ ಅಖಂಡವಾದ ಜ್ಞಾನಾಮೃತೊಂದೆ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 83 ||

366

ಎಲೆ ಮನವೆ ನೀನೆಂಬುದು ನಾನು ನಾನು ಎಂಬುದು ನೀನು
ನೀ ನಾನೆಂಬುದು ಅದುವೆ ಅಲ್ಲಿ ಒಂದೆಂಬುದಿಲ್ಲ ಎರಡೆಂಬುದಿಲ್ಲ
ಸ್ವಗತಾದಿ ಭೇದಗಳಿಲ್ಲ ಕಲ್ಪಿತನಿಲ್ಲ ಕಲ್ಪನೆ ಇಲ್ಲ
ಅಹಂ ಇಲ್ಲ ನಿರಹಂ ಇಲ್ಲ
ಇದ್ದಂತಿದ್ದುದು ಗಗನದಂತೆ
ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 84 ||

367

ಎಲೆ ಚಿತ್ತವೆ ನೀನು ಅಚಿಂತ್ಯನಿದ್ದು
ಚಿಂತನರೂಪನೆಂದು ಭಾವಿಸಲುಂಟೆ
ನೀನು ನಿರ್ವಿಕಾರನಾಗಿದ್ದು
ನಿನ್ನದು ಎನ್ನುವ ರೂಪವಿಲ್ಲದಿರುವಾಗ ಚಿಂತಿಸುವದದೇತಕೆ
ಅಖಂಡ ಸ್ವರೂಪವೆ ನೀನಾಗಿರುವಲ್ಲಿ ಸಕಲವು ನಿನ್ನ ಸತ್ತಾ ಸ್ವರೂಪವು
ಹೀಗಿದ್ದು ಅದೇಕೆ ರೋಧಿಸುವದು

ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 85 ॥

368

ಎಲೆ ಚಿದಾಭಾಸನೆ ನೀನು ಚಿದಾಕಾಶ ಚಿತ್‌ಸ್ವರೂಪನಿದ್ದು
ಆಭಾಸನೆಂದು ಅದೇಕೆ ರೋಧಿಸುವಿ
ಚಿದಾಭಾಸನೆಂಬುದು ಚಿತ್‌ಸ್ವರೂಪವು
ಚಿತ್‌ಸ್ವರೂಪ ಚಿದಾಕಾಶಕ್ಕಿಂತನ್ಯವಲ್ಲ
ನಿರವಯಂಗೆ ಅವಯವಂಗಳುಂಟೆ
ಅವಯವಂಗಳಿಲ್ಲವೆಂದಲ್ಲಿ ಹುಟ್ಟಿದುದೆಲ್ಲಿ
ಬಾಲ್ಯ ಯೌವ್ವನ ಮುಪ್ಪು ಮರಣವೆಲ್ಲಿ
ಇಲ್ಲದುದು ಇಲ್ಲವಾದ್ದರಿಂದ
ಗಗನದಂತೆ ಅಖಂಡ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 86 ॥

369

ಅಮೃತಕ್ಕೆ ಹಸಿವುಂಟೆ ಜಲಕ್ಕೆ ತೃಷೆಉಂಟೆ ತೃಪ್ತರೂಪ ತೃಪ್ತನಿಗೆ
ಆಶೆ ನಿರಾಶೆಯುಂಟೆ ಭ್ರಮರಹಿತನಾದವಂಗೆ
ಬೋಧವೇನು ಅಬೋಧವೇನು
ಭೋದಾಬೋಧವೇನು
ಜ್ಞಾನಸ್ವರೂಪಂಗೆ ಅಜ್ಞಾನವಾವುದು ಜ್ಞಾನವಾವುದು
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 87 ॥

370

ನಿಧಿಗೆ ಬಡವ ಬಲ್ಲಿದರುಂಟೆ ಚಿಂತಾಮಣಿಗೆ
ಬೇಕಾದುದು ಆವುದು ಬೇಡಾದುದು ಆವುದು
ಕೂಡದಗಲದ ಅವಿರಳಾನಂದಕ್ಕೆ ಅಂಗರೂಪ
ಸತಿ ಯಾರು ಲಿಂಗರೂಪ ಪತಿಯಾರು
ಪೂರ್ಣಂಗೆ ಅರಿತವರಾರು ಅರಿಯದವರಾರು
ಅಲ್ಲಿ ತಾನೆಂಬುದಿಲ್ಲ ತನ್ನದೆಂಬುದಿಲ್ಲ
ಗಗನದಂತೆ ಸಮರಸವಾದ ಜ್ಞಾನಾಮೃತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 88 ॥

371

ನಾನೆಂಬುದು ಕಲ್ಪಿತ ನೀನೆಂಬುದು ಕಲ್ಪನೆ ಕಲ್ಪಿತ ಕಲ್ಪನೆ ಬೇರೆಯೆ
ಅಕಲ್ಪಿತನ ಸತ್ತಾ ಸ್ವರೂಪವೆ ಕಲ್ಪಿತ ಕಲ್ಪಿತನ ಸತ್ತಾ ಸ್ವರೂಪವೆ ಕಲ್ಪನೆ
ಕಲ್ಪಿತ ಕಲ್ಪನೆ ಎರಡಾಗಿ ಕಂಡರೂ ಸತ್ತಾ ಸ್ವರೂಪವೊಂದೆ
ಅಲ್ಲಿ ನಿನಗೂ ನನಗೂ ಲಿಂಗ ಪ್ರಪಂಚವಿಲ್ಲ ಭೇದವಿಲ್ಲ ಅಭೇದವಿಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 89 ॥

372

ನಾನಾರೆಂದರಿಯುವುಡೆ ನಾನೆಂಬುದಿಲ್ಲ ನೀನೆಂಬುದಿಲ್ಲ
ನನಗೂ ತನು ತ್ರಯವಿಲ್ಲ ನಿನಗೂ ತನುತ್ರಯವಿಲ್ಲ
ನನಗೂ ನಿನಗೂ ಭೇದವಿಲ್ಲ ಅಭೇದವಿಲ್ಲ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ಒಂದೇ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 90 ॥

373

ನನ್ನ ಸ್ವರೂಪವೆ ನಿನ್ನ ಸ್ವರೂಪವಾದ್ದರಿಂದ
ನಿನ್ನೊಳ್ ಅಣುಮಾತ್ರವಾದರೂ ಉಪಾಧಿ ಇಲ್ಲ ಒಡಲಿಲ್ಲದವಂಗೆ
ರಾಗವಾವುದು ವಿರಾಗವಾವುದು ಅಂಶಾಂಶಿ ಭಾವವಿಲ್ಲ ಭಾಗವಿಲ್ಲ
ಕಲ್ಪಿತರೆಂಬುದಿಲ್ಲ ಕಲ್ಪನೆ ಇಲ್ಲ ನೀನು ನಾನೆ ಆಗಿರುವದರಿಂದ
ಗಗನದಂತೆ ಸಮರಸವಾಗಿರುವ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 91 ॥

374

ನನ್ನ ಸ್ವರೂಪ ನಿಸ್ಸೀಮವಾಗಿರುವಲ್ಲಿ
ನೀನು ನನಗಿಂತ ಭಿನ್ನವಾಗಿರಲಿಂಬುಂಟೆ
ಬೇರಾಗದಿರುವಾಗ ಕೂಡಿದುದೆಲ್ಲಿ
ನಾನು ನೀನೆ ನೀನು ನಾನೆ ಅಲ್ಲಿ
ಅಣುಮಾತ್ರವೂ ಅಂಶಾಂಶಿ ಭಾಗಕ್ಕೆಡೆಯಿಲ್ಲ
ಪ್ರೀತಿ ಇಲ್ಲ ಅಪ್ರೀತಿ ಇಲ್ಲ
ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 92 ॥

375

ನೀನೆಂಬುದು ಅಖಂಡ ಜ್ಞಾನಾಮೃತ
ನಿನ್ನ ಹೃದಯವು ಜ್ಞಾನಮಯವೂ ಅಲ್ಲಿ ವಿಭಾಗಕ್ಕೆಡೆಯಿಲ್ಲ
ಅಲ್ಲಿ ಪಿಂಡಾಂಡವಾವುದು ಬ್ರಹ್ಮಾಂಡವಾವುದು
ಧ್ಯಾತನಿಲ್ಲ ಧ್ಯಾನವಿಲ್ಲ ಸಮಾಧಿಯು ಇಲ್ಲ
ಅಖಂಡವು ಖಂಡವಾಗುವುದೆ
ಅಲ್ಲಿ ದೇಶ ಕಾಲ ವಸ್ತುವಿಗಿಂಬಿಲ್ಲವಾದ್ದರಿಂದ
ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 93 ॥

376

ಶ್ರೀಗುರು ದತ್ತನ ಸಾರಭೂತ ತತ್ವವ ಹೇಳಿರುವೆ
ಇದ್ದಂತಿದ್ದಹಾಗೆ ತಿಳಿವುಡೆ
ನಿಸ್ಸೀಮ ತಾನೆ ಸ್ವತಂತ್ರ ತಾನೆ ಸಹಜ ತಾನೆ
ಅಲ್ಲಿ ಅಹಂ ಇಲ್ಲ ತ್ವಂ ಇಲ್ಲ ತಿಳಿದವರಿಲ್ಲ ತಿಳಿಯದವರಿಲ್ಲ
ಗುರು ಇಲ್ಲ ಶಿಷ್ಯ ಇಲ್ಲ
ಗಗನದಂತೆ ಅಖಂಡವಾದ ಜ್ಞಾನಾಮೃತ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 94 ॥

377

ಪರಮಾರ್ಥ ತತ್ವ ಅರಿವುಡೆ ತಾನೆ ತಾನು
ಮಾತುಮನಂಗಳಿಗೆ ಮೀರಿರುವಾಗ
ಅಲ್ಲಿ ಮಾತಿನ ಬಂಟತನ ನಡೆಯದು
ವಿಚಾರದ ಚತುರತನ ನಡೆಯದು
ಅರುವಿನ ಗುರುತನ ನಡೆಯದು
ಸರ್ವವೂ ನೀನೆಂಬ ಕಿರಿತನ ನಡೆಯದ್ದರಿಂದ
ಅದು ಆನಂದರೂಪು ಆನಂದರೂಪಲ್ಲ
ಜ್ಞಾನವೆಂದು ವಿಜ್ಞಾನವೆಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 95 ॥

ನಿರ್ವಾಣ

378

ಮಾತು ಮನಂಗಳಿಗೆ ಮೀರಿದವಂಗೆ
ಆನೆಂಬುದಿಲ್ಲ ಅನ್ಯವೆಂಬುದಿಲ್ಲ
ಯಂತ್ರವಿಲ್ಲ ತಂತ್ರವಿಲ್ಲ ಅರ್ಚನೆಯಿಲ್ಲ ಅನುಸಂಧಾನಯಿಲ್ಲ
ಇಲ್ಲ ಇಲ್ಲವೆಂಬುದು ಇಲ್ಲವಾಗಿ
ನಿರಂಜನ ಪ್ರಭುವೆಂಬ ಮಹಾ ಬೆಳಗಿನ
ಬೆಳಗಾಗಿದ್ದು ಶಬ್ದ ಮುಗ್ಧವಾದುದನೇನೆಂಬೆ || 1 ||

379

ತಾನಾರೆಂದರಿಯಲು ಶೃತಿಗಳಿಗಗೋಚರ ತಾನೆ
ಅವಾಙ್ಮನಸಗೋಚರ ತಾನಿರುವಲ್ಲಿ ತನಗಿಂತಧಿಕ ಪರದೈವವಿಲ್ಲ
ಅಲ್ಲಿ ಆವ್ಹಾನವಿಲ್ಲ ವಿಸರ್ಜನೆ ಇಲ್ಲ ಸಂಗವಿಲ್ಲ ಸಂಬಂಧವಿಲ್ಲ
ಕೂಡಿದುದಿಲ್ಲ ಅಗಲಿದುದಿಲ್ಲ ಶಿವಾರ್ಚನೆಯಿಲ್ಲ ಆತ್ಮಾರ್ಚನೆಯಿಲ್ಲ
ನಿರಂಜನ ಪ್ರಭುವೆಂಬ ಮಹಾ ಬೆಳಗಿನ ಬೆಳಗಾಗಿದ್ದು
ಶಬ್ದಮುಗ್ಧವಾದುದನೇನೆಂಬೆ || 2 ||

380

ಅರಿತವಂಗೆ ತಾನಿಲ್ಲ ಇದಿರಿಲ್ಲ ಸ್ವಾಮಿ ಇಲ್ಲ ಬೃತ್ಯ ಇಲ್ಲ
ಕರೆಯುವದಿಲ್ಲ ಕಳಿಸುವದಿಲ್ಲ ಪೂಜೆ ಇಲ್ಲ ಅಪೂಜೆ ಇಲ್ಲ
ನಿರಂಜನ ಪ್ರಭುವೆಂಬ ಮಹಾಬೆಳಗಿನೋಳ್ ಘನಕ್ಕೆ ಘನವಾಗಿರ್ದು
ಶಬ್ದಮುಗ್ಧವಾದುದನೇನೆಂಬೆ || 3 ||

381

ಸಮ್ಯಜ್ಞಾನಿಗೆ ಸಕಲವು ತಾನೆ ನಿಷ್ಕಳವು ತಾನೆ
ದೃಶ್ಯ ತಾನೆ ದೃಕ್ ತಾನೆ ಭೇದ ತಾನೆ ಅಭೇದ ತಾನೆ
ಮಾಯೆ ತಾನೆ ಅಮಾಯೆ ತಾನೆ
ಮೌನ ತಾನೆ ಅಮೌನ ತಾನೆ ಅರ್ಪಿತ ತಾನೆ ಅನರ್ಪಿತ ತಾನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೋಳ್ ಘನಕ್ಕೆ ಘನವಾಗಿರ್ದು
ಶಬ್ದಮುಗ್ಧವಾದುದನೇನೆಂಬೆ || 4 ||

382

ಆದಿ ಎನ್ನೆ ಅನಾದಿ ಎನ್ನೆ ಭವಿ ಎನ್ನೆ ಭಕ್ತನೆನ್ನೆ ಯೋಗಿ ಎನ್ನೆ
ವಿಯೋಗಿ ಎನ್ನೆ ಬೋಧರೂಪನೆನ್ನೆ ಅಬೋಧರೂಪನೆನ್ನೆ
ಬೋಧಾಬೋಧಮಯನೆನ್ನೆ
ನಿರಂಜನ ಪ್ರಭುವೆಂಬ ಮಹಾ ಬೆಳಗಿನೊಳಗೆ ಘನಕ್ಕೆ ಘನವಾಗಿರ್ದು
ಶಬ್ದಮುಗ್ಧವಾದುದನೇನೆಂಬೆ || 5 ||

383

ಪ್ರಮಾಣರೂಪನೆನ್ನೆ ಅಪ್ರಮಾಣನೆನ್ನೆ ವಿದ್ಯಾಮಯನೆನ್ನೆ
ಅವಿದ್ಯೆಯುಳ್ಳವನೆನ್ನೆ ವಿದ್ಯಾವಿದ್ಯೆಯುಳ್ಳವನೆನ್ನೆ ಕಲ್ಪಿತನೆನ್ನೆ
ಅಕಲ್ಪಿತನೆನ್ನೆ ನಾನೆನ್ನೆ ನೀನೆನ್ನೆ
ನಿರಂಜನ ಪ್ರಭುವೆಂಬ ಮಹಾ ಬೆಳಗಿನೊಳಗೆ ಘನಕ್ಕೆ ಘನವಾಗಿರ್ದು
ಶಬ್ದಮುಗ್ಧವಾದುದನೇನೆಂಬೇನೆಂಬೆ || 6 ||

384

ತಾನಾರೆಂದರಿತ ಘನವನೇನೆಂಬೇನೆಂಬೆ ಅಂದು ಇಂದು ಎಂದೆಂದೂ
ಏನೊಂದುಸರಲು ಎಡೆಗೊಡದ ಘನವನೇನೆಂಬೆ
(ಅದು ಬೋಧಮಯ) ಅದು ಮುಂಚೆ
ಅಬೋಧಮಯವಾಗಿ ಈಗ ಬೋಧಮಯವುಳ್ಳದ್ದೆಂದು
ಹೇಳೆನು ಅಲ್ಲಿ ಬೋಧ ಸೃಷ್ಠಿಯಾದರೂ ಹೇಗೆ ಕಲ್ಪಿಸುವದು
ಅನಾಮವಾಗಿರುವ ನಿರ್ವಾಣದೋಳ್
ನಿರಂಜನ ಪ್ರಭುವೆಂಬ ಬೆಳಗು ಇಲ್ಲ ಇದನೇನೆಂಬೆ || 7 ||

385

ಪುಣ್ಯಪಾಪವಿಲ್ಲಾಗಿ ಧರ್ಮಾಧರ್ಮವಿಲ್ಲ ಪ್ರಿಯಾಪ್ರಿಯವಿಲ್ಲಾಗಿ
ಸುಖದುಃಖವಿಲ್ಲ ಆವರಣವಿಲ್ಲಾಗಿ ಬಂಧ ಮೋಕ್ಷವಿಲ್ಲ ನಿರ್ಣಯಕ್ಕೆ
ನಿಲುಕದಾಗಿ ಯುಕ್ತಾಯುಕ್ತವಿಲ್ಲ
ಅನಾಮಯವಾಗಿರುವ ನಿರ್ವಾಣವೆ ನನ್ನ ಸ್ವರೂಪವಾಗಿ
ನಿರಂಜನ ಪ್ರಭುವೆಂಬ ಶಬ್ದಕ್ಕಿಂಬಿಲ್ಲ ಇದನೇನೆಂಬೆ || 8 ||

386

ಶುದ್ಧನೆನ್ನೆ ವಿಶುದ್ಧನೆನ್ನೆ ಬದ್ಧನೆನ್ನೆ ಮುಕ್ತನೆನ್ನೆ ಕೂಡಿದೆನೆನ್ನೆ

ಅಗಲಿದೆನೆನ್ನೆ ನಾನೆನ್ನೆ ನೀನೆನ್ನೆ
ನಿರಂಜನ ಪ್ರಭುವೆಂಬ
ಮಹಾಬೆಳಗಿನೊಳಗೆ ಘನಕ್ಕೆ ಘನವಾಗಿರ್ದು
ಶಬ್ದಮುಗ್ಧವಾದುದನೇನೆಂಬೇನೆಂಬೆ || 9 ||

387

ಮುಗ್ಧನೆನ್ನೆ ಚತುರನೆನ್ನೆ ಆಸ್ತಿಕನೆನ್ನೆ ನಾಸ್ತಿಕನೆನ್ನೆ
ಏಕನೆನ್ನೆ ಅನೇಕನೆನ್ನೆ ಮಲಯುಕ್ತನೆನ್ನೆ ವಿಮಲನೆನ್ನೆ
ರಾಗಿ ಎನ್ನೆ ವಿರಾಗಿಎನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 10 ||

388

ಇದ್ದವನೆನ್ನೆ ಇಲ್ಲದವನೆನ್ನೆ ಶರೀರಿ ಎನ್ನೆ ಅಶರೀರಿ ಎನ್ನೆ ಮೂಕನೆನ್ನೆ
ಕಿವುಡನೆನ್ನೆ ಹೆಸರುಳ್ಳವನೆನ್ನೆ ಹೆಸರಿಲ್ಲದವನೆನ್ನೆ ಪುಸಿ ಎನ್ನೆ
ದಿಟನೆನ್ನೆ ಬಿಂಬನೆನ್ನೆ ಪ್ರತಿಬಿಂಬನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನ ಬೆಳಗಾಗಿದ್ದ ನನ್ನ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 11 ||

389

ಖಂಡಿತನೆನ್ನೆ ಅಖಂಡನೆನ್ನೆ ಸೀಮಿತನೆನ್ನೆ ನಿಸ್ಸೀಮನೆನ್ನೆ
ಭಿನ್ನನೆನ್ನೆ ಅಭಿನ್ನನೆನ್ನೆ ವ್ಯಾಪ್ತನೆನ್ನೆ ವ್ಯಾಪಕನೆನ್ನೆ
ದೇಹಿ ಎನ್ನೆ ವಿದೇಹಿ ಎನ್ನೆ ಅನಿತ್ಯನೆನ್ನೆ ನಿತ್ಯನೆನ್ನೆ
ಮಾಯಿಕನೆನ್ನೆ ನಿರ್ಮಾಯನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದು ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 12 ||

390

ತ್ವಂಪದ ಅಲ್ಲನೆನ್ನೆ ತ್ವಂಪದಲಕ್ಷ ಅಹುದೆನ್ನೆ
ತತ್ವ ಅಲ್ಲೆನ್ನೆ ತತ್ವದ ಲಕ್ಷ ಅಹುದೆನ್ನೆ

ಅಸಿಪದ ಅಲ್ಲೆನ್ನೆ ಅಸಿಪದಲಕ್ಷ ಅಹುದೆನ್ನೆ
ಜೀವ ಬ್ರಹ್ಮ ಬೇರೆನ್ನೆ ಜೀವಬ್ರಹ್ಮ ಒಂದೆನ್ನೆ
ಆವುದು ಅಹುದೆನ್ನೆ ಆವುದು ಅಲ್ಲೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 13 ॥

391

ಸಂಗಿ ಎನ್ನೆ ನಿಸ್ಸಂಗಿ ಎನ್ನೆ ಆವರಣಯುಕ್ತನೆನ್ನೆ ನಿರಾವರಣನೆನ್ನೆ
ಹಿತವಾದುದೆನ್ನೆ ಅಹಿತವಾದುದೆನ್ನೆ ತ್ಯಾಗಿಯೆನ್ನೆ ಯೋಗಿ ಎನ್ನೆ
ಕಂಡವನೆನ್ನೆ ಕಾಣದವನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 14 ॥

392

ಸಕಳನೆನ್ನೆ ನಿಷ್ಕಳನೆನ್ನೆ ರೂಪನೆನ್ನೆ ಅರೂಪನೆನ್ನೆ ದೇವತನೆನ್ನೆ
ದೈತ್ಯನೆನ್ನೆ ಪಾಮರನೆನ್ನೆ ಪಂಡಿತನೆನ್ನೆ ಅಹುದೆನ್ನೆ ಅಲ್ಲೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 15 ॥

393

ಕ್ಷರನೆನ್ನೆ ಅಕ್ಷರನೆನ್ನೆ ಅಕ್ಷರೋತ್ತಮನೆನ್ನೆ ಬಂದವನೆನ್ನೆ
ಹೋದವನೆನ್ನೆ ಪೂರ್ವಿಕನೆನ್ನೆ ಅಪೂರ್ವಿಕನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 16 ॥

394

ಭವಿ ಎನ್ನೆ ಭಕ್ತನೆನ್ನೆ ಪೂಜಕನೆನ್ನೆ ಪೂಜ್ಯನೆನ್ನೆ ಗುರುವೆನ್ನೆ
ಶಿಷ್ಯನೆನ್ನೆ ಬದ್ಧನೆನ್ನೆ ಬುಧನೆನ್ನೆ ಕಲಿತವನೆನ್ನೆ ಕಲಿಯದವನೆನ್ನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೊಳ್

ಘನಕ್ಕೆ ಘನವಾಗಿರ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 17 ॥

395

ಜೀವನೆನ್ನೆ ಬ್ರಹ್ಮನೆನ್ನೆ ಜೀವಬ್ರಹ್ಮೈಕ್ಯನೆನ್ನೆ
ಎರಡೆನ್ನೆ ಒಂದೆನ್ನೆ ನಾನೆನ್ನೆ ನೀನೆನ್ನೆ ಸಂಗನೆನ್ನೆ
ನಿಸ್ಸಂಗನೆನ್ನೆ ಸಮರಸನೆನ್ನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೊಳ್
ಘನಕ್ಕೆ ಘನವಾಗಿರ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 18 ॥

396

ಸ್ವಗತನೆನ್ನೆ ಸಜಾತಿ ಎನ್ನೆ ವಿಜಾತಿ ಎನ್ನೆ ಭೇದಮಯನೆನ್ನೆ
ಅಭೇದಮಯನೆನ್ನೆ ಭೇದಾ ಭೇದಮಯನನ್ನೆ ಗೆದ್ದವನೆನ್ನೆ
ಸೋತವನೆನ್ನೆ ಸಂಬಂಧಿಕನೆನ್ನೆ ಅಸಂಬಂಧನೆನ್ನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೋಳ್
ಘನಕ್ಕೆ ಘನವಾಗಿರ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 19 ॥

397

ಮಾತ್ರರೂಪನೆನ್ನೆ ಅಮಾತ್ರನೆನ್ನೆ ಪ್ರಣವರೂಪನೆನ್ನೆ
ಪ್ರಣವಾರೂಢನೆನ್ನೆ ಪ್ರಕೃತಿಧರನೆನ್ನೆ ವಿಕೃತಿಧರನೆನ್ನೆ
ಆಶ್ರಮಿ ಎನ್ನೆ ಅತ್ಯಾಶ್ರಮಿ ಎನ್ನೆ ನಿರಂಜನ ಪ್ರಭುವೆಂಬ
ಮಹಾಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 20 ॥

398

ಸತ್ಕರ್ಮಿ ಎನ್ನೆ ದುಷ್ಕರ್ಮಿ ಎನ್ನೆ
ವಿಷಯಾಕಾರನೆನ್ನೆ ನಿರ್ವಿಷಯನೆನ್ನೆ

ಭೋಗಿ ಎನ್ನೆ ತ್ಯಾಗಿ ಎನ್ನೆ
ಯೋಗಿ ಎನ್ನೆ ವಿಯೋಗಿ ಎನ್ನೆ ಭ್ರಾಂತನೆನ್ನೆ ನಿಭ್ರಾಂತನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 21 ॥

399

ಸೃಷ್ಠಿ ಇದ್ದುದೆನ್ನೆ ಇಲ್ಲದುದೆನ್ನೆ ಸೃಷ್ಠಿಗಿಂತ(ಮುನ್ನ ಇದ್ದವನೆನ್ನೆ)
ಅಚಿನ್ನವನೆನ್ನೆ ಈಚಿನವನೆನ್ನೆ ನಡುವಿನವನೆನ್ನೆ ತತ್ವ ಇದ್ದುದೆನ್ನೆ
ಅತತ್ವ ಇಲ್ಲದುದನೆನ್ನೆ ವಸ್ತುವೆನ್ನೆ ಅವಸ್ತುವೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 22 ॥

400

ಮಂಗಲಮಯನೆನ್ನೆ ಅಮಂಗಲನೆನ್ನೆ
ವಿಷಧರನೆನ್ನೆ ಅಮೃತ ರೂಪನೆನ್ನೆ
ಭಯಾನಕನೆನ್ನೆ ನಿರ್ಭಯನೆನ್ನೆ ಅಹುದಾದುದೆನ್ನೆ ಅಲ್ಲಾಸುದೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 23 ॥

401

ಜಡನೆನ್ನೆ ಅಜಡನೆನ್ನೆ ಜಡಾಜಡನೆನ್ನೆ ಜಡಾಜಡರಹಿತನೆನ್ನೆ
ನಾಶವುಳ್ಳುದೆನ್ನೆ ಅವಿನಾಶಿ ಎನ್ನೆ ಮಲಮಯನೆನ್ನೆ ಅಮಲನೆನ್ನೆ
ಸುವಾಸಿತನೆನ್ನೆ ದುರ್ವಾಸಿಕನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 24 ॥

402

ಜೀವಾತ್ಮನೆನ್ನೆ ಅಂತರಾತ್ಮನೆನ್ನೆ ಪರಮಾತ್ಮನೆನ್ನೆ ಅಜ್ಞನೆನ್ನೆ ಪ್ರಾಜ್ಞನೆನ್ನೆ
ಭ್ರಮರೂಪನೆನ್ನೆ ಬ್ರಹ್ಮಾಕಾರನೆನ್ನೆ ಕಲ್ಯಾಣರೂಪನೆನ್ನೆ ಅಕಲ್ಯಾಣನೆನ್ನೆ

ನಿರಂಜನ ಪ್ರಭುವೆಂಬ ಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 25 ॥

403

ವಿಶ್ವನೆನ್ನೆ ವಿಶ್ವಂಭರನೆನ್ನೆ ಪ್ರಾಜ್ಞನೆನ್ನೆ ಅಪ್ರಾಜ್ಞನೆನ್ನೆ
ಉಪಾಧಿಯುಕ್ತನೆನ್ನೆ ಉಪಾಧಿರಹಿತನೆನ್ನೆ
ಗುಣಿ ಎನ್ನೆ ಗುಣಮಣಿ ಎನ್ನೆ ಗುಣರಹಿತನೆನ್ನೆ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 26 ॥

404

ಅರಿಯಬಹುದು ಅರಿಯದಿರಬಹುದು ಅರಿಯದರುವಿಂಗೆ
ಷಟ್ ಸಮಾಧಿಯೆಂಬುದಿಲ್ಲ ಲಕ್ಷಣ ಲಕ್ಷ್ಯನೆಂಬುದಿಲ್ಲ
ಮಾಡುವ ಯೋಗವಿಲ್ಲ ಪಡೆಯುವ ಪದವಿ ಇಲ್ಲ
ನೆನದು ನಿರ್ಣಯ ಮೀರಿದ
ನಿರಂಜನ ಪ್ರಭುವೆಂಬ ಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 27 ॥

405

ತಾನಾರೆಂಬುದು ತನ್ನಿಂದ ತನಗದು ವೇದ್ಯವಾಗುವುಡೆ
ಸವಿಕಲ್ಪನೆಂಬೆನೆ ಸವಿಕಲ್ಪನಲ್ಲ ನಿರ್ವಿಕಲ್ಪನೆಂಬೆನೆ ನಿರ್ವಿಕಲ್ಪನಲ್ಲ
ತಾನು ತಟಸ್ಥ ಲಕ್ಷಣನೆಂಬುದಿಲ್ಲ
ಅತದ್ವ್ಯಾವೃತ್ತಿ ಲಕ್ಷಣನೆಂಬುದಿಲ್ಲ ಸ್ವರೂಪ ಲಕ್ಷಣವೆಂಬುದಿಲ್ಲ
ತನ್ನೋಳ್ ತಾನು ಐಕ್ಯನೆ ಅನೈಕ್ಯನೆ ನಿರಂಜನ ಪ್ರಭುವೆಂಬ
ಮಹಾಬೆಳಗಿನೊಳಗೆ ಘನಕ್ಕೆ ಘನವಾಗಿರ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ ॥ 28 ॥

406

ಒಮ್ಮನವನೆನ್ನೆ ಇಮ್ಮನವನೆನ್ನೆ ಕುತರ್ಕಿ ಎನ್ನೆ ಸತರ್ಕಿ ಎನ್ನೆ

ಅಂಗನೆನ್ನೆ ಲಿಂಗನೆನ್ನೆ ಲಿಂಗಾಂಗನೆನ್ನೆ
ಶಾಂತನೆನ್ನೆ ಅಶಾಂತನೆನ್ನೆ ಭ್ರಾಂತನೆನ್ನೆ ಅಭ್ರಾಂತನೆನ್ನೆ
ನಿರಂಜನ ಪ್ರಭುವೆಂಬ
ಮಹಾಬೆಳಗಿನೊಳಗೆ ಘನಕ್ಕೆ ಘನವಾಗಿರ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 29 ||

407

ಜನಕನೆನ್ನೆ ಜನನಿಎನ್ನೆ ಜಾತನೆನ್ನೆ ಅಜಾತನೆನ್ನೆ ಶಕ್ತಿಎನ್ನೆ ಶಿವನೆನ್ನೆ
ಚಿದಾಭಾಸನೆನ್ನೆ ಚಿತ್‌ಸ್ವರೂಪನೆನ್ನೆ ಹುಟ್ಟಿದುದೆನ್ನೆ ಸತ್ತುದೆನ್ನೆ
ತೇಜನೆನ್ನೆ ನಿಸ್ತೇಜನೆನ್ನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೊಳಗೆ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 30 ||

408

ಸುರಾಳನೆನ್ನೆ ನಿರಾಳನೆನ್ನೆ ಕುಲಜನೆನ್ನೆ ಅಕುಲನೆನ್ನೆ
ಅಳಿದವನೆನ್ನೆ ಉಳಿದವನೆನ್ನೆ ವರ್ಣಿತನೆನ್ನೆ ಅವರ್ಣಿತನೆನ್ನೆ
ಉದಯನೆನ್ನೆ ಅಸ್ತನೆನ್ನೆ ಕಳಂಕನೆನ್ನೆ ಅಕಳಂಕನೆನ್ನೆ
ನಿರಂಜನ ಪ್ರಭುವೆಂಬ ಮಹಾಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 31 ||

409

ಅರಿತವಂಗೆ ಅರಿಯುವದಿಲ್ಲ ಮರೆಯುವದಿಲ್ಲ ಮಾಟವಿಲ್ಲ
ನೋಟವಿಲ್ಲ ಮಾಯೆಯೆಂಬುದಿಲ್ಲ ಅಮಾಯೆಯೆಂಬುದಿಲ್ಲ
ಪಡೆದುದಿಲ್ಲ ಕಳಕೊಂಡುದಿಲ್ಲ
ನಿರಂಜನ ಪ್ರಭುವೆಂಬ ಮಹಾಬೆಳಗಿನೋಳ್ ಬೆಳಗಾಗಿದ್ದ ನನ್ನಂ
ಅನಾಮಯವಾಗಿರುವ ನಿರ್ವಾಣನೆನ್ನಲು
ಶಬ್ದಮುಗ್ಧವಾದುದನೇನೆಂಬೆ || 32 ||

410

ಅರಿಯದರುವು ಕರಿಗೊಂಡವನೆ ಧೀರ ಗಂಭೀರ ಇದ್ದಂತಿರುವ

ನಿಜನಿವಾಸ ವಿದ್ಯೆದ ಹಂಗಿಲ್ಲ ಅವಿದ್ಯೆದ ಹಂಗಿಲ್ಲ ವಿದ್ಯಾವಿದ್ಯೆದ
ಹಂಗಿಲ್ಲ ತ್ರಿವಿಧದ ಹಂಗು ಹರಿದ ತ್ಯಾಗಾಮೃತ ಉಪಮೆಗೆ
ಮೀರಿದ ನಿಲುವ ಅಂತಿಂತೆನಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 33 ||

411

ನಿರ್ವಾಣವು ಮಾತು ಮನಂಗಳಿಗೆ ಮೀರಿದುದು
ಇಲ್ಲಿ ಮಾನವನ ಛಂದಸ್ಸು ಗಣ ಪ್ರಾಸ ಅನ್ವಯಿಸದು
ಭಾವಿಕರ ಭಾವವು ಸರಿಯಾಗದು ವಿಚಾರದ ಮಂಥನವು ಮುಟ್ಟದು
ಸಕಲ ಗುಣಂಗಳ ಹಂಗುಹರಿದವಂಗೆ
ನಿರ್ವಾಣವೆಂಬುದು ತನ್ನಿಂದ ತನಗದು ವೇದ್ಯವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 34 ||

412

ಅವಾಙ್ಮನಸಗೋಚರವಾದುದು ನಿರ್ವಾಣವು ಮತಿಗತಿಂಗೆ
ಮೀರಿದುದು ನಿರ್ವಾಣವು ಕವಿತೆಗೆ ಒಳಪಡದ್ದು ನಿರ್ವಾಣವು
ಸಕಲ ಭಾವಂಗಳ ಹಂಗುಹರಿದವಂಗೆ ನಿರ್ವಾಣವೆಂಬುದು ತಾನೆ
ಅದು ತನ್ನ ನಿಜದ ನಿಲುವು ಉಪಮಿಸಬಾರದ ಘನ ತಾನೆ
ನೋಡಾ ನಿರಂಜನ ಪ್ರಭು ನಾಗೇಶ್ವರಾ || 35 ||

ಸಮಸ್ವರೂಪ

413

ಸಮಸ್ವರೂಪವಾವುದೊ ಅದು ಅಬಾಧಿತ ಘನ
ಅದು ತೋರದಡಗದ ಘನ ಸ್ವಯಂ ಜ್ಯೋತಿ
ಅಲ್ಲಿ ಪರವಿಲ್ಲ ಅಪರವಿಲ್ಲ ಬದಲಾವಣೆಗಿಂಬಿಲ್ಲ
ಅದನ್ನು ಕ್ಷರನೆನ್ನಲು ಬರದು
ಅಕ್ಷರನೆನ್ನಲು ಬರದು ಬಿಂದುವೆನ್ನಲು ಬರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

414

ಸತ್ ಎಂಬುದು ಸತ್ಯಾಸತ್ಯವೆಂಬ ವಿವೇಚನೆಗೆ ಮೀರಿದ ಪದ
ಇದು ನೆಲೆಯಿಲ್ಲದ ನಿಲುವು ಅಪಾರವು ಅದು ಸ್ವಯ ಪದ
ವಿವರಿಸಿ ನೋಡಲು ತಾನೆ ಅಲ್ಲಿ ಸೃಷ್ಟಿಗಿಂಬಿಲ್ಲ ಸೃಷ್ಟಿ ಕರ್ತರಿಗಿಂಬಿಲ್ಲ
ಅದನ್ನು ನಾದವೆನ್ನಲು 0 ಬಾರದು
ಬಿಂದುವೆನ್ನಲು ಬಾರದು ಓಂ ಎನ್ನಲು ಬಾರದು
ಅದು ವಿಲಾಸವಲ್ಲ ಅವಿಲಾಸವಲ್ಲ
ಇದ್ದುದೊಂದೆ ಸತ್ ಇದ್ದಂತಿದ್ದುದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

415

ಎಲೆ ಮನವೆ ಶೃತಿಗಳು ನೀನು ತತ್ವಮಸಿ ಎಂದು ಪ್ರತಿಪಾದಿಸುವಲ್ಲಿ
ಅದೇಕೆ ರೋಧಿಸುವದು ಉಪಾಧಿಯಿಂದ ಪಾರಾದ ಸತ್ ನೀನು
ಸಮಸ್ವರೂಪ ನೀನು ಇದ್ದಂತಿರುವ
ಅಖಂಡ ಜ್ಯೋತಿ ಜ್ಞಾನ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

416

ಎಲೆ ಮನವೆ ವಿಸ್ಮೃತಿಯಿಂದ ನೀನು ರೋಧಿಸುತ್ತಿರುವಿ
ಶೃತಿಗಳ ನಂಬು ಅಂದು ಇಂದು
ಎಂದೆಂದೂ ಇದ್ದಂತಿರುವ ಅಖಂಡಾತ್ಮ ತಾನೆ

ನಿನಗೆ ಸಂಕಲ್ಪ ವಿಕಲ್ಪವಿಲ್ಲ ಸ್ಮೃತಿ ವಿಸ್ಮೃತಿಗಳಿಗೊಳಪಡದ
ಸಮಸ್ವರೂಪ ನಿರಾಲಂಬ ಘನ ನೀನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 4 ॥

417

ತುಂಬಿದುದು ತುಳಕದು ನೋಡಾ
ಅದನು ಮೇಲೆನ್ನಲು ಬರದು ಕೆಳಗೆನ್ನಲು ಬರದು
ಏಕವೆನ್ನಲು ಬರದು ಅನೇಕವೆನ್ನಲು ಬರದು
ಸಕಲ ವಾಚ್ಯಕ್ಕೂ ಸಮಸ್ವರೂಪವಾದ ಘನ
ಅದು ನಿರಂತರ ಬೆಳಗುವ ಜ್ಯೋತಿ
ಸ್ವಯಂಜ್ಯೋತಿ ಸ್ವಯಂಜ್ಯೋತಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 5 ॥

418

ಎಲೆ ಮನವೆ ಅಪಾರ ಸ್ವರೂಪನಾದ ನಿನಗೆ
ಪಿಂಡಾಂಡ ಬ್ರಹ್ಮಾಂಡವೆಂಬುದುಂಟೆ ಅಲ್ಲಿ
ಇಹವೆಲ್ಲಿ ಪರವೆಲ್ಲಿ ಕರ್ತನಾರು ಅಕರ್ತನಾರು
ಸರ್ವಾತ್ಮ ನೇತಾತ್ಮವೆಂಬುದಕ್ಕೆಡೆಯುಂಟೆ ಇದ್ದಂತಿರುವ ಚಿನ್ಮಾತ್ರ
ನೀನಿರುವಲ್ಲಿ ಅದೇ ತನ್ನ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 6 ॥

419

ಎಲೆ ಮನವೆ ಅಕಲ್ಪಿತವಾದ ನಿನ್ನಂ ಕಾರ್ಯ ಕಾರಣಗಳ
ಕಲ್ಪಿಸಿ ನೋಡಿದರೂ ಗೊತ್ತಾಗದು ಚಿದಾಭಾಸ್ಯ ಚಿತ್‌ಸ್ವರೂಪವೆಂಬ
ವಿಭಾಗದೃಷ್ಠಿಯಿಂದ ತಿಳಿಯದು ನಿನಗೆ ಪದಸಂಧಿಯೆ ಇಲ್ಲ
ಸರ್ವ ಸಮನಾಗಿರುವ ಸತ್ಯವೆ ನೀನಾಗಿದ್ದು
ಅದೇತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 7 ॥

420

ಆದಿ ಆಧಾರವಾಗದದಂದು ಹಮ್ಮು ಬಿಮ್ಮು ಆಗದಂದು
ಸಾಕಾರ ನಿರಾಕಾರ ಆಗದಂದು
ಅಂದು ಇಂದು ಎಂದೆಂದೂ ಇದ್ದಂತಿದ್ದ ಘನ

ಅದನ್ನು ಕಲ್ಪಿತ ಕಲ್ಪನೆಯಿಂದ ಅಳೆಯಲು ಬಾರದು
ಅವಿಚಾರ ವಿಚಾರದಿಂದಲೂ ತಿಳಿಯಲು ಬಾರದು
ಅಲ್ಲಿ ವಿಭಾಗಕ್ಕೆಡೆಯಿಲ್ಲ ಸರ್ವ ಸಮನಾಗಿದ್ದ ಸನ್ಮಾತ್ರ ನೀನಾಗಿದ್ದು
ಅದೇತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 8 ॥

421

ನಿಸ್ಸೀಮಂಗೆ ತ್ವಂ ಪದ ವಾಚ್ಯ ತ್ವಂ ಪದ ಲಕ್ಷ್ಯವೆಂಬುದಿಲ್ಲ
ತತ್ವಪದ ವಾಚ್ಯ ತತ್ವಪದ ಲಕ್ಷ್ಯವೆಂಬುದಿಲ್ಲ
ಅಸಿಪದ ವಾಚ್ಯ ಅಸಿಪದಲಕ್ಷ್ಯವೆಂಬದಿಲ್ಲ
ಅಲ್ಲಿ ವಾಚ್ಯ ಲಕ್ಷ್ಯವೆಂಬ ವಿಭಾಗಕ್ಕೆಡೆಯಿಲ್ಲ
ಎಂದೆಂದೂ ಇದ್ದಂತಿರುವ ಸದ್‌ಜ್ಞಾನ ಭರಿತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 9 ॥

422

ಸದ್‌ಜ್ಞಾನ ಭರಿತವೆಂಬುದು ಇದ್ದಂತಿದ್ದ ಘನ ಅಪಾರವು
ಅಲ್ಲಿ ಇದು ಆತ್ಮ ಇದು ಅನಾತ್ಮವೆಂಬ ವಿಭಾಗಕ್ಕೆಡೆಯಿಲ್ಲ
ನಿತ್ಯಾನಿತ್ಯವೆಂಬ ವಿಚಾರಕ್ಕೆ ಮೀರಿದುದು
ಸಕಲಕ್ಕೂ ಸಮ ಸ್ವರೂಪವು ಅಪ್ರಮಾಣವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 10 ॥

423

ಎಲೆ ಮನವೆ ಅನುಪಮ ನೀನಿದ್ದು
ಮಹಾವಾಕ್ಯ ಹೇಗಾಗುವಿ ಅವಾಂತರ ವಾಕ್ಯ ಹೇಗಾಗುವಿ
ಶೃತಿ ವಾಕ್ಯಂಗಳಿಗೆ ಮೀರಿರುವಾಗ
ಸಂಕಲ್ಪ ವಿಕಲ್ಪವುಳ್ಳವನಾದರೂ ಹೇಗಾಗುವಿ
ನಿನಗೆ ಸ್ವದೇಶವಿಲ್ಲ ಪರದೇಶವಿಲ್ಲ ಒಳಿತಾದುದಿಲ್ಲ ಕೆಡಕಾದುದಿಲ್ಲ
ಸಕಲಕ್ಕೂ ಸಮಸ್ವರೂಪ ನೀನಾಗಿದ್ದು
ಅದೇತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 11 ॥

424

ನಿರ್ಮಾಯನಾದ ನಿನಗೆ ವಿಷಯಾಕಾರ ಬ್ರಹ್ಮಾಕಾರ ಅಷ್ಟೆ

ಇಹವೆಂಬುದಷ್ಟೆ ಪರವೆಂಬುದಷ್ಟೆ ದೇಹ ಅಳಿದುದಷ್ಟೆ ಉಳಿದುದಷ್ಟೆ
ವಿಷಯವೆಂಬುದು ಮುನ್ನಿಲ್ಲ ಇದ್ದಂತಿರುವ ಅಕಳಂಕ ನೀನಾಗಿರುವಲ್ಲಿ
ಎಲೆ ಮನವೆ ಅದೇತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 12 ||

425

ಸಮ ಸ್ವರೂಪಂಗೆ ಬೋಧಿತನಷ್ಟೆ ಅಬೋಧಿತನಷ್ಟೆ
ಬೋಧಾಬೋಧಿತ ನಷ್ಟೆ ಕೆಡಕಷ್ಟೆ ಒಳತಷ್ಟೆ ಗ್ರಾಮವಷ್ಟೆ ವನವಷ್ಟೆ
ಲಾಭವಷ್ಟೆ ಹಾನಿ ಅಷ್ಟೆ ಬದುಕಿದುದಷ್ಟೆ ಸತ್ತುದಷ್ಟೆ
ಸರ್ವಸಮನಾಗಿರುವ ಸದ್‌ಜ್ಞಾನಿಗೆ ಅಂತಿಂತೆನಬಾರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 13 ||

426

ತನ್ನ ತಾನರಿತವಂಗೆ ಅರಿಯದವನೆಂದರಷ್ಟೆ ಅರಿತವನೆಂದರಷ್ಟೆ
ಮನವಿಲ್ಲ ತನುವಿಲ್ಲ ಕ್ಷೋಭೆಯಿಲ್ಲ
ತಾನೆಂಬುದಿಲ್ಲ ಅನ್ಯವೆಂಬುದಿಲ್ಲ ಪ್ರೇಮವಿಲ್ಲ ಅಪ್ರೇಮವಿಲ್ಲ
ಶರೀರ ಬಾಳಿದರಷ್ಟೆ ತತ್‌ಕ್ಷಣ ಕಾಲವಾದರಷ್ಟೆ
ಸಮಸ್ವರೂಪನು ಅನುಪಮನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 14 ||

427

ಅರುವಿಂಗೆ ಮನೆಯಿಲ್ಲ ಮಠವಿಲ್ಲ ಕಾಣಿಸುವದಿಲ್ಲ ಕಾಣುವದಿಲ್ಲ
ಮರವಿಲ್ಲ ಮರವಿನ ಕಾರ್ಯವಿಲ್ಲ ಅಹುದಾದುದಿಲ್ಲ ಅಲ್ಲಾದುದಿಲ್ಲ
ಮಾಯೆಯಿಲ್ಲ ಮಾಯೆಯ ಕಾರ್ಯವಿಲ್ಲ ಫಲವಿಲ್ಲ ಪದವಿಲ್ಲ
ಸರ್ವಸಮನಾಗಿರುವ ಸದ್‌ಜ್ಞಾನಭರಿತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

428

ನಿಜಾತ್ಮನಿಗೆ ಕುಂಬವು ಸತ್‌ಸ್ವರೂಪ
ಕುಂಭದಲ್ಲಿರುವ ನಭವು ಸತ್‌ಸ್ವರೂಪ
ಶರೀರವು ಸತ್‌ಸ್ವರೂಪ ಅಶರೀರವು ಸತ್‌ಸ್ವರೂಪ
ಪ್ರಕೃತಿ ಸತ್‌ಸ್ವರೂಪ ವಿಕೃತಿ ಸತ್‌ಸ್ವರೂಪ
ಎರಡೆಂಬುದಿಲ್ಲ ಒಂದೆಂಬುದಿಲ್ಲ ಸತ್‌ಸ್ವರೂಪ ಇದ್ದಂತಿರುವ

ಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 16 ॥

429

ಎಲೆ ಮನವೆ ಯಾವ ಆತಂಕವಿಲ್ಲದ ಪರಮಾನಂದ ಪದವದು
ನಿನ್ನಯ ಇರವು ಇದು ಆವಾವ
ಸೀಮೆಗೊಳಪಟ್ಟದ್ದಲ್ಲ ಹಂಗಿಗೊಳಪಟ್ಟದ್ದಲ್ಲ
ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಯದಂತುಟಲ್ಲ
ಸರ್ವಸಮನಾಗಿರುವ ಸಹಜವೇ ನೀನಾಗಿದ್ದೂ
ಅದೇತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 17 ॥

430

ನಿರ್ನಾಮನಿಗೆ ಕಲ್ಪಿತನೆಂದರಷ್ಟೆ ಕಾಲನೆಂದರಷ್ಟೆ ಅಕಾಲನೆಂದರಷ್ಟೆ
ಬದ್ಧನೆಂದರಷ್ಟೆ ಬುದ್ಧನೆಂದರಷ್ಟೆ ತ್ರಿಜಗವಿದ್ದುದಷ್ಟೆ ಇಲ್ಲುದುದಷ್ಟೆ
ಜಗದೊಡೆಯರ್ ಕಾರಣರಷ್ಟೆ ಕಾರ್ಯಕರ್ತರೆಂದರಷ್ಟೆ
ಸರ್ವ ಸಮನಾಗಿರುವ ಸದ್‌ಜ್ಞಾನಭರಿತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 18 ॥

431

ನಿರ್ಭಾವಿಗೆ ಭಾವವೆಂಬುದಿಲ್ಲ ಅಭಾವವೆಂಬುದಿಲ್ಲ ವಿಮಲನೆಂಬುದಿಲ್ಲ
ಅಮಲನೆಂಬುದಿಲ್ಲ ಸಕಳನೆಂಬುದಿಲ್ಲ ನಿಃಕಳನೆಂಬುದಿಲ್ಲ
ಕಳಂಕನೆಂಬುದಿಲ್ಲ ಅಕಳಂಕನೆಂಬುದಿಲ್ಲ
ಸರ್ವಸಮನಾಗಿರುವ ಸದ್‌ಜ್ಞಾನಭರಿತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 19 ॥

432

ಅತೀತವೆಂಬುದು ಸೂಕ್ಷ್ಮಾತಿಸೂಕ್ಷ್ಮವು
ಅದು ಶೂನ್ಯವೆಂದು ಹೇಗೆ ಹೇಳುವದು
ನಿಃಶೂನ್ಯವೆಂದು ಹೇಗೆ ಹೇಳುವದು
ಶುದ್ಧನೆಂದು ಅಶುದ್ಧನೆಂದು ಹೇಗೆ ಹೇಳುವದು
ಅಲ್ಲಿ ಸರ್ವಾತ್ಮನೆಂಬುದಿಲ್ಲ ನೇತಾತ್ಮವೆಂಬುದಿಲ್ಲ
ಎಂದೆಂದೂ ಇದ್ದಂತಿರುವ ಸತ್‌ಸ್ವರೂಪವು ಅನುಪಮ ನೋಡಾ

ನಿರಂಜನ ಪ್ರಭು ನಾಗೇಶ್ವರಾ || 20 ||

433

ನಿಷ್ಕಳಂಕನಾದ ನನ್ನಲ್ಲಿ ಜೀವ ಬ್ರಹ್ಮ ಬೇರೆಂಬ ವಿಚಾರವಿಲ್ಲ
ಒಂದೆಂಬ ವಿಚಾರವಿಲ್ಲ ಉಪಾಧಿಯಿಲ್ಲ ಉಪಾಧಿಗತ ಚೇತನವಿಲ್ಲ
ವಾಚ್ಯವೆಂಬುದಿಲ್ಲ ಲಕ್ಷ್ಯವೆಂಬುದಿಲ್ಲ ಪದಸಂಧಿ ವಿಚಾರವಿಲ್ಲ
ಸರ್ವಸಮನಾಗಿರುವ ಸದ್‌ಜ್ಞಾನಭರಿತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 21 ||

434

ಚಿನ್ಮಯಂಗೆ ಚಿದಾಭಾಸ ಚಿತ್‌ಸ್ವರೂಪಬೇರೆಂಬ ವಿಚಾರವಿಲ್ಲ
ಒಂದೆಂಬ ವಿಚಾರವಿಲ್ಲ ಗುಣಗಳಿಲ್ಲ ಗುಣಿ ಇಲ್ಲ
ಸಗುಣ ನಿರ್ಗುಣವೆಂಬ ವಿಭಾಗವಿಲ್ಲ ವಿರೋಧವಿಲ್ಲ
ಅಖಂಡವು ಖಂಡವಾಗುವದುಂಟೆ
ನಿರಂಜನ ಪ್ರಭು ನಾಗೇಶ್ವರಾ || 22 ||

435

ಬೆಳಕು ಕತ್ತಲೆ ಕಾಣದವಂಗೆ ವಿಚಾರ ಅವಿಚಾರ ಬೇರೆಂಬುದಿಲ್ಲ
ಚಿತ್ಕಲೆ ಚಿದ್ಘನ ಬೇರೆಂಬುದಿಲ್ಲ ಒಂದೆಂಬುದಿಲ್ಲ
ಪ್ರಕೃತಿ ಎಲ್ಲಿ ಪುರುಷನೆಲ್ಲಿ ಲೋಕವೆಲ್ಲಿ ಅಲೌಕಿವೆಲ್ಲಿ
ಪ್ರತಿಬಂಧಕ ಕಾಣದ ಸಮಸ್ವರೂಪ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 23 ||

436

ತೆರಹಿಲ್ಲದ ಘನವು ಮನದಲ್ಲಿ ಕರಿಗೊಂಡವಂಗೆ
ಅಧಿಕಾರಿ ಅನಾಧಿಕಾರಿ ಎಂಬುದಿಲ್ಲ
ಸ್ಥಾವರ ಜಂಗಮವೆಂಬ ಭೇದವಿಲ್ಲ ಎಲ್ಲಿ ನೋಡಿದಡಲ್ಲಿ
ನಿರಂತರವಾಗಿರುವ ಪೂರ್ಣ ಅಚಿಂತ್ಯ ಘನ
ಕೂಡದಗಲದ ಘನ ನಿರಾಲಂಬ ಘನ
ಸರ್ವಸಮವಾಗಿರುವ ಸತ್ಯಜ್ಞಾನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 24 ||

437

ಅದ್ವೈತವದು ರೂಪಾರೂಪ ವಿಹೀನವಲ್ಲವೆ
ಐಕ್ಯ ಅನೈಕ್ಯದಿಂದ ಅತೀತವಲ್ಲವೆ ಸೃಷ್ಠಿ ಸ್ಥಿತಿ ಲಯದಿಂದ ಬೇರಲ್ಲವೆ
ನಿತ್ಯಾನಿತ್ಯ ವಿಚಾರದಿಂದತೀತವಲ್ಲವೆ
ಒಂದೆರಡೆಂಬ ಗಣನೆಯಿಂದತೀತವಲ್ಲವೆ
ಸರ್ವಸಮನಾಗಿರುವ ಸತ್‌ಸ್ವರೂಪ ತಾನಲ್ಲದೆ ಅನ್ಯವೆ ಹೇಳಾ
ನಿರಂಜನ ಪ್ರಭು ನಾಗೇಶ್ವರ || 25 ||

438

ಜ್ಞಾನಾಮೃತವು ಕುರುಹು ಕೂನದಿಂದ ಸಿದ್ಧಿಸದು
ಭೇದಾ ಭೇದಭಾವದಿಂದ ಸಿದ್ಧಿಸದು
ಮಾಯಿಕ ನೋಟದಿಂದ ಸಿದ್ಧಿಸದು ಭಾವಾಭಾವದಿಂದ ಸಿದ್ಧಿಸದು
ಧಾರಣ ಧ್ಯಾನದಿಂದ ಸಿದ್ಧಿಸದು ಸರ್ವಸಮನಾಗಿರುವ
ಸತ್‌ಸ್ವರೂಪ ತಾನಲ್ಲದೆ ಅನ್ಯವಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 26 ||

439

ಅಗಣಿತನು ಗುಣದಿಂದುಕ್ತನೆ ಗಣನೆಗೊಳಪಟ್ಟವನೆ
ಅಲ್ಲಿ ಸಾಕಾರನೆಂಬುದಿಲ್ಲ ನಿರಾಕಾರನೆಂಬುದಿಲ್ಲ
ಅರಿತವನೆಂಬುದಿಲ್ಲ ಅರಿಯದವನೆಂಬುದಿಲ್ಲ
ಜನಿಸಿದುದಿಲ್ಲ ಲಯಿಸಿದುದಿಲ್ಲ ಇದ್ದಂತಿರುವ ನಿರಾಲಂಬವೆ
ಸಹಜವಾದುದರಿಂದ ಸತ್‌ಸ್ವರೂಪನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 27 ||

440

ನಿರಂಜನಮೂರ್ತಿಗೆ ರೂಪನೆಂಬುದಷ್ಟೆ ಅರೂಪನೆಂಬುದಷ್ಟೆ
ಅನಿತ್ಯನೆಂಬುದಷ್ಟೆ ನಿತ್ಯನೆಂಬುದಷ್ಟೆ
ಉದಯವಾದುದಷ್ಟೆ ಲಯವಾದುದಷ್ಟೆ
ಸ್ಮೃತಿ ಅಷ್ಟೆ ವಿಸ್ಮೃತಿ ಅಷ್ಟೆ ಇದ್ದಂತಿರುವ ಸಹಜನು
ಸಮಸ್ವರೂಪನು ಚಿದಾನಂದ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 28 ||

441

ಅಜ ತಾನೆಂಬುದು ಕರಿಗೊಂಡವಂಗೆ
ಗುಣಂಗಳೆಂಬುದಿಲ್ಲ ಗುಣಿಯೆಂಬುದಿಲ್ಲ
ಗುಣಗಂಧನೆಂಬುದಿಲ್ಲ ಸಂಸಾರವಿಲ್ಲ ಪರಮಾರ್ಥವಿಲ್ಲ
ಅರ್ಚಕರಿಲ್ಲ ಅರ್ಚನೆಯಿಲ್ಲ ಅರ್ಪಿತವಿಲ್ಲ ಅನರ್ಪಿತವಿಲ್ಲ
ಯೋಗವಿಲ್ಲ ವಿಯೋಗವಿಲ್ಲ
ಸರ್ವಸಮನಾಗಿರುವ ಸದ್‌ಜ್ಞಾನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 29 ॥

442

ಭಾವಾತೀತಂಗೆ ಜೀವಭಾವ ಅಷ್ಟೆ ಬ್ರಹ್ಮಭಾವ ಅಷ್ಟೆ
ಪ್ರತಿಬಂಧಕವೆಂಬುದು ಮುನ್ನಿಲ್ಲ ಕಾಮಿಯಲ್ಲ ಅಕಾಮಿಯಲ್ಲ
ಶಾಸ್ತ್ರಿಯಲ್ಲ ಶಾಸ್ತ್ರ ಜ್ಞಾನಿಯಲ್ಲ ಇದ್ದಂತಿರುವ
ಸಮಸ್ವರೂಪ ಸ್ವಯಂಜ್ಯೋತಿ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 30 ॥

443

ಅವಿರೋಧಿಗೆ ಶುಭವಾಸನೆ ಪ್ರಿಯವಾದುದಲ್ಲ ಅಶುಭವಾಸನೆ
ಅಪ್ರಿಯವಾದುದಿಲ್ಲ ಪ್ರಮಾದವಿಲ್ಲ ಪ್ರಮೇಯವಿಲ್ಲ
ಇಚ್ಚೆಯಿಲ್ಲ ಅನಿಚ್ಚೆಯಿಲ್ಲ ಶಬ್ದಜ್ಞಾನಿಯಲ್ಲ ಶಬ್ದಾನುಭಾವಿಯಲ್ಲ
ಇದ್ದಂತಿರುವ ಅಖಂಡ ತೇಜೋಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 31 ॥

444

ಸರ್ವವು ತೋರದವಂಗೆ ಸಂಗವಾವುದು ನಿಸ್ಸಂಗವಾವುದು
ಜಡವಾವುದು ಅಜಡವಾವುದು ವಾಚ್ಯವಾವುದು ಲಕ್ಷ್ಯವಾವುದು
ಅರಿಯುವದಾವುದು ಅರಿಸಿಕೊಳ್ಳುವದಾವುದು
ನಿಸ್ಸೀಮವು ಇದ್ದಂತಿರುವ ಘನವು ಏನೊಂದಾಗದ ನಿಷ್ಕಳಂಕ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 32 ॥

445

ನಿರ್ಣಯಕ್ಕೊಳಪಡದ ಘನವು ನಡೆ ನುಡಿಗಳಿಗೊಳಪಡದ ಘನ

ಅಲ್ಲಿ ಆದಿ ಎಂಬುದಿಲ್ಲ ಅನಾದಿ ಎಂಬುದಿಲ್ಲ ಅದನ್ನು ಆಧಾರವೆಂದು
ಹೇಗೆ ಹೇಳುವದು ಆಧೇಯವೆಂದು ಹೇಗೆ ಹೇಳುವದು
ಅಕಥನೀಯ ಘನವು ಕಥನಕ್ಕೊಳಪಡುವದೆ
ನಿರಂಜನ ಪ್ರಭು ನಾಗೇಶ್ವರಾ ॥ 33 ॥

446

ನಿರ್ಮಳ ನಿಜಸ್ವರೂಪ ಮಿಥ್ಯಾಮಯ ವಿಕಾರವಾಗದು
ಅನುಪಮವು ಉಪಮೆಯುಳ್ಳದ್ದಾಗದು
ಅವಿಲಕ್ಷ್ಯವು ವಿಲಕ್ಷಣವುಳ್ಳದ್ದಾಗದು
ಸರ್ವಸಮಸ್ವರೂಪವಾದ ಘನ ನುಡಿದು ಹೇಳುವದದೆಂತೋ
ನಿರಂಜನ ಪ್ರಭು ನಾಗೇಶ್ವರಾ ॥ 34 ॥

447

ನಿಃಶಬ್ದ ಘನಗಂಭೀರವು ಶಬ್ದರೂಪ ಬ್ರಹ್ಮದಿಂದದು ದೊರೆಯದು
ನಿರ್ಭಯವು ಭಯವುಳ್ಳದ್ದಾಗದು ಅಬಾಧಿತವು ಬಾಧಾವುಳ್ಳದ್ದಾಗದು
ಏನೊಂದುಸರಲು ಎಡೆಗೊಡದ ಘನ ತಟಸ್ಥ ಲಕ್ಷಣದಿಂದ ಸಿದ್ಧಿಸದು
ಭಾಗ ತ್ಯಾಗದಿಂದ ಸಿದ್ಧಿಸದು ತನ್ನಿಂದ ತನಗದು ಸಿದ್ಧಿಸುವದು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 35 ॥

448

ಇದ್ದುದಾವುದೋ ಅದುವೆ ಇದ್ದಂತಿರುವದು ಇಲ್ಲದುದು ಇಲ್ಲವೆ ಇಲ್ಲ
ಇಲ್ಲಿ ಅಂಗನೆಂಬುದು ಅದುವೆ ಲಿಂಗನೆಂಬುದು
ಅದುವೆ ಸಾವಯವನೆಂಬುದು ಅದುವೆ ನಿರವಯನೆಂಬುದು
ಅದುವೆ ಇದ್ದುದಾವುದು ಅದು ನಿರಂತರ ಅಚಲ
ಏಕ ಏವ ಅದ್ವಿತೀಯ ಘನ ಇರುವಲ್ಲಿ
ಎಲೆ ಮನವೆ ಏತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 36 ॥

449

ಸವೆಯದ ಸುಖದ ಸುಖಿಗೆ
ಚಿದಾಭಾಸನೆಂದರದುವೆ ಚಿತ್‌ಸ್ವರೂಪನೆಂದರದುವೆ
ನಿತ್ಯನೆಂದರದುವೆ ಅನಿತ್ಯವೆಂದರದುವೆ
ಅಶುದ್ಧವೆಂದರದುವೆ ಶುದ್ಧನೆಂದರದುವೆ

ಆದುದದುವೆ ಆಗದದುವೆ ಸರ್ವಸಮನಾಗಿರುವ ಸತ್ ಅದುವೆ
ವಿವರಿಸಿ ನೋಡಲು ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 37 ||

450

ಅವಿಕಳ ಘನವೆಂಬುದು ಅಂದು ಇಂದು ಎಂದೆಂದೂ ಇದ್ದುದೊಂದೆ
ಅಲ್ಲಿ ಅನ್ಯವಿರಲಿಂಬುಂಟೆ ಕಲ್ಪನೆಯು ಅವಿರಳವೆ ಕಲ್ಪಿತನು
ಅವಿರಳವೆ ಕರ್ತನು ಅವಿರಳವೆ ಅಕರ್ತನು
ಅವಿರಳವೆ ವ್ಯಾಪ್ತಿ ಅವಿರಳವೆ ವ್ಯಾಪಕವು ಅವಿರಳವೆ
ಅದು ಇದ್ದಂತಿರುವ ಸದ್‌ಜ್ಞಾನಭರಿತ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 38 ||

451

ಬೇರ್ಪಡಿಸಲಾಗದ ಘನ ಅದನೆಂತು ಬೇರ್ಪಡಿಸುವದು
ಬೇರ್ಪಡಿಸಲು ಹೋದ ಕೋವಿದರು
ನೇತಿ ನೇತಿ ಎಂದು ನಿರ್ಣಯಿಸದೆ ಮೌನರಾದರು
ಇದು ಅವಿಚಾರಕ್ಕೆ ತಿಳಿಯುವದೆಂತು ವಿಚಾರವಂತರಾದರೂ
ಇದು ಹೀಗೆಂದು ತಿಳಿಸುವದೆಂತೊ
ಅದು ಇದ್ದಂತಿರುವ ಘನ ನಿರಂತರ ಬೆಳಗುವ ಜ್ಯೋತಿಯಿರುವಲ್ಲಿ
ಬೇರ್ಪಡಿಸಿ ಇದು ಅಲ್ಲ ಇದು ಅಹುದು
ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 39 ||

452

ಅಭೇದ್ಯನಿಗೆ ಬೇಧಿಸುವದದೆಂತು ಅಲ್ಲಿ ಬೇರ್ಪಡಿಸಲಿಂಬಿಲ್ಲ
ಕೂಡಿಸುವದದೆಂತು ಪುಸಿ ಎಂಬುದಿಲ್ಲ ದಿಟವೆಂಬುದಿಲ್ಲ
ಕಲ್ಪಿತನೆಂಬುದಿಲ್ಲ ಕಲಿತನವಿಲ್ಲ ಇದ್ದಂತಿರುವ ಅನುಪಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 40 ||

453

ಒಂದು ಎರಡಾದುದೆ ಎರಡಾದುದು ಒಂದೆ ಆದುದೆಲ್ಲ
ಕೃತ್ರಿಮ ಏನೊಂದಾಗದ್ದು ಅದು ಆದುದಲ್ಲ ಹೋದುದಲ್ಲ
ಇದ್ದಂತಿರುವದಾವುದೊ ಅದು ಒಂದು ಅದು ಅಕ್ರಿಯೆ

ಸಹಜಸ್ವರೂಪ ಅಲ್ಲಿ ವಿಭಾಗಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 41 ॥

454

ದೇವ ದೇವ ಘನಕ್ಕೆ ಘನ ಅಕ್ರಿಯೆ ಕ್ರಿಯೆಯಿಂದುಕ್ತವೆ
ಅಲ್ಲಿ ಸಂಗವೆಂಬುದಿಲ್ಲ ನಿಸ್ಸಂಗವೆಂಬುದಿಲ್ಲ ಸತ್ಕರ್ಮವಿಲ್ಲ
ದುಷ್ಕರ್ಮವಿಲ್ಲ ಫಲವಿಲ್ಲ ಫದವಿಲ್ಲ
ಸರ್ವಸಮನಾಗಿರುವ ಸದ್‌ಜ್ಞಾನಭರಿತ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 42 ॥

455

ವಿದೇಹಿಗೆ ಸತ್ಪಾತ್ರವೆಂಬುದಿಲ್ಲ ಕುಪಾತ್ರವೆಂಬುದಿಲ್ಲ
ನೊಂದಿಸುವರಿಲ್ಲ ಇಂದಿಸುವರಿಲ್ಲ ತಿಳಿದುದಿಲ್ಲ ತಿಳಿಯದುದಿಲ್ಲ
ಅಹುದಾದುದಿಲ್ಲ ಅಲ್ಲಾದುದಿಲ್ಲ ಇದ್ದಂತಿರುವ ಘನಕ್ಕೆ ಘನ
ಸಮಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 43 ॥

456

ಅವರ್ಣೀಯವು ಸತ್ಯಾಸತ್ಯವೆಂಬ ವಾಚ್ಯದಿಂದತೀತವಲ್ಲವೆ
ಯೋಗಾಯೋಗವೆಂಬ ಮಾಟಕ್ಕಿಂತ ಅತೀತವಲ್ಲವೆ
ಚಿಚ್ಛಕ್ತಿ ಚಿದಾಭಾಸವೆಂಬ ವಿಭಾಗಕ್ಕಿಂತ ಅತೀತವಲ್ಲವೆ
ಅತೀತವು ಇದ್ದಂತಿರುವ ಘನವು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 44 ॥

457

ಆಗಮ್ಯಾಪ್ರಮಾಣಂಗೆ ವಿಷಯಿ ಎಂದರಷ್ಟೆ ನಿರ್ವಿಷಯನೆಂದರಷ್ಟೆ
ದಾಸನೆಂದರಷ್ಟೆ ಈಶನೆಂದರಷ್ಟೆ ಸ್ತುತಿಸಿದರಷ್ಟೆ ನಿಂದಿಸಿದರಷ್ಟೆ ಜಗವು
ತೋರಲಿ ತೋರದಿರಲಿ ತತ್ವ ಅತತ್ವವೆಂಬ ವಿವೇಚನೆಗೆಡೆಗೊಡದ
ನಿರ್ವಿಕಾರ ನಿರುಪಮ ಇದ್ದಂತಿರುವ ಅಚಿಂತ್ಯಾತ್ಮ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 45 ॥

458

ಚೈತನ್ಯ ತಾನಾದ ಘನಮಹಿಮನು ಸರ್ವವ್ಯಾಪಿ ಸರ್ವಾತ್ಮ

ಸಂಗಾಸಂಗವೆಂಬುದಿಲ್ಲದ ನಿರಾಲಂಬ ತೆರಹಿಲ್ಲದ ಪರಿಪೂರ್ಣ
ಘನ ದ್ವಿಪದ ಕಾಣದ ನಿಜ ಘನರೆಂತುಪಮಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 46 ||

459

ದ್ವಿಪದ ಕಾಣದವಂಗೆ ವಾಚ್ಯವೆಂಬುದಿಲ್ಲ ಲಕ್ಷ್ಯನೆಂಬುದಿಲ್ಲ
ಸಂಗಿ ಎಂಬುದಿಲ್ಲ ನಿಸ್ಸಂಗಿ ಎಂಬುದಿಲ್ಲ
ಮೋಹಿಯಲ್ಲ ನಿರ್ಮೋಹಿಯಲ್ಲ
ಘನಗಂಭೀರಂಗೆ ಎಚ್ಚರವಷ್ಟೆ ಸ್ವಪ್ನವಷ್ಟೆ
ಸಮಾಧಿ ಅಷ್ಟೆ ಅಸಮಾಧಿ ಅಷ್ಟೆ
ಸಕಳಕ್ಕೂ ಸಮಸ್ವರೂಪ ಭಾವಾತೀತ
ತಾನಾದ ಚೈತನ್ಯಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 47 ||

460

ಇದ್ದ ಘನವು ಎಲ್ಲದರಲ್ಲೂ ಇರುವದು ಅದು ಶುದ್ಧಾತಿ ಶುದ್ಧವು
ಬೆಳಕಿನ ಬೆಳಕು ಮಹಾ ಬೆಳಕು ಸ್ವಯಂಬೆಳಗುವ ಘನ
ಅಲ್ಲಿ ಹಗಲು ರಾತ್ರಿಗಳಿಲ್ಲ ನೋಡುವ ನೋಟವಿಲ್ಲ
ಮಾಡುವ ಮಾಟವಿಲ್ಲ ಮಾಯೆಯಿಲ್ಲ
ಸರ್ವಸಮನಾಗಿರುವ ಸತ್‌ಸ್ವರೂಪವೆ ನೀನಾಗಿರುವಾಗ
ಎಲೆ ಮನವೆ ಏತಕ್ಕೆ ರೋಧಿಸುವೆ
ನಿರಂಜನ ಪ್ರಭು ನಾಗೇಶ್ವರಾ || 48 ||

461

ಸರ್ವಸಮನಾಗಿರುವ ಸತ್ ಏನೊಂದಾದುದಲ್ಲ ಹೋದುದಲ್ಲ
ಭಾವಾಭಾವಕ್ಕಿಂಬಿಲ್ಲ ಕಲ್ಪನೆಗಿಂಬಿಲ್ಲ ಕಲಿತನಕ್ಕಿಂಬಿಲ್ಲ ಅದು
ತನಗಿಂತ ಬೇರಾದುದಲ್ಲ ಸಮರಸವಾದುದಲ್ಲ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 49 ||

462

ನಿಶ್ಚಿಂತನಿಗೆ ಚಿಂತೆ ಅದೇತರದು ಜಡನೆಂಬುದಿಲ್ಲ ಅಜಡನೆಂಬುದಿಲ್ಲ
ಜಡಾಜಡನೆಂಬುದಿಲ್ಲ ದೇಹ ಅಳಿದರೇನು ಉಳಿದರೇನು
ಜಗವು ತೋರಲಿ ತೋರದಿರಲಿ ಸತ್ಯಾಸತ್ಯವೆಂಬುದಿಲ್ಲ

ಅಕಲ್ಪಿತ ದ್ವಂದ್ವಭಾವಂಗಳಿಲ್ಲದ
ಚೈತನ್ಯಮಯನು ಸಮಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 50 ॥

463

ಅಚಲವಾದುದು ಆವುದು ಅದುವೆ ಅಕಲ್ಪಿತ
ವಿಶುದ್ಧವು ಸ್ವಯಂಪ್ರಕಾಶ ಅಲ್ಲಿ ಮರವರುವಿಲ್ಲ
ಅದು ಕ್ಷರವಾಗದು ಅಕ್ಷರವಾಗದು ಸರ್ವಸಮಸ್ವರೂಪ
ತಾನಾಗಿರುವದರಿಂದ ತನ್ನನ್ನು ಸತ್ ಎಂದು ಹೇಗೆ ಹೇಳುವದು
ಅಸತ್ ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 51 ॥

464

ನಿಜೈಕ್ಯಂಗೆ ಉದಯವಾದುದಿಲ್ಲ ಅಸ್ತವಾದುದಿಲ್ಲ ಮರೆತುದಿಲ್ಲ
ಅರಿತುದಿಲ್ಲ ಶುದ್ಧವೂ ಕಾಣನು ಅಶುದ್ಧವೂಕಾಣನು ಕಾಣಿಸಿಕೊಳ್ಳುವ
ಅಹಂ ಇದಂ ಇಲ್ಲ ಕಾಣುವ ದೃಕ್ ಇಲ್ಲ
ಇದ್ದಂತಿರುವ ಸ್ವಯಂಸ್ವರೂಪ ತಾನೆ
ನಿರಂಜನ ಪ್ರಭು ನಾಗೇಶ್ವರಾ ॥ 52 ॥

465

ನಿಃಕಲವು ನಾದಬಿಂದು ಕಲೆಯಿಂದ ಅತೀತವು ವಿಭಾಗದಿಂದ
ಅತೀತವು ಅಲ್ಲಿಗೆ ಆಸಕ್ತಿಯಿಂದ ಬರುವದಾಗದು ಅನಾಸಕ್ತಿಯಿಂದ
ಬರುವದಾಗದು ಯೋಗಾಭ್ಯಾಸದಿಂದ ಬರುವದಾಗದು
ವಾದ ವಿವಾದದಿಂದ ಬರುವದಾಗದು ಸರ್ವಸಮನಾಗಿರುವ
ಸತ್‌ಸ್ವರೂಪ ನೀನಾಗಿರುವಾಗ ಎಲೆ ಮನವೆ ಏತಕ್ಕೆ ರೊಧಿಸುವೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 53 ॥

466

ನಿರ್ವಾಣವು ನಾಮನಿರ್ದೇಶನದಿಂದ ಅತೀತವು
ರೂಪಾ ರೂಪದಿಂದ ಅತೀತವು ಓಂಕಾರ ಚಿಂತನದಿಂದಲೂ
ಅಲ್ಲಿಗೆ ಬರುವದಾಗದು ಚಿತ್ತರೋಧದಿಂದಲೂ ಬರುವದಾಗದು
ಭಾವಾಭಾವದಿಂದಲೂ ಬರುವದಾಗದು
ಚಿದಹಂದಿಂದಲೂ ಬರುವದಾಗದು

ನಿರಂಜನ ಪ್ರಭು ಅರಿವುಡೆ ಇದ್ದಂತಿರುವ ಅಖಂಡೈಕರಸ ತಾನೆ ॥ 54 ॥

467

ನಿರ್ಲೇಪವು ಕಾಲದಿಂದಲೂ ಅಲೇಪವು ದೇಶದಿಂದಲೂ
ಅಲೇಪವು ವಸ್ತುವಿನಿಂದಲೂ ಅಲೇಪವು ಪಂಚಭೂತಂಗಳಿಂದಲೂ
ಅಲೇಪವು ವ್ಯಷ್ಠಿ ಸಮಷ್ಠಿಯಿಂದಲೂ
ಅಲೇಪವು ಪ್ರಕೃತಿ ಪುರುಷರೆಂಬುದಕ್ಕೂ
ಅಲೇಪವು ಸರ್ವಸಮಸ್ವರೂಪ ಪರಮಸತ್‌ಸ್ವರೂಪವು
ಅರಿವುಡೆ ತಾನೆ ನಿರಂಜನ ಪ್ರಭು ನಾಗೇಶ್ವರಾ ॥ 55 ॥

468

ಅಜಾತಂಗೆ ಸ್ವಗತಾದಿ ಭೇದಂಗಳಿಲ್ಲ ಒಡಲಿಲ್ಲ ನೆಳಲಿಲ್ಲ
ಪ್ರಮಾಣ ಪ್ರಮೇಯವೆಂಬುದಿಲ್ಲ
ಸರ್ವಸ್ವರೂಪವಾಗಿರುವ ಪರಮಸತ್ ತಾನೆ ತಾನು
ವಿಶುದ್ದನು ಅಪ್ರಮಾಣನು ತನಗೆ ದೃಢವೆಂಬುದಿಲ್ಲ ಅದೃಢವೆಂಬುದಿಲ್ಲ
ಬದಲಾವಣೆ ಮುನ್ನಿಲ್ಲ ನಿರುಪಮ ನಿರ್ವಿಕಾರನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 56 ॥

469

ತೆರಹಿಲ್ಲದ ಘನವು ಸೀಮಾತೀತವು
ಅಲ್ಲಿ ಅಂಗನೆಂಬುದಿಲ್ಲ ಲಿಂಗನೆಂಬುದಿಲ್ಲ
ಸಂಶಯ ಸಂಕಲ್ಪವೆಂಬುದು ಮುನ್ನಿಲ್ಲ
ಸರ್ವ ಸಮನಾಗಿರುವ ಸತ್‌ಸ್ವರೂಪ ಅರಿವುಡೆ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 57 ॥

470

ಸಮಸುಖದ ಸುಖ ನೋಡಾ
ಏನೊಂದಾಗದ ಸವೆಯದ ಸುಖ ನೋಡಾ
ಬಯಲು ಬೆರತು ಬಯಲು ಬಯಲಾದ ನಿಲುವು ನೋಡಾ
ತಾನೆ ತಾನಾದ ಘನ ನೋಡಾ
ಅಲ್ಲಿ ಘಟ್ಟಿ ಪೊಳ್ಳು ಇಲ್ಲ ಬದಲಾವಣೆ ಇಲ್ಲ
ಸರ್ವಸಮನಾದ ಪರಮಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 58 ॥

471

ನಿರಾಳವು ನೆಲೆಯಿಲ್ಲದ ನಿಲುವು ಇಲ್ಲಿ ಧರ್ಮಾಧರ್ಮವೆಂಬ
ವಿಭಾಗಕ್ಕಿಂಬಿಲ್ಲ ಸ್ಥೂಲವಾವುದು ಸೂಕ್ಷ್ಮವಾವುದು ಹೇಳಾ
ತೃಪ್ತಿರೂಪ ತೃಪ್ತಿಗೆ ಬಯಕೆ ಬಾಯಾರಿಕೆ ಉಂಟೆ
ಇಲ್ಲಿ ಕಾಮವಷ್ಟೆ ಅಕಾಮವಷ್ಟೆ ಸರ್ವಸಮಸ್ವರೂಪನಾಗಿರುವದದು
ನುಡಿದು ಹೇಳಲೆಂತೊ ನಡೆದು ತೋರಿಸಲೆಂತೋ
ಉಪಮಿಸಲಿಲ್ಲ ನೋಡಾ ನಿರಂಜನ ಪ್ರಭು ನಾಗೇಶ್ವರಾ ॥ 59 ॥

472

ನಿಜನಿವಾಸದವಾಸ ಅಪ್ರಮೇಯವು ಅಲ್ಲಿ ತ್ರಿಪುಟಿಗಿಂಬಿಲ್ಲ
ಒಳಗಿಲ್ಲ ಹೊರಗಿಲ್ಲ ಭಿನ್ನವೆಂಬುದಿಲ್ಲ ಅಭಿನ್ನವೆಂಬುದಿಲ್ಲ
ಆದಿ ಅನಾದಿಯಿಂದತ್ತತ್ತ ಅರಿಯೆ ಅರಿತೆನೆಂಬುದತ್ತತ್ತ
ಕೂಡಿದಗಲಿದೆನೆಂಬುದತ್ತತ್ತ ಇದ್ದಂತಿದ್ದ ಅಚಿಂತ್ಯಘನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 60 ॥

473

ಸುಖ ದುಃಖ ಕಾಣದವಂಗೆ ಇಷ್ಟವಾವುದು ಅನಿಷ್ಟವಾವುದು
ಧರ್ಮವಾವುದು ಅಧರ್ಮವಾವುದು
ಬಯಕೆಯು ಇಲ್ಲ ಬೇಡಿಕೆಯು ಇಲ್ಲ ಅಲ್ಲಿ ಬಂಧ ಮೋಕ್ಷ
ಅರಸಲುಂಟೆ ಸರ್ವಸಮನಾಗಿರುವ ಸ್ವಯಂಜ್ಯೋತಿ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 61 ॥

474

ಸಮರತಿಗೆ ಪ್ರೇಮವೂ ಇಲ್ಲ ಅಪ್ರೇಮವೂ ಇಲ್ಲ ಖೇದವಿಲ್ಲ
ಮೋದವಿಲ್ಲ ನಾಸ್ತಿಕರಿಲ್ಲ ಆಸ್ತಿಕರಿಲ್ಲ ಕಲಿಸುವವನಿಲ್ಲ
ಕಲಿಯುವವನಿಲ್ಲ ಕಲಿತುದಿಲ್ಲ ಕಲಿಯುವದಿಲ್ಲ
ಸರ್ವಸಮನಾದ ಅಖಂಡಕ್ಕೆ ಎಂತಿರ್ದಂತೆ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 62 ॥

475

ಸುಖದ ಸುಖ ನೋಡಾ ಇದು ಘನದ ಘನ ನೋಡಾ ಇಲ್ಲಿ
ವಿಷಯಕ್ಕಿಂಬಿಲ್ಲ ವ್ಯಸನಕ್ಕಿಂಬಿಲ್ಲ ವಾಸನೆಗಿಂಬಿಲ್ಲ ಮರೆತುದಿಲ್ಲ

ಅರಿತುದಿಲ್ಲ ಗುರು ಶಿಷ್ಯರ ವಿಭಾಗ ಮುನ್ನಿಲ್ಲ
ಅಚಿಂತ್ಯ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 63 ॥

476

ನೆಳಲು ನೆರವಿಲ್ಲದವಂಗೆ ಕುರುಹು ಇಲ್ಲ ಕೂನವಿಲ್ಲ
ಸವಿಇಲ್ಲ ಸಪ್ಪಗಿಲ್ಲ ಸ್ಪಂದನಲ್ಲ ನಿಸ್ಪಂದನಲ್ಲ
ಅಲ್ಲಿ ಅಜ್ಞಾನವಾವುದು ಜ್ಞಾನವಾವುದು
ಸಂಜ್ಞೆ ಸಂಕೇತಗಳ ಹಂಗು ಹರಿದವಂಗೆ ಎಂತಿರ್ದಂತೆ ಘನ
ಸರ್ವಸಮನಾಗಿರುವ ಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 64 ॥

477

ಒಂದೆರಡೆಂಬದವಂಗೆ ಅವಿದ್ಯೆಯು ಇಲ್ಲ ವಿದ್ಯೆಯು ಇಲ್ಲ
ವಿದ್ಯಾವಿದ್ಯೆಯು ಇಲ್ಲ ಕಲಿಯುವದಿಲ್ಲ ಕಲಿಸುವದಿಲ್ಲ
ಅಧಿಕಾರಿಗಳಿಲ್ಲ ಅನಾಧಿಕಾರಿಗಳಿಲ್ಲ
ಇಲ್ಲಿ ಬಂದವರಾರೊ ಹೋದವರಾರೊ
ಇದ್ದವರೆಂಬುದಿಲ್ಲ ಇಲ್ಲದವರೆಂಬುದಿಲ್ಲ
ಭಾವಿಕರೆಂಬುದಿಲ್ಲ ಭ್ರಮಿಗಳೆಂಬುದಿಲ್ಲ ಇದ್ದಂತಿರುವ
ಸರ್ವಸಮನಾಗಿರುವ ತಾನೊಂದೆ ಸತ್‌ಸ್ವರೂಪ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 65 ॥

478

ನಿರಾಳವನೊಳಕೊಂಡ ಸಹಜನೆ ಘನಕ್ಕೆ ಘನನೆ
ಸಕಲದರ ಸಾರಭೂತ ಭೂಮಾಸ್ವರೂಪನೆ ಇದ್ದಂತಿರುವ ಸಹಜನೆ
ನಿನ್ನೊಳ್ ಕಾಣಿಸುವ ಕುರುಹುವೆಂಬುದಿಲ್ಲ ಕಾಣುವೆನೆಂಬ ಮದವಿಲ್ಲ
ವಿಷಯಂಗಳಿಲ್ಲ ನೋಡುವ ನೋಟವಿಲ್ಲ
ಸರ್ವಸ್ವರೂಪನಾಗಿರುವ ಸತ್‌ಸ್ವರೂಪವಿರುವಲ್ಲಿ
ಎಲೆ ಮನವೆ ಏತಕ್ಕೆ ರೋಧಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 66 ॥

479

ನಿರ್ವಿಕಲ್ಪವೆಂಬ ನಿಜವು ಸಕಲದರ ಸಾರ ಭೂಮವು ಸಹಜಾನಂದವು

ಅಲ್ಲಿ ವಿಷಮತ್ವವಿಲ್ಲ ಪ್ರಮೇಯ ಪ್ರಮಾಣಂಗಳಿಲ್ಲ
ನಾನು ಇಲ್ಲ ನೀನು ಇಲ್ಲ
ಸರ್ವಸಮನಾಗಿರುವ ಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 67 ॥

480

ಘನ ನಿರಂಜನ ಬೆಳಗು ಬೆಳಗುವ ಬೆಳಕು ಸವೆಯದ ಬೆಳಗು
ಸಕಲ ತತ್ವದ ಸಾರವು ಸವೆಯಾದಾನಂದವು ಅಲ್ಲಿ ರವಿ ಚಂದ್ರ
ತಾರೆಗಳಿಲ್ಲ ಕೂಡಿದುದಿಲ್ಲ ಅಗಲಿದುದಿಲ್ಲ ಸೀಮೆ ಸಂಕೇತವಿಲ್ಲ
ಭಾವವಿಲ್ಲ ಭ್ರಮೆಯಿಲ್ಲ
ಸರ್ವಸಮಸ್ವರೂಪವಾಗಿರುವ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 68 ॥

481

ನುಡಿದು ಹೇಳಬಾರದ ಘನ ನಡೆದು ತೋರಿಸಲೆಂದೇನೊ
ನಡೆದು ತೋರಿಸಲು ಬಾರದ ಘನವ ಹೇಳಲೆಂದೇನೊ
ಸತ್‌ಸ್ವರೂಪವು ನಿರಂತರ ಏಕಮೇವಾ ದ್ವಿತೀಯ ಬೆಳಗುವ ಬೆಳಗು
ಅಲ್ಲಿ ಪಂಚಭೂತಂಗಳಿಲ್ಲ ಜಗವಿಲ್ಲ ಜಗದೊಡೆಯರಿಲ್ಲ
ಕಂಡರೂ ಭ್ರಮಾತ್ಮಕವು ಅದು ಮರೀಚಿ ಜಲ
ಸರ್ವಸಮನಾಗಿರುವ ಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 69 ॥

482

ನಿಜವನರಿದ ನಿಶ್ಚಿಂತನಿಗೆ ಕಾಣಿಸುವ ಜಗವು ಬಿಸಲ್ಗುದುರೆ
ಕಾಣುವ ಆಭಾಸನು ಬಸಿಲ್ಗುದುರೆ
ಅಲ್ಲಿ ತಾನೆಂಬುದಿಲ್ಲ ಅನ್ಯವೆಂಬುದಿಲ್ಲ
ವ್ಯಷ್ಠಿ ಸಮಷ್ಠಿ ಇಲ್ಲ
ಸರ್ವಸಮನಾದ ಸತ್‌ಸ್ವರೂಪ ತಾನೊಂದೆ
ಸತ್‌ಜ್ಞಾನ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 70 ॥

483

ಮತಿ ಗತಿಗೆ ಸಿಲುಕದ ಮಹಾಂತ ಮನ ಮನ ಲಯವಾದ
ನಿರಾಲಂಬ ನಿಜಘನ ಕವಿತೆಯು ಘನವಂತನ ಕಲ್ಪಿಸುವದೆಂತು
ವರ್ಣಿಸುವದದೆಂತು ಕಾಣದ ಘನ ಕಾಣುವದದೆಂತು
ಕೂಡದಗಲದ ಘನ ಕೂಡುವದದೆಂತು ಅಗಲಿದುದದೆಂತು
ಭಾವಶುದ್ಧಿಯಾದವಂಗೆ ತಾನು ತಾನೆ
ನಿರಂಜನ ಪ್ರಭು ನಾಗೇಶ್ವರಾ || 71 ||

ಸರ್ವಮಂಗಳ

484

ಸರ್ವಮಂಗಳವು ಸದಾಮಂಗಳ ಆದಿ ಮಧ್ಯಾಂತವಿಲ್ಲದ ಮಂಗಳಮಯ
ಅದುವೆ ನಿರಂತರವು ಅಲ್ಲಿ ಕಲ್ಪಿತ ಕಲ್ಪನಾರೂಪ ಪ್ರಪಂಚ ಮೃಗಜಲ
ಇದ್ದುದೊಂದೆ ನಿರಂತರ ಒಂದೆ ಒಂದು ಸತ್‌ಸ್ವರೂಪವಿರುವಲ್ಲಿ
ಉಪಮಾನವಾವುದು ಉಪಮೇಯವಾವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

485

ಮಂಗಳಮಯದೋಳ್ ಅಮಂಗಳಕ್ಕಿಂಬುಂಟೆ
ಜಗವು ಇಲ್ಲ ಜಗದೊಡೆಯರು ಇಲ್ಲ
ವ್ಯಷ್ಠಿ ಸಮಷ್ಠಿ ಇಲ್ಲ ಸಕಳ ಮಾಯಾ ತತ್ವಂಗಳಿಲ್ಲ
ಸುಳುಹು ಇಲ್ಲ ಸಂಕೇತವಿಲ್ಲ
ಸರ್ವಮಂಗಳಮಯ ನಿರಂತರ ಒಂದೆ ಶಾಶ್ವತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

486

ಭಕ್ತರಾದವರುಂಟು ಭವಿಯಾದವರುಂಟೆ ಹೇಳು ಹೇಳಯ್ಯ
ಭಕ್ತ ಅಂಗ ಭವಿ ಲಿಂಗ
ಭಕ್ತಂಗೆ ಕೂಡಿದುದುಂಟು ಸಂಗವುಂಟು ಸಮರಸವುಂಟು
ಭವಿಯು ಕೂಡಿದವನಲ್ಲ ಸಂಗಿಯಲ್ಲ ನಿಸ್ಸಂಗಿಯಲ್ಲ
ಇದ್ದಂತಿರುವ ಸರ್ವಮಂಗಳಮಯವಾದ ನಿರಂತರ
ಅಲ್ಲಿ ಕೂಡಿದುದಾವುದು ಅಗಲಿದುದು ಆವುದು
ನಿರಂಜನ ಪ್ರಭು ನಾಗೇಶ್ವರಾ ॥ 3 ॥

487

ಸಂಗ ಸಮರಸವಿಲ್ಲದ ಮಹಾಂತ ದೇಹಿ ವಿದೇಹಿಯಾಗದ ಮಹಾಂತ
ಏನೆಂಬೇನೆಂಬೆ ನೋಡದ ನೋಟ ಮಾಡದ ಮಾಟ ಕೂಡದ ಕೂಟ
ಗುಣಮಣಿಯಲ್ಲ ಗುಣಗೇಡಿಯಲ್ಲ ಏನೊಂದಾದವನಲ್ಲ
ಹೋದವನಲ್ಲ ಇದ್ದಂತಿರುವ ನಿರಂತರ
ಸರ್ವಮಂಗಳಮಯ ಘನಮಹಿಮನೆ ಭವಿ ನೋಡಾ

ನಿರಂಜನ ಪ್ರಭು ನಾಗೇಶ್ವರಾ || 4 ||

488

ಮನ ಮನ ಒಂದಾದುದೆ ಮಹಾಘನ ಅದು ಅಕಳಂಕ
ಅಲ್ಲಿ ಸಂಕಲ್ಪ ವಿಕಲ್ಪಗಳ ಸುಳುವಿಲ್ಲ ಸಂಕುಚಿತವಿಲ್ಲ ವಿಕಾಸವಿಲ್ಲ
ಇದ್ದುದೊಂದೆ ನಿರಂತರವಾಗಿರುವ ಮಂಗಳಮಯ ಬೆಳಗು ಅದು
ಮಾತು ಮನಂಗಳಿಂದತ್ತತ್ತ ಮೀರಿದ ಘನ ಸ್ವಯ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 5 ||

489

ತುಂಬಿದ ಮನ ತುಳಕದ ಮನ ತೃಪ್ತರೂಪ ತೃಪ್ತಿಮನ
ಅಲ್ಲಿ ಅಹುದಾವುದು ಅಲ್ಲಾವುದು ಹಿರಿದಾವುದು ಕಿರಿದಾವುದು
ಸಂಶಯಕ್ಕೆಡೆಯುಂಟೆ ವಿಪರೀತ ಮುನ್ನಿಲ್ಲ ಇದ್ದುದೊಂದೆ ಘನ
ಅದುವೆ ನಿರಂತರವಾಗಿರುವ ಮಂಗಳಮಯಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 6 ||

490

ಉಪಮಿಸದ ಘನವು ಉಪಮಿಸುವದದೆಂತು
ಅಲ್ಲಿ ಉದಯಾಸ್ತವೆಂಬ ವಿರೋಧವಿಲ್ಲ
ಕೆಡದ ಪ್ರಕಾಶ ಕೆಡುವ ಪ್ರಕಾಶವೆಂಬ ಗಣಿತವಿಲ್ಲ
ಇದು ಹುಟ್ಟಿದುದು ಹುಟ್ಟದುದೆಂಬ ವಿಚಾರಕ್ಕೆಡೆಯಿಲ್ಲ
ಎಂದೆಂದೂ ಇದ್ದಂತಿರುವ ಮಂಗಳಮಯ ಸತ್‌ಸ್ವರೂಪ
ಅಲ್ಲಿ ರವಿ ಚಂದ್ರ ಅಗ್ನಿ ಕಥನ ಮಾಡುವದಾದರೂ ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 7 ||

491

ನಿರಾತಂಕ ನಿರ್ಮಲ ಬೆಳಗು ನಿಸ್ಸೀಮ ಬೆಳಗು ಬೆಳಗುಳ್ಳ ಬೆಳಗು
ಕಂದದ ಬೆಳಗು ಕುಂದದ ಬೆಳಗು ಅಲ್ಲಿ ಹಗಲು ರಾತ್ರಿಯೆಂದರಸಲುಂಟೆ
ಸರ್ವಮಂಗಳಮಯವಾದ ನಿರಂತರ ಒಂದೆ ಸತ್‌ಸ್ವರೂಪ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 8 ||

492

ಒಡಲಿಲ್ಲದವಂಗೆ ಪಿಂಡವಾವುದು ಮಂಡವಾವುದು

ಅಲ್ಲಿ ಪಂಡಿತರಾರು ಪಾಮರರಾರು
ಸಂಸಾರವಾವುದು ಪರಮಾರ್ಥವಾವುದು
ನಿಧಿ ಇಲ್ಲ ನಿಷೇಧ ಇಲ್ಲ ಸರ್ವಮಂಗಳಮಯ ಸತ್‌ಸ್ವರೂಪ
ಅಲ್ಲಿ ಅಂತರ ಬಹಿರ್ ಎಂಬುದಕ್ಕಿಂಬುಂಟೆ
ನಿರಂಜನ ಪ್ರಭು ನಾಗೇಶ್ವರಾ || 9 ||

493

ನಿರೂಪಂಗೆ ರೂಪಾರೂಪೆಂಬ ವಿಂಗಡ ಉಂಟೆ
ನಿರ್ಭಾವಿಗೆ ಭಾವಾಭಾವವೆಂಬ ಮತಿಉಂಟೆ
ಎನ್ನಂಗವನು ಶ್ರೀಗುರು ಮಂತ್ರ ಮಾಡಿ ತೋರಿದನಾಗಿ
ನುಡಿಗಿಂಬಿಲ್ಲ ನಡೆಗಿಂಬಿಲ್ಲ ಬೋಧೆಯಿಲ್ಲ ಬೋಧಕತ್ವವಿಲ್ಲ
ಮಂಗಳಮಯ ನಿರಂತರ ಇದ್ದಂತಿರುವ ಘನ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 10 ||

494

ನಿರ್ಮಾಯಂಗೆ ಉಪಾದಿ ಉಪಾಧಿಗತ ಚೇತನವೆಂದುಸರಲು ಇಂಬುಂಟೆ
ಅಲ್ಲಿ ಜೀವ ಬ್ರಹ್ಮರೆಂಬ ಭೇದವೂ ಇಲ್ಲ ಅಭೇದವೂ ಇಲ್ಲದಿರುವಲ್ಲಿ
ಕಲಿಸುವವನಾರೊ ಕಲಿಯುವವನಾರೊ ಶ್ರವಣಕ್ಕಿಂಬಿಲ್ಲ
ಅದರಿಂದ ಪ್ರಾಪ್ತವಾಗುವ ಮೋಕ್ಷವು ನಿಜವೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 11 ||

495

ಒಡಲಿಲ್ಲದಾತಂಗೆ ಮರವರುವೆಂಬ ಕರ್ಮ ಕೌಟಿಲ್ಯಉಂಟೆ
ಅಲ್ಲಿ ಸೀಮೆ ಸಂಕೇತವನರಸುವರೆ
ಇಲ್ಲದ ಜೀವರು ಇಲ್ಲ ಶಿವನು ಇಲ್ಲವಾದಲ್ಲಿ
ಅಗಲಿದುದಾವುದು ಕೂಡಿದುದಾವುದು
ಎರಡೆಂಬುದಿಲ್ಲ ಒಂದೆಂಬುದಿಲ್ಲ
ಬೋಧಿಸುವ ಗುರುವಿಲ್ಲ ಕಲಿಯುವ ಶಿಷ್ಯನಿಲ್ಲ ಕಲಿತನವಿಲ್ಲ
ಏನೆಂದೆನಲಿಕ್ಕಿಂಬಿಲ್ಲದ ಘನದೋಳ್
ಬ್ರಹ್ಮವಿದ್ ಬ್ರಹ್ಮವಿದ್ವರನಿದ್ದುದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 12 ||

496

ಮಾತು ಮನಂಗಳಿಗೆ ಮೀರಿದ ಘನವ ಮಾತಿನಿಂದ ವಿವರಿಸುವದದೆಂತೊ
ವಿವರಿಸದೆ ಇರುವದದೆಂತೊ ತನ್ನ ತಾ ಅರಿತೆನೆಂದು ಹೇಳುವದದೆಂತೊ
ಅರಿಯೆನೆಂದು ಹೇಳುವದದೆಂತೊ ಮಂಗಳಮಯವಾದ
ನಿರಂತರ ತಾನೊಂದೆ ಒಂದೆ ಸತ್‌ಸ್ವರೂಪವಿರುವಲ್ಲಿ
ಹೇಳಬಾರದ ತೋರಿದ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 13 ||

497

ಅಸತ್ಯವು ಸತ್ಯವನ್ನು ವಿವರಿಸುವದದೆಂತು ಸತ್ಯವೆಂಬುದು
ವಾಙ್ಮನೋತೀತ ಅಂದು ಇಂದು ಎಂದೆಂದೂ ಇದ್ದಂತಿರುವ ಘನ
ಅದು ನುಡಿಯಾಗದು ನಡೆಯಾಗದು ನೆನಹು ನಿರ್ಣಯವಾಗದು
ಇದುವೆ ವಿವರಿಸಿ ವಿವರಿಸದ ಇರವು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 14 ||

498

ಸರ್ವಮಂಗಳಮಯವಾದುದು ಆವುದೊ ಅದು ಸತ್ಯ ನಿರಂತರ
ನಿರ್ಭಾವಮಯವಾದುದು ಆವುದೊ ಅದು ಸತ್ಯ ಅಖಂಡ
ಅಚಿಂತ್ಯ ಅಪ್ರಮಾಣವಾದುದು ಆವುದೊ ಅದು ಸತ್ಯ
ಸತ್ಯವೆಂಬುದು ಏಕಮೇವಾದ್ವಿತೀಯ ಚಿನ್ಮಯ ಅಲ್ಲಿ
ವಿಭಾಗಕ್ಕಿಂಬಿಲ್ಲ ವಿಚಾರ ಅವಿಚಾರಕ್ಕಿಂಬಿಲ್ಲ
ಅದನ್ನು ಅರಿತೆ ಅರಿಯೆನೆನ್ನಲು ಬರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

499

ಸತ್ಯವು ಸ್ಥಾವರವಾಗದು ಜಂಗಮವಾಗದು ಪಂಚಭೂತಂಗಳಾಗದು
ಪಂಚ ತನ್ಮಾತ್ರೆಗಳಾಗದು ಪ್ರಕೃತಿಯಾಗದು ವಿಕೃತಿಯಾಗದು
ಬಂಧವಾಗದು ಮೋಕ್ಷವಾಗದು ಗುರುವಾಗದು ಶಿಷ್ಯನಾಗದು
ಬೋಧವಾಗದು ಅಬೋಧವಾಗದು ಇದ್ದಂತಿರುವುದಾವುದೋ
ಅದುವೆ ಸತ್ಯ ವಿವರಿಸಿ ನೋಡುವುಡೆ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 16 ||

500

ಸತ್‌ಸ್ವರೂಪದೊಳ್ ಕುರುಹು ಕೂನಕ್ಕಿಂಬಿಲ್ಲ
ಕಲ್ಪಿತ ಕಲ್ಪನೆಗಿಂಬಿಲ್ಲ ಭಾವಾಭಾವಕ್ಕಿಂಬಿಲ್ಲ ಅದನ್ನು
ಶೂನ್ಯವೆಂದು ಹೇಳಲು ಬರದು ನಿಃಶೂನ್ಯವೆಂದು ಹೇಳಲು ಬರದು
ನಿರಂತರವಾದ ಮಂಗಳಮಯ ಒಂದೆ ಅಬಾಧಿತ ಘನ
ಅಲ್ಲಿ ಆದಿ ಅಂತ್ಯ ಹೇಗೆ ಇರಬಲ್ಲುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 17 ||

501

ಸದ್ವಸ್ತು ಕಾರ್ಯವಾದುದಲ್ಲ ಕಾರಣವಾದುದಲ್ಲ
ಮರವೂ ಅಲ್ಲ ಮಾಯೆಯೂ ಅಲ್ಲ
ಜಗವಲ್ಲ ಜಗದೊಡೆಯರಲ್ಲ
ಅದನ್ನು ದೇವತರೆಂದು ಹೇಗೆ ಹೇಳುವದು
ದೈತ್ಯರೆಂದು ಹೇಗೆ ಹೇಳುವದು
ಮನುಗಳಲ್ಲ ಮುನಿಗಳಲ್ಲ ಮಹರ್ಷಿಗಳಲ್ಲ
ತ್ಯಾಗಿಗಳಲ್ಲ ಯೋಗಿಗಳಲ್ಲ ಏನೇನೂ ಅಲ್ಲ
ಸರ್ವಮಂಗಳಮಯ ನಿರಂತರವಾಗಿರುವ
ಸತ್‌ಸ್ವರೂಪ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 18 ||

502

ಅರಿತವಂಗೆ ಗುಣ ಗುಣತ್ವ ಉಂಟೆ ಅಲ್ಲಿ ಲೋಕಾಲೋಕವೆಂಬುದೆಲ್ಲಿ
ಕರ್ತೃವಾಗನು ಕರ್ತನಾಗನು ಮಾಯೆಯ ನೋಡ ಮಾಟವ ನೋಡ
ಮಂಗಳಮಯ ನಿರಂತರ ತಾನೊಂದೆ ಇರುವಲ್ಲಿ
ಅಲ್ಲಿ ಫಲವಾವುದು ಪದವಾವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 19 ||

503

ಅರಿತವನೆಂತು ಸತ್ತನು ಅರಿತವನೆಂತು ಬದುಕಿದನು
ಅರಿತವನು ಸತ್ಕರ್ಮಿಯೆ ದುಷ್ಕರ್ಮಿಯೆ
ಅರಿತವನೆಂತು ಅನುಷ್ಠಾನ ಮಾಡಿದನು
ಅರಿತವನೆಂತು ಧ್ಯಾನಸ್ತನಾದನು
ಅರಿತವನು ಸರ್ವಮಂಗಳಮಯನು

ಅಕಳಂಕನು ಅಚಿಂತ್ಯನು ಅಪ್ರಮಾಣನು
ಅಂದು ಇಂದು ಎಂದೆಂದೂ ಇದ್ದಂತಿರುವ
ನಿರಂತರ ನಿರಾಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 20 ॥

504

ಅರಿತವಂಗೆ ಕಾಯಗೊಂಡವರಿಲ್ಲ ಕಾಯ ಬಯಲಾದವರಿಲ್ಲ
ಎರಡು ಕಣ್ಣುಳ್ಳವರಿಲ್ಲ ಮೂರು ಕಣ್ಣುಳ್ಳವರಿಲ್ಲ
ಅರಿತೆನೆಂಬುವರಿಲ್ಲ ಅರಿಯೆನೆಂಬುವರಿಲ್ಲ
ಮೂಕರಿಲ್ಲ ವಾಚಾಳಿಗಳಿಲ್ಲ ಇರುವುದೊಂದೆ
ಸರ್ವಮಂಗಳಮಯವಾಗಿರುವ ನಿರಂತರ ಸದ್ಘನವಿರುವಲ್ಲಿ
ಇದ್ದವರಾರು ಇಲ್ಲದವರಾರು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 21 ॥

505

ಅರುವಿಂಗೆ ಪೂರ್ವಿಕನೆನ್ನಲು ಬರದು ಅಪೂರ್ವಿಕನೆನ್ನಲು ಬರದು
ಅವರ್ಣೀಯವು ವರ್ಣನೆಯಿಂದುಕ್ತವೆ
ಅದು ಬೋಧೆಯಿಂದತ್ತತ್ತ ಬಾಧೆಯಿಂದತ್ತತ್ತ
ಅಲ್ಲಿ ಪ್ರಾಪ್ತಿ ಅಪ್ರಾಪ್ತಿ ಎಂದು ಹೇಳಲುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 22 ॥

506

ಮನ ಮನ ಒಂದಾದವಂಗೆ ಪ್ರಕೃತಿ ಪುರುಷನೆಂಬ ಭಿನ್ನಉಂಟೆ
ಗುಣಮಣಿ ಗುಣಗೇಡಿ ಎಂಬ ಭಾವ ಉಂಟೆ
ದೃಶ್ಯ ದೃಕ್ ಎಂಬ ಮಾಯಿಕ ಉಂಟೆ
ಸರ್ವಮಂಗಳಮಯ ನಿರಂತರ ಸತ್‌ಸ್ವರೂಪ ಸಿದ್ಧವಾದಲ್ಲಿ
ಅಲ್ಲಿ ತತ್ವ ಅತತ್ವವೆಂದರಸಲುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 23 ॥

507

ಅಂಗ ಅನಂಗ ಒಂದಾದವಂಗೆ ಮಾಯೆ ತಾನೆ ಅಮಾಯೆ ತಾನೆ
ಪುರ ತಾನೆ ಪುರುಷ ತಾನೆ ತನ್ನೊಳ್ ಹುಟ್ಟಿದುದಿಲ್ಲ ಲಯಿಸಿದುದಿಲ್ಲ
ಸಾಕಾರ ನಿರಾಕಾರವೆಂಬ ವಿಭಾಗ ಮುನ್ನಿಲ್ಲ ಇದ್ದುದೊಂದೆ

ಸರ್ವಮಂಗಳಮಯ ನಿರಂತರವಾಗಿರುವಲ್ಲಿ
ಸಕಳ ನಿಃಕಳ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 24 ॥

508

ಅಪ್ರಮಾಣಗಮ್ಯಂಗೆ ನೋಡುವ ನೋಟವಿಲ್ಲ ಮಾಡುವ ಮಾಟವಿಲ್ಲ
ಪಡೆಯುವ ಪದವಿಲ್ಲ ಫಲವಿಲ್ಲ ಇದನೇನೆಂಬೇನೆಂಬೆ
ಅಲ್ಲಿ ದೃಶ್ಯವಾವುದು ದೃಕ್‌ವಾವುದು ಅರಿಸಿಕೊಳ್ಳುವ ಪ್ರಮೇಯವಿಲ್ಲ
ಅರಿಯುವ ಸಾಧನಂಗಳಾದ ಪ್ರಮಾಣಂಗಳಿಲ್ಲ
ಇವುಗಳೇ ಅಭಿಮಾನಿ ಚೇತನನಿಲ್ಲ ಇರುವುದೊಂದೆ ಸತ್ಯ
ಅದುವೆ ಇದ್ದಕ್ಕಿದ್ದಂತಿರುವ ನಿರಂತರ ಸ್ವಯಂಜ್ಯೋತಿ
ಅಲ್ಲಿ ಮತಿ ಇದ್ದುದು ಇಲ್ಲದುದು ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 25 ॥

509

ಜ್ಞಾನ ಜ್ಞೇಯ ಒಂದಾದವಂಗೆ ಹೊಗಳಿಕೆ ತೆಗಳಿಕೆ ಒಂದೆ
ತಾನನ್ಯವೆಂಬುದದೊಂದೆ ಅಹುದಲ್ಲ ವೆಂಬುವದೊಂದೆ
ಖೇದ ಮೋದ ಒಂದೆ ಕಾರ್ಯ ಕಾರಣ ಒಂದೆ ಒಂದೆಂಬುದು
ಇದ್ದಂತಿರುವ ಸರ್ವಮಂಗಳಮಯ ನಿರಂತರ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 26 ॥

510

ಗಗನ ಕುಸುಮ ಹುಟ್ಟಿದುದು ನಿಜವೆ
ನಿಜವಾಗದಿದ್ದಲ್ಲಿ ಗಗನ ಕುಸುಮವೆಂಬ ಪೆಸರಾದರೂ ನಿಜವೆ
ನಿಜವಾಗದಿದ್ದಲ್ಲಿ ಅದು ಲಯವಾಗಿದೆಂಬುದು ನಿಜವೆ
ಸೃಷ್ಠಿಯೆಂಬ ಸ್ಥಾವರ ಜಂಗಮ ಹುಟ್ಟಿದುದು ನಿಜವೆ
ನಿಜವಾಗದಿದ್ದಲ್ಲಿ ಸ್ಥಾವರ ಜಂಗಮವೆಂಬ ಪೆಸರಾದರೂ ನಿಜವೆ
ನಿಜವಾಗದಿದ್ದಲ್ಲಿ ಅದು ಲಯವಾದುದು ಲಯವಾಗದಿರುವದು ನಿಜವೆ
ಇರುವುದೊಂದೆ ಸರ್ವಮಂಗಳಮಯ ನಿರಂತರ ಸತ್ಯವಿರುವಲ್ಲಿ
ಅದು ನಾಶ ವಿನಾಶ ಎಂದು ಹೇಗೆ ಹೇಳುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 27 ॥

511

ಸತ್ಯದೋಳ್ ಅಸತ್ಯ ಉಂಟೆ ಅದರ ಮೂಲವೆ
ಅಸತ್ಯವೆಂದು ಹೇಳುವಲ್ಲಿ ಅದು ಹುಟ್ಟಿದುದು ನಿಜವೆ
ತೋರಿದುದು ನಿಜವೇ ತೋರಿ ಲಯವಾಗುವದಾದರೂ ನಿಜವೆ
ಇದ್ದ ಸರ್ವಮಂಗಳಮಯ ನಿರಂತರ ಸತ್ಯವಾಗಿರುವಲ್ಲಿ
ಅಲ್ಲಿ ನಾಶ ಅವಿನಾಶವೆಂದರಸಲುಂಟೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 28 ||

512

ಮಂಗಳ ಘನವ ಹಠಯೋಗಿಯು ನೋಡನು
ಹಠರಾಜನು ನೋಡನು ವಿರತಿಯು ನೋಡನು
ಪ್ರಣವ ಪ್ರೇಮಿಯು ನೋಡನು ವಿಕ್ಷೇಪರೂಪ
ಚಂಚಲೆಯು ಅದನೆಂತು ನೋಡುವಳು ಇರುವುದೊಂದೆ
ಸರ್ವಮಂಗಳಮಯ ನಿರಂತರ ಸತ್ಯವಾಗಿರುವಲ್ಲಿ
ಅಲ್ಲಿ ವಿನೋದ ಅವಿನೋದ ಹೇಗೆ ಇರಬಲ್ಲವು ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 29 ||

513

ಮೋಹ ನಿರ್ಮೋಹಕ್ಕಿಂಬುಗೆಡೆಗೊಡದ ಘನ ಇದನೇನೆಂಬೇನೆಂಬೆ
ಯೋಗ ವಿಯೋಗಕ್ಕಿಂಬಿಲ್ಲದುದನೇನೆಂಬೇನೆಂಬೆ
ಪ್ರಮೇಯ ಪ್ರಮಾಣಕ್ಕೆಡೆಗೊಡದ ಘನ ಇದನೇನೆಂಬೇನೆಂಬೆ
ಪರೋಕ್ಷ ಅಪರೋಕ್ಷವೆಂಬ ಮತಿಗಿಂಬುಗೆಡೆಗೊಡದುದನೇನೆಂಬೇನೆಂಬೆ
ಅರಿತೆ ಅರಿಯೆನೆಂಬುದಕ್ಕೆಡೆಗೊಡದ ಘನ ಇದನೇನೆಂಬೆ
ಸರ್ವಮಂಗಳಮಯ ನಿರಂತರ ತಾನೊಂದೆ
ಸತ್‌ಸ್ವರೂಪವ ಉಪಮಿಸಲರಿಯೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 30 ||

514

ಧರ್ಮಾಧರ್ಮ ಒಂದಾದವಂಗೆ ಶುಭವೇನೊ ಅಶುಭವೇನೊ
ಲೋಗರ ಹಂಗಿಗನಲ್ಲ ರಾಗಿಯಲ್ಲ ವಿರಾಗಿಯಲ್ಲ
ತನ್ನಮರೆತುದಿಲ್ಲ ಅನ್ಯ ಅರಿತುದಿಲ್ಲ
ಬಂಧ ಮೋಕ್ಷಗಳೆಂಬುದು ಮುನ್ನಿಲ್ಲ
ಸರ್ವಮಂಗಳಮಯ ನಿರಂತರ ತಾನೊಂದೆ

ಇದ್ದಂತಿದ್ದುದನು ಉಪಮಿಸಲರಿಯೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 31 ||

515

ಶೃತಿ ಸ್ಮೃತಿ ಗೆಡೆಗೊಡದ ಘನ ಇದನೇನೆಂಬೇನೆಂಬೆ
ಸರ್ವಮಂಗಳಮಯ ನಿರಂತರ ತಾನೊಂದು ಸುಖದ
ಸುಖವಾಗಿರುವಲ್ಲಿ ಅಲ್ಲಿ ವೇದಂಗಳಾವವೊ ವೇದಾಂತವಾವುದು
ಇಲ್ಲವೆಂದಲ್ಲಿ ತಪೋಯಜ್ಞಕ್ಕಾದರೂ ಇಂಬುಂಟೆ
ಸ್ವಾಧಾಯ ಯಜ್ಞಕ್ಕಾದರೂ ಇಂಬುಂಟೆ
ತೆರೆಹಿಲ್ಲದ ಪರಿಪೂರ್ಣ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರ || 32 ||

516

ವಾಙ್ಮನಕ್ಕೆ ಗೋಚರವಾಗದ ಘನ ಮಹಾಘನ ಅವಿಮುಕ್ತ ಘನ
ಅದು ತಾಪತ್ರಯದಿಂದ ಅತೀತ ದೋಷತ್ರಯದಿಂದ ಅತೀತ
ವಾಸನೆ ತ್ರಯದಿಂದ ಅತೀತ ಬಾಧೆತ್ರಯದಿಂದ ಅತೀತ
ಭಾವತ್ರಯದಿಂದ ಅತೀತ ಬೋಧತ್ರಯದಿಂದ ಅತೀತ
ಇರುವುದೊಂದೆ ಸರ್ವಮಂಗಳಮಯ ನಿರಂತರವಾಗಿರುವ
ತಾನೊಂದೆ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 33 ||

517

ತೆರೆಹಿಲ್ಲದ ಘನ ಏನೆಂಬೇನೆಂಬೆ ರೂಪಾರೂಪವಾಗದ ಘನ
ದೃಶ್ಯ ದೃಕ್ಕಾಗದ ಘನ ಮರವು ಮಾಯೆಯಾಗದ ಘನ
ಅರಿತೆ ಅರಿಯೆನೆನ್ನಲು ಬಾರದ ಘನವೆಂಬುದು
ಸಮುಸ್ವರೂಪ ಸವೆಯದ ಸುಖ ಸುಖದ ಸುಖ
ಅಲ್ಲಿ ವಿಷಯಂಗಳಿಲ್ಲ ವಿಷಯಿಯಿಲ್ಲ ವಿಷಮಕ್ಕಿಂಬಿಲ್ಲ ವ್ಯಸನಕ್ಕಿಂಬಿಲ್ಲ
ಬರಹೋಗುವ ಸುಖವಲ್ಲ ದುಃಖವಲ್ಲ
ಇದ್ದಂತಿರುವ ನಿರಾತಂಕ ಸರ್ವಮಂಗಳಮಯ ಸತ್ಯ
ಅಲ್ಲಿ ಪ್ರಿಯವಾದುದಿಲ್ಲ ಅಪ್ರಿಯವಾದುದಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 34 ||

518

ಅರುವು ಅರಿಯದರುವು ಅವಗ್ರಹಿಸಿತ್ತಾಗಿ
ಅರುಹಿನವನೆಂಬುದಿಲ್ಲ ಮರಹಿನವನೆಂಬುದು ಮುನ್ನಿಲ್ಲ
ನಾನು ನನ್ನದೆಂಬುದು ಎಂದೆಂದೂ ಇರಲಿಲ್ಲ
ಅಲ್ಲಿ ಕುಲವನರಸುವರೆ ಭಾವಕ್ಕಿಂಬಿಲ್ಲ
ವಿಚಾರಕ್ಕಿಂಬಿಲ್ಲ ಮತಿಗತಿಯ ಸುಳುಹು ಮುನ್ನಿಲ್ಲ
ಇರುವುದೊಂದೆ ಸರ್ವಮಂಗಳ ನಿರಂತರ ತಾನೊಂದೆ
ಇರುವಲ್ಲಿ ನಮಸ್ಕಾರಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 35 ॥

519

ಅರುವಿಡಿದು ಅರುವರಿದು ಅರುವೆ ನಾನೆಂಬ ಚಿದಹಂನವ ನಾನಲ್ಲಯ್ಯ
ನನ್ನೊಳ ಅಹಂ ಇದಂಗಳ ಭಿನ್ನವನರಿಯೆ ಅಭಿನ್ನವ ನರಿಯೆ
ಕುಲವಿಲ್ಲದ ಕುಲ ಜನುಮವಿಲ್ಲದ ಅಜಾತ ವಿಚಾರದ ಹಂಗಿಲ್ಲದ
ಪರಾತ್ಪರ ಸರ್ವಮಂಗಳಮಯ ನಿರಂತರ ಇದ್ದಂತಿರುವ ಸತ್ಯ
ಅರಿವುಡೆ ತಾನು ತಾನೊಂದೆ ಇರುವಲ್ಲಿ
ತಾನು ತಾನಾರಿಗೆ ನಮಸ್ಕರಿಸುವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 36 ॥

520

ತೋರಬಾರದ ಘನ ಹೇಳಲೆಂದೇನೊ? ನಿರುಪಮ ನಿರಾಳ ನಿಜತ್ವ
ಕರಿಗೊಂಡವಂಗೆ ಅರುವೆ ಗುರು ಆಚಾರವೆ ಶಿಷ್ಯನೆಂಬ
ವಿಭಾಗತ್ವ ಹೋಯಿತ್ತು ತತ್ವಮಸಿ ಎಂಬ ಉಪದೇಶವು ಹೋಯಿತು
ಅಹಂ ಬ್ರಹ್ಮಾಸ್ಮಿ ಎಂಬ ಸ್ವಾನುಭವ ಹೋಯಿತು
ಸರ್ವಮಂಗಳಮಯವಾಗಿರುವ ನಿರಂತರ
ಅರಿವುಡೆ ತಾನೆ ತಾನೊಂದೆ ಸತ್ಯವಾಗಿರುವಲ್ಲಿ
ತಾನು ತಾನಾರಿಗೆ ನಮಸ್ಕರಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ. ॥ 37 ॥

521

ದೇಹಿ, ವಿದೇಹಿ ಎಂಬುದು ಒಂದಾದವಂಗೆ
ವ್ಯಷ್ಠಿ ಎಂಬುದಿಲ್ಲ ಸಮಷ್ಠಿ ಎಂಬುದಿಲ್ಲ
ಜಗವು ಜಗದೊಡೆಯರೆಂಬ ಭ್ರಾಂತಿ ಮುನ್ನಿಲ್ಲ

ಅಲ್ಲಿ ಸಂಕಲ್ಪ ವಿಕಲ್ಪಗಳಿಗೆಡೆಯಿಲ್ಲ ಆತ ಮತಿಯಿಲ್ಲದ ಮಹಾಂತ
ಗತಿಗೆಟ್ಟ ಘನಮಹಿಮ ನಿರುಪಮ ನಿರ್ವಿಕಾರ ತಾನೆ
ಸರ್ವಮಂಗಳಮಯ ಪರಮಾರ್ಥ ತತ್ವ ತಾನೆ ಆಗಿರುವಾಗ
ತಾನಾರಿಗೆ ನಮಸ್ಕರಿಸುವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 38 ॥

522

ತನುನಷ್ಟ ಮನನಷ್ಟ ಭಾವನಷ್ಟ ಜ್ಞಾನನಷ್ಟವಾದ ಘನ ಮಹಿಮ
ಎಂತಿರ್ದಂತೆ ಪೂಜೆ ನೋಡಾ ಬಯಲು ಅರಿತ ಬಯಲಾದ
ಘನವ ಏನೆಂಬೇನೆಂಬೆ ನುಡಿದಲ್ಲಿ ವಾಕ್ಯಾತೀತ ನಡೆದಲ್ಲಿ ನಿಃಕ್ರಿಯ
ನೆನದಲ್ಲಿ ನಿಷ್ಪತ್ತಿ ನಿರ್ಣಯವೆಂಬುದು ಆಗಮಕ್ಕೆ ನಿಲುಕದ ನಿಧಿ
ಸರ್ವಮಂಗಳಮಯ ನಿರಂತರ ತಾನೊಂದೆ ಸತ್ಯವಾಗಿರುವಲ್ಲಿ
ತಾನಾರಿಗೆ ನಮಸ್ಕರಿಸುವದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 39 ॥

523

ಒಂದು ಎರಡೊ ಎರಡು ಒಂದೊ ಒಂದಕಂಡವ ಎರಡ ಕಾಣಲಿಲ್ಲ
ಎರಡು ಕಂಡವ ಒಂದನರಿಯಲಿಲ್ಲ ಒಂದನರಿತವಂಗೆ
ದೇಹವೆಂಬುದಿಲ್ಲ ದೇಹಿ ಎಂಬುದಿಲ್ಲ ಅನೃತ ಜೀವನೂ ಇಲ್ಲ
ಇದ್ದುದ್ದೊಂದೆ ಸರ್ವಮಂಗಳಮಯ ನಿರಂತರ ಪರಮಾರ್ಥ ತತ್ವ
ತಾನಾಗಿರುವಾಗ ತಾನಾರಿಗೆ ನಮಸ್ಕರಿಸುವದು ಹೇಗೆ
ನಿರಂಜನ ಪ್ರಭು ನಾಗೇಶ್ವರಾ ॥ 40 ॥

524

ನಿಃಕಲ ನಿಜಘನವು ಎರಡಾದುದೆ? ಅಲ್ಲಿ ಒಂದೆಂಬುದಿಲ್ಲ ಎರಡೆಂಬುದಿಲ್ಲ
ಶರೀರವೆಂಬುದಿಲ್ಲ ಅಶರೀರವೆಂಬುದಿಲ್ಲ
ದಿಟ ಶಿವನೆಂಬುದಿಲ್ಲ ಸಟೆ ಜೀವನೆಂಬುದಿಲ್ಲ
ಇದ್ದಂತಿರುವ ಮಂಗಳಮಯ ಪರಮಾರ್ಥ ತತ್ವ ನಾನಾಗಿರುವಾಗ
ನಮಸ್ಕಾರ ಆರಿಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ. ॥ 41 ॥

525

ಮತಿಗೆ ಮೀರಿದುದು ಛಂದಸ್ಸಿಗೂ ಮೀರಿದುದು

ಅಖಂಡ ಭಕ್ತಿ ಅಖಂಡಭಾವ ಅಖಂಡ ಜ್ಞಾನದಿಂದುಕ್ತರಾದಲ್ಲಿ
ಸವೆಯದಾನಂದಮಾದ ತನ್ನ ಸ್ವರೂಪದೋಳ್ ಸಮರಸನೆಂಬುದು
ಶ್ರೀಗುರು ದತ್ತ ದೇವರ ಆಕಾಶವಾಣಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 42 ||

ಪರಮ ಸತ್ಯ

526

ಶುದ್ಧ ನಿರಂಜನ ಬೆಳಗು ನಿಸ್ಸೀಮ ನಿರ್ವಿಕಾರ ಬೆಳಗು ಇದನೇನೆಂಬೆ
ದೇಹವಿಲ್ಲದ ದೇಹ ಮನವಿಲ್ಲದ ಮಹಾಂತ ಭಯವಿಲ್ಲದ ಭಾವಭರಿತ
ನಿಂತ ನಿಲಯವೆ ಅವಿಮುಕ್ತ ಕ್ಷೇತ್ರ ಇದಾರಿಗೆ ಅಳವಲ್ಲ
ಅರಿತುದಿಲ್ಲ ಮರೆತುದಿಲ್ಲ ತಾನೆ ತಾನಾದ
ಬೆಳಗು ಮಹಾಬೆಳಗು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 1 ॥

527

ದಿಟ ಸಟೆಯೆಂಬುದನರಿಯದ ಘನ ನಿರಾಭಾರಿ ನಿರ್ದೇಹಿಘನನೇನೆಂಬೆ
ಅಂಗ ಅನಂಗ ಕಾಣದ ಮಹಾಂತ ಸಂಕಲ್ಪದ ಸುಳುವಿಲ್ಲದ ಸುಮನ
ಅರಿಯದರುವು ನೆಲೆಯಿಲ್ಲದ ನಿಲುವು ಕಂಡುದೆ ಪಾವನ
ನುಡಿದುದೆ ವೇದ ನಿಂತನಿಲುವೆ ನಿಜನಿವಾಸ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

528

ತೆರಹಿಲ್ಲದ ಘನ ಮನಮೇರೆದಪ್ಪಿದ ಘನ
ವಿಧೇಯ ಮುಖನಾದರೇನು ನಿಷೇಧ ಮುಖನಾದರೇನು
ಆಗದಿದ್ದರೇನು ಭಾವ ಭರಿತನಾಗಿರಲಿ 1ಇರದಿರಲಿ
ನಿಜದಿರುವಿನ ಘಟ್ಟಿ ನಿಜನಿವಾಸ ಅಕಳಂಕ
ಅಲ್ಲಿವಾದಕ್ಕಿಂಬಿಲ್ಲ ವಿವಾದಕ್ಕಿಂಬಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

529

ಏನೆಂದೆನಲಿಲ್ಲದ ಘನ ನಡೆದು ತೋರಿಸಲಿಕ್ಕಾಗದ ಘನ
ಸಂಗಿಯಾಗಿರಲಿ ನಿಸ್ಸಂಗಿಯಾಗಿರಲಿ ನಿಜದಲಿಪ್ಪಗಮ್ಯನು
ಕೇವಲ ವಿಶುದ್ಧನು ಅಖಂಡ ಮೂರ್ತಿ ಅಲ್ಲಿ ಅರಸುವದಿಲ್ಲ
ಆರಾಧಿಸುವದಿಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 4 ॥

530

ಸರ್ವೆಯದ ಸುಖ ಸುಖದ ಸುಖ ಪರಾತ್ಪರ ಸುಖ ಪರಮಾನಂದ
ತಾನಾದವಂಗೆ ಆಶೆ ಆವುದರದು ಪಾಶ ಆವುದರದು
ಬಯಲಿಗೆ ಬಂಧ ಮುಕ್ತಿಯ ನರಸುವರೆ
ಸ್ವತಂತ್ರನು ವಿಧಿ ನಿಯಮಗಳನು ಸರಿಸಬಲ್ಲ ಅನುಸರಿಸದಿರಬಲ್ಲ
ಸರ್ವಾರಂಭ ತ್ಯಾಗಿ ಶುದ್ಧ ನಿರಂಜನ ಘನ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 5 ||

531

ಅರಿಯದರವು ಅವಗ್ರಹಿಸಿತ್ತಾಗಿ ದೇಹವಾದವನಲ್ಲ ದೇಹಿಯಾದವನಲ್ಲ
ರಾಗಿಯಲ್ಲ ವಿರಾಗಿಯಲ್ಲ ನಿಶ್ಚಿಂತ ನಿರಾಮಯನು
ನಿರಂಕುಶತ್ವವೆ ಸಹಜವಾದುದರಿಂದ ಪೂರ್ಣಾನಂದಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 6 ||

532

ಅರಿತೆ ಅರಿಯೆನೆಂಬುದು ನಷ್ಟವಾಯಿತ್ತಾಗಿ ಮರೆತುದಿಲ್ಲ
ಅರಿತುದಿಲ್ಲ ಪ್ರಿಯಾಪ್ರಿಯಂಗಳಿಲ್ಲ ಸುಖದುಃಖ ಮುನ್ನಿಲ್ಲ
ಚೈತನ್ಯಮೂರ್ತಿ ಪ್ರಶಾಂತ ಸಮಸ್ವರೂಪ ಜ್ಞಾನಾನಂದ ನಿಧಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 7 ||

533

ಘನಚೈತನ್ಯವು ಅರಿವುಡೆ ಘನಕ್ಕೆ ಘನವು ಅದು ನಿರುಪಮ
ಅಲ್ಲಿ ಸತ್ಯಾಸತ್ಯವೆಂಬ ವಿಭಾಗಕ್ಕಿಂಬಿಲ್ಲ ಬಯಲಿನಂತೆ ನಿಸ್ಸೀಮ ಅದು
ರೂಪವೆನ್ನಲು ಬರದು ಅರೂಪವೆನ್ನಲು ಬರದು ನೆನಹಿಗೊಳಪಡದು
ನಿರ್ಣಯಕ್ಕೊಳಪಡದು ಅಲ್ಲಿ ತ್ರಿಪುಟಿಗಳ ಅಸ್ತಿತ್ವವಿರದು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 8 ||

534

ಪರಾತ್ಪರ ಚಿನ್ನಿಧಿ ಗಗನಾಕಾರದಂತೆ ಅಂದು ಇಂದು ಎಂದೆಂದೂ
ಇದ್ದಂತಿರುವ ಶುದ್ಧ ನಿರಾಳವು ಅಲ್ಲಿ ತ್ವಂಪದ ತತ್ಪದವೆಂಬ ಭಿನ್ನವಿಲ್ಲ
ತತ್ಪದ ಲಕ್ಷತ್ವಂಪದಲಕ್ಷವೆಂಬ ಅಭಿನ್ನವಿಲ್ಲ
ಅಲ್ಲಿ ಅಸಿಪದ ಅಸಿಪದಲಕ್ಷಗಳೆಂದೆನೆಸಲಿಂಬುಂಟೆ ಹೇಳಾ

ನಿರಂಜನ ಪ್ರಭು ನಾಗೇಶ್ವರಾ ॥ 9 ॥

535

ಇರವುದೆಲ್ಲ ಆದಿ ಮಧ್ಯಾಂತವಾಗದೆ ಇದ್ದಂತಿರುವ ನಿಷ್ಕಳಂಕ
ನಿಸ್ಸೀಮ ನಿಜ ಘನ ಒಂದೆ ಅಲ್ಲಿ ಕೂಡಿದುದಿಲ್ಲ ಅಗಲಿದುದಿಲ್ಲ
ತತ್ವ ಅತತ್ವವೆಂಬ ವಿಭಾಗಕ್ಕೆಡೆಯಿಲ್ಲ ಅದು ಪರಮ ನಿರಂತರ
ಅಲ್ಲಿ ಸಾರಭೂತ ಅಸಾರಭೂತ ಆವುದು ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 10 ॥

536

ಇರುವುದೆಲ್ಲ ನಿರಂತರವಾಗಿರುವ ಅಪಾರತತ್ವ
ಅಲ್ಲಿ ಅಡೆತಡೆಗಿಂಬಿಲ್ಲವಾದುದರಿಂದ ಪರಾತ್ಪರವು ಪರಮ ಪಾವನ
ಘನವು ಅಲ್ಲಿ ಸಾಕಾರ ನಿರಾಕಾರ ಹೇಗೆ ಸಾಧ್ಯ ಹೇಳಾ
ನಿರಂಜನ ಪ್ರಭು ನಾಗೇಶ್ವರಾ ॥ 11 ॥

537

ಪರಮಸತ್ಯ ಸಾಕ್ಷಾತ್ಕಾರವಾದವಂಗೆ
ಮನವು ವಿಷಯಾಸಕ್ತಿಯುಳ್ಳದ್ದಾಗಿರಲಿ ಆಗದಿರಲಿ ಅವನು ಸಮದರ್ಶಿ
ಸುಖವಿರಲಿ ಇಲ್ಲದಿರಲಿ ಅವನೆ ನಿಜವಾದ ಭೋಗಿ
ಅವನು ಮನವಾಗದ್ದರಿಂದ ನಿರ್ಲಕ್ಷ್ಯದಿಂ
ಸಹಜಾನಂದದೋಳ್ ಸಂಚರಿಸುವನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 12 ॥

538

ಮತಿಗತಿ ಕಾಣದ ಮಹಾಂತ ಉಪಮಿಸಲೆಡೆಗೊಡದ ತನ್ನಿರವು
ಕರಿಗೊಂಡವಂಗೆ ಮನವು ಬ್ರಹ್ಮ ಭಾವವುಳ್ಳದ್ದಾಗಿರಲಿ ಆಗದಿರಲಿ
ಅವನೆ ಅಕ್ಷಯ ಸುಖಿ ವೃತ್ತಿಯು ಸುಖಾಕಾರವಾಗಿರಲಿ ಆಗದಿರಲಿ
ಅವನೆ ನಿಜವಾದ ಭೋಗಿ
ಇಹಪರದ ಹಂಗಿಲ್ಲದ ಸ್ವತಂತ್ರನು ಜ್ಞಾನಾನಂದನು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 13 ॥

539

ಅಖಂಡೈಕರಸ ತಾನೆಂಬುದು ಕರಿಗೊಂಡವಂಗೆ ಪುರುಷಾರ್ಥಮಾದ

ಚೈತನ್ಯ ಭಾವವೂ ಇದೆ ಪರಮ ಪುರುಷಾರ್ಥಮಾದ
ಅತೀತ ಭಾವವೂ ಇದೆ ಅಲ್ಲಿ ಆಸಕ್ತಿ ಅನಾಸಕ್ತಿ ಸಮ ಕಥನಕ್ಕಿಂಬಿಲ್ಲದ
ಘನವು ತಾನಾದುದರಿಂದ ಕೆಡದು ನೆಟ್ಟಗಾಗದು ಇದ್ದಂತಿರುವ
ನಿರಾಳ ನಿಶ್ಚಿಂತಮೂರ್ತಿ ತಾನೆ
ನಿರಂಜನ ಪ್ರಭು ನಾಗೇಶ್ವರಾ || 14 ||

540

ನಿರಾಲಂಬವು ಸ್ವಾವಲಂಬಿಯಲ್ಲ ಪರಾವಲಂಬಿಯಲ್ಲ ಅಲ್ಲಿ
ಉಪಾಧಿ ಇದ್ದುದಲ್ಲ ಇಲ್ಲದುದಲ್ಲ ಅಂಟಿದುದಲ್ಲ ಸಂಬಂಧವಿಲ್ಲ ಸಂಗವಿಲ್ಲ
ಇದ್ದಕ್ಕಿದ್ದಂತಿದ್ದ ಘನವು ಗಗನಾಕಾರದಂತಿರುವ ನಿಷ್ಪತ್ತಿ ನಿರಾಳ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 15 ||

541

ನಿರ್ಬಯಲು ತಾನು ತಾನೆ ಅಲ್ಲಿ ಬಯಲೊಳ ಬಯಲೆಂಬುದಿಲ್ಲ
ಚಿದಾಕಾಶವು ಸ್ವಮಹಿವು ಅಂಗಾಂಗವೆಂಬುದು ಇದ್ದುದಲ್ಲ
ಇಲ್ಲದುದಲ್ಲ ಅಳಿದುದಲ್ಲ ಉಳಿದುದಲ್ಲ
ಸಂಗಿ ಎನ್ನಲುಬರದು ನಿಸ್ಸಂಗಿ ಎನ್ನಲು ಬರದು ಅರಿವುಡೆ ತಾನೆ
ನಿರಂಜನ ಪ್ರಭು ನಾಗೇಶ್ವರಾ || 16 ||

542

ಸತ್ಯವು ದೇಹವಾಸನೆ ಲೋಕವಾಸನೆ ಶಾಸ್ತ್ರವಾಸನೆಯಿಂದ ಅತೀತವು
ಇದು ಅದು ಎಂಬ ಪದದಿಂದ ವಿವರಿಸಲಾಗದ ಅವಿಮುಕ್ತಿಯ ಘನ
ಅಲ್ಲಿ ಜನನ ಮರಣ ಹೇಗೆ ಸಾಧ್ಯ
ತಾನೆ ತಾನಾದುದು ಧ್ಯಾನಮಾಡಿದರೇನು ಬಿಟ್ಟರೇನು
ನಿರಂಜನ ಪ್ರಭು ನಾಗೇಶ್ವರಾ || 17 ||

543

ಸಕಲ ತೋರಿಕೆಯಿಂದ ಪಾರಾದುದು ಸತ್ಯ
ಅಲ್ಲಿ ಜಪಸೂತಕ ತಪಸೂತಕ ಅನುಷ್ಠಾನಸೂತಕ
ಬೋಧಸೂತಕ ಬೋಧಕತ್ವಸೂತಕ
ಇದು ಏನೊಂದಾಗದ ಇದ್ದಂತಿರುವ ವಿವರಿಸಲಾಗದ ಘನ
ಅಲ್ಲಿ ಹುಟ್ಟಿರುವೆನೆಂಬುದೆಲ್ಲಿ ಸಾವು ಎಂಬುದೆಲ್ಲಿ
ಸ್ವೇಚ್ಛಾಮೂರ್ತಿ ನಿರಾವರಣ ನಿರಘ ನಿರಂಜನ ನೋಡಾ

ನಿರಂಜನ ಪ್ರಭು ನಾಗೇಶ್ವರಾ || 18 ||

544

ಇಂದ್ರ ಜಾಲದಂತಿರುವುದೆ ಸೃಷ್ಠಿ ಸರ್ವ ತೋರಿಕೆಯಿಂದುಕ್ತವಾದುದೆ
ಸೃಷ್ಠಿ ರೂಪಾರೂಪವೆನ್ನಲು ಬಾರದ ಅಖಂಡೈಕರಸವಾದ
ಶಿವ ಒಂದೆ ಸತ್ಯ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 19 ||

545

ಸತ್ಯ ಅಹಿಂಸೆ ಬ್ರಹ್ಮಚರ್ಯ ಆಸ್ತೇಯ ಅಪರಿಗ್ರಹದಿಂದ ಹಿಡಿದು
ತತ್ವಮಸಿ ಮಹಾವಾಕ್ಯಗಳ ಪರ್ಯಂತರ ನಾವು ನಿರ್ಲಕ್ಷರು
ನಿಃಕಲ ಘನರು ಅಹಮಿಲ್ಲದ ಜ್ಞಾನಸ್ವರೂಪ ಅಖಂಡಾನಂದಮಯನು
ಅಲ್ಲಿ ರಾಗ ವಿರಾಗ ಬರುವದು ಹೇಗೆ ಹೇಳಾ
ನಿರಂಜನ ಪ್ರಭು ನಾಗೇಶ್ವರಾ || 20 ||

546

ಮನುಷ್ಯನ ಮತಿಗೆ ಮೀರಿರುವದರಿಂದ
ಅಲ್ಲಿ ಮಧೋಲಕ್ಷಣ ಅನ್ವಿಯಿಸದು
ಭಾವಶುದ್ಧವಾದಲ್ಲಿ ಅಖಂಡ ಭಕ್ತಿ ಅಖಂಡಭಾವ
ಅಖಂಡ ಜ್ಞಾನದಿಂದ ಅಖಂಡೈಕರಸದಲ್ಲಿ ಸಮರಸ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 21 ||

ಘನಗಂಭೀರ

547

ಅಪರಾಧ ಅಪರಾಧ ಅಪರಾಧ ದೇವ ದೇವ
ನಿನ್ನಘನವ ನರಿಯದೆ ನಿನ್ನಡಿಗೆ ಬಂದೆನೆಂದು
ನಿನ್ನ ವ್ಯಾಪಕತೆಗೆ ಚ್ಯುತಿ ತಂದುದು ಅಪರಾಧ
ಶೃತಿಗೆ ಮೀರಿದ ನಿನ್ನ ಘನವ ನರಿಯದೆ ನಿನ್ನ ಕುರಿತು ಧ್ಯಾನ ಮಾಡಿ
ನಿನ್ನ ಅಚಿಂತ್ಯ ಪದಕ್ಕೆ ಚ್ಯುತಿ ತಂದುದು ಅಪರಾಧ
ಏನೊಂದುಸರಲೆಡೆಗೊಡದ ನಿನ್ನ ಘನವ ನರಿಯದೆ ನಿನ್ನ ಸ್ತುತಿಸಿ ಸ್ತುತಿಸಿ
ನೀನು ವಾಕ್ಕಾತೀತನೆಂಬುದಕ್ಕೆ ಚ್ಯುತಿ ತಂದುದು ಅಪರಾಧ
ಪ್ರತಿದಿನ ನಾನು ತಪ್ಪದೆ ಮಾಡುವ ಈ ಮೂರು ಅಪರಾಧಗಳ ಮನ್ನಿಸು
ನಿರಂಜನ ಪ್ರಭು ನಾಗೇಶ್ವರಾ ॥ 1 ॥

548

ದೇವ ದೇವ ನಿನ್ನರುವೆ ಎನ್ನರುವು ಎನ್ನರುವೆ ನಿನ್ನರುವು
ನಾನೆಂಬುದು ನೀನು ನೀನೆಂಬುದು ನಾನು
ನಾ ನೀನೆಂಬುದು ಅಖಂಡ ಅದ್ವಿತೀಯ
ಅಪಾರವಾಗಿರುವಲ್ಲಿ ನಾನೆಂಬುದು ನನ್ನೊಳ್ ಇಂಬಿಲ್ಲವಾದ್ದರಿಂದ
ನಾನು ನಿನಗೆ ಅಪರಾಧ ಮಾಡಿದುದು ಸುಳ್ಳು
ನೀನೆಂಬ ಮಾಯಿಕತ್ವವ ನಿನ್ನೊಳ್ ಇಲ್ಲವಾದ್ದರಿಂದ
ನೀನು ನನಗೆ ಮನ್ನಿಸುವದು ಸುಳ್ಳು
ಎಂಬುದೆ ನಾ ನೀ ಒಂದಾದ ಘನದ ಸ್ಥಿರಮತ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 2 ॥

549

ತಾನಾರೆಂದರಿತವರು ತನಗಿಂತನ್ಯವ ಕಾಣಲಿಲ್ಲ
ಕಾಣದ್ದರಿಂದದು ಎಂದೆಂದು ಇಲ್ಲದುದು
ತಾನು ಅಂದು ಇಂದು ಎಂದೆಂದೂ ಇದ್ದವನಾದುದರಿಂದ ತಾನೆ
ಏಕಮೇವಾದ್ವಿತೀಯ ಪರಬೊಮ್ಮವೆಂಬುದು ಸ್ವತಃ ಸಿದ್ಧ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 3 ॥

550

ನಿರುಪಾಧಿಯೆ ಒಡಲ ಹಂಗು ಹರಿದ ಮಹಾಂತ
ಇಂದ್ರಿಯಂಗಳ ಹರದಾಟವ ಕಾಣದ ಅತೀಂದ್ರಿ
ಮನ ಕರಗಿದ ಮೃದು ಹೃದಯ ಒಳ ಹೊರಗು ಶುದ್ಧಿ
ಬಯಸ ಿವವನಲ್ಲ ಬೇಡುವವನಲ್ಲ ದೊರೆತುದರಲ್ಲಿ
ಪರಿಣಾಮಿ ಶಾಂತನು ಸ್ಥಿರಚಿತ್ತನು ಸುಖದ ಸುಖಿ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 4 ॥

551

ಸುಖದ ಸುಖ ಸ್ವಯ ಸುಖ ಅರಸಲು ಬರುವದೇನಯ್ಯ
ಅನುಸಂದಾನ ಮಾಡಲು ಬರುವದೇನಯ್ಯ
ವಾಕ್ ಮನಸ್ಸಿಗೆ ಮೀರಿದ ಘನವ ವಾಕ್ಕಿನಿಂದ ಉಸರುವದೆಂತು
ನೆನಹಿಂಗೆ ಮೀರಿದ ಘನವ ಮನವು ನೆನೆಯುವದೆಂತು
ತಾನು ವಾಕ್ ಮನಸ್ಸಿಗೆ ಮೀರಿ ನಿಂದು ನೋಡಲು
ಸ್ವಯಂಜ್ಯೋತಿ ತಾನೆ ಸಮಸ್ವರೂಪ ತಾನೆಂಬುದು
ತನ್ನಿಂದ ತಾನರಿಯಲು ತಾನೆ ದಿಟ ದಿಟ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 5 ॥

552

ಘನಗಂಭೀರ ಮಹಾಘನದೊಳ್ ಘನಕ್ಕೆ ಘನವಾಗಿರ್ದ
ಘನವಂತನ ಏನೆಂಬೇನೆಂಬೆ
ತನುವಾಗದ ತನು ಮನವಾಗದ ಮನ
ಅಲ್ಲಿ ಒಡಲಾಶೆಗಿಂಬಿಲ್ಲವಾದ್ದರಿಂದ ನಿಃಕಾಮಿಯು ನಿರ್ದೇಹಿಯು
ನಿರಾವರಣನು ಸಮದೃಷ್ಠಿಯುಳ್ಳವನು
ಕರುಣಾಮಯನು ಸರ್ವಾತ್ಮಭಾವಿಯು ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 6 ॥

553

ಕರುಣಾಳುವಿಗೆ ಕರಣಂಗಳ ಕಲಿತನವಿಲ್ಲ
ಶಮೆಯೆ ಆತನ ನಿಧಿ ಚರಾಚರ ಜಗವ ಸಮದೃಷ್ಠಿಯಿಂದ ನೋಡುವ
ಸುಜ್ಞಾನಿ ಸಕಲರ ಕಲ್ಯಾಣ ಬಯಸುವ ಆತ್ಮಕಾಮಿ
ಪರಾವಾಣಿಯಿಂ ಶೋಭಿಸುವ ಪ್ರಕಾಶಮಯನು
ಸ್ವತಂತ್ರನು ತನ್ನ ಸ್ವಯ ಸುಖದೊಳ್ ತದ್ಗತನು ನೋಡಾ

ನಿರಂಜನ ಪ್ರಭು ನಾಗೇಶ್ವರಾ || 7 ||

554

ತತ್ವ ವೇತ್ತರಾದ ಜ್ಞಾನ ವಿಜ್ಞಾನದಿಂದುಕ್ತರಾಗಿ ತೃಪ್ತರೂಪ
ತೃಪ್ತಿಯನ್ನೈಯ್ದು ಕೃತಕೃತ್ಯರಿಂದ ನಿಶ್ಚಿಂತ ನಿರಾಮಯದಿಂದ
ನಿರುಪಮ ನಿರ್ಭೇದ್ಯರಿಂದ ಅಘಟಿತ ಘಟನಾ ಸಮರ್ಥರಿಂದ
ಅವಧೂತನೆಂಬ ಘನ ಗಂಭೀರನ ಘನತ್ವವ ತಿಳಿಯಬೇಕು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 8 ||

555

ಘನ ಗಂಭೀರ ಪರಮಾನಂದಮಯನೆ ಅವಧೂತ ನೋಡಾ
ಅವಧೂತನೆಂಬುದು ನಾಲ್ಕಕ್ಷರ ನಾಲ್ಕು ಮಹಾವಾಕ್ಯಗಳ
ಜ್ಞಾನಾಮೃತವನುಂಡ ಜ್ಞಾನಾನಂದಮಯನಾದ ಮಹಾಂತನೆ ಅವಧೂತ
ಅಲ್ಲಿ ಚರದೇಹ ಚರಲಿಂಗ ಚರಜಂಗಮ ಕಾಣಲುಂಟೆ
ಕಂಡಲ್ಲಿ ಅವಧೂತನೆಂಬ ಘನಸುಖದಿಂದ ದೂರಾತಿದೂರ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 9 ||

556

ಘನ ಗಂಭೀರ ಅ ವ ಧೂ ತ ನೆಂಬ ಒಂದೊಂದೆ ಅಕ್ಷರದ
ಘನವ ನೋಡಿರೆ ಅ ಎಂಬ ಮೊದಲನೆ ಅಕ್ಷರವು ಅಚಿಂತ್ಯಾತ್ಮಕ
ಘನ ಸುಖವ ಸೂಚಿಸುವದು ಅಚಿಂತ್ಯನಿಗೆ ಚಿಂತೆ ಏತರದು
ಆಶೆ ಏತರದು ಪಾಶ ಏತರದು ಪೂರ್ಣಾತ್ ಪೂರ್ಣ ತಾನೆಂಬುದು
ಕರಿಗೊಂಡ ನಿಷ್ಕಳಂಕ ಸಹಜ ಪರಮಾನಂದದಲ್ಲಿ ತನ್ಮಯನು ನೋಡಾ
ನಿರಂಜನ ಪ್ರಭು ನಾಗೇಶ್ವರಾ || 10 ||

557

ನಿರಾಮಯ ನಿರ್ಭೇಧ್ಯ ಘನವಂತನ ವ ಎಂಬ ಎರಡನೆ
ಅಕ್ಷರವು ವಸ್ತುವೆ ತಾನಾದ ಘನತ್ವ ಸೂಚಿಸುವದು ವಸ್ತುವೆ
ತಾನಾದಲ್ಲಿ ವಾಸನೆಗಿಂಬುಂಟೆ ಮರವಿಂಗೆ ವಾಸನೆ ತ್ರಯಗಳು
ಅರುವೆಂಬುದು ಅರಿಯದರವು ಪರಾತ್ಪರ ಪರಂಜ್ಯೋತಿ ಅನವರತ
ಸ್ವಯ ಸುಖದಲ್ಲಿದ್ದಗಮ್ಯ ಅಪ್ರಮಾಣ ನೋಡಾ
ನಿರಂಜನ ಪ್ರಭು ನಾಗೇಶ್ವರಾ || 11 ||

558

ಅವಧೂತ ಇವ ಅವಧೂತ ದೇಹ ಧೂಳದಿಂದ ಮುಚ್ಚಿದರೂ
ಮನವು ಜ್ಞಾನಾಮೃತದಲ್ಲಿ ಸಮರಸ ಧೂ ಎಂಬ ಮೂರನೆ ಅಕ್ಷರವು
ತನುತ್ರಯದ ಭಾವದಿಂ ದೂರ ಜೀವತ್ರಯದಭಿಮಾನದಿಂ ದೂರ
ಅವಸ್ಥಾತ್ರಯಗಳ ದೆಶೆಯಿಂ ದೂರ ಧಾರಣ ಧ್ಯಾನಾದಿಗಳಿಂದ ದೂರ
ಶ್ರವಣಾದಿಗಳಿಂದ ದೂರ ನಿರಾಲಂಬ ನಿಜಾತ್ಮ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 12 ॥

559

ಅವಧೂತನೆಂಬ ನಾಲ್ಕಕ್ಷರವೆ ತ ತ ದ ಘನತ್ವವ
ನೋಡಿರೆ ತ ಎಂಬುದೆ ತತ್ಸ್ವರೂಪನು ತತ್ಸ್ವರೂಪವೆಂಬುದು
ಪರಾತ್ಪರ ಪರವಸ್ತು ಪರಮಾನಂದಮಯವು ಕರಿಗೊಂಡವಂಗೆ
ಪ್ರವೃತ್ತಿ ಆವುದು ನಿವೃತ್ತಿ ಆವುದು ಸಾವಯವ ಆವುದು
ನಿರವಯ ಆವುದು ಅಲ್ಲಾದುದು ಆವುದು ಅಹುದಾದುದು ಆವುದು
ಬೇಕೆಂಬುದಿಲ್ಲ ಬೇಡೆಂಬುದಿಲ್ಲ ಅಹಂಕಾರದಿಂದ ಪಾರಾದುದರಿಂದ
ಅಹಮಿಲ್ಲದ ಚಿದೀಶ್ವರ ತಾನೆ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 13 ॥

560

ಲಕ್ಷ ವಚನಂಗಳ ಹೇಳಿದರೇನು ಕೇಳಿದರೇನು ಕಾಯ ವಾಚ
ಮನವೆಂಬ ಭ್ರಮರೂಪಿ ಮಾಯಿಕವ ತ್ಯಜಿಸು ವಾಸನೆಯ ತ್ಯಜಿಸು
ಅಹಂಕಾರವ ತ್ಯಜಿಸು ತ್ಯಜಿಸಲು ಬಹುದುಸ್ತರ ಬಹು ಸುಲಭ
ಸದ್ಗುರು ಕರುಣವುಳ್ಳವಂಗೆ ಸಹಜ ಸಾಧ್ಯ
ಕರುಣಾರಹಿತಂಗೆ ಬಹು ದುಸ್ತರ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 14 ॥

561

ಲಕ್ಷ ವಚನಂಗಳ ಹೇಳಿದರೇನು ಲಕ್ಷ ವಚನಂಗಳ ಕೇಳಿದರೇನು
ಮನವು ಹಂಸವಾಗಬೇಕು ಕಾಗೆಯಾಗಬಾರದು ಹಂಸವಾಗುವುಡೆ
ನಾಮರೂಪಿ ಜಲವ ತ್ಯಾಗ ಮಾಡಿ (ಗಗನದಂತೆ ಅಖಂಡವಾದ)
ಜ್ಞಾನಾಮೃತ ರೂಪ ಹಾಲಿನ ಘನ ಸುಖಿ ನೋಡಾಕಾಗಿಯಾಗುವುಡೆ
ಕೋಹಂ ರೂಪಿ ಮರವಿನ ಮಹಾಮೃತ್ಯುರೂಪಿ ನರಕ ನಿವಾಸ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 15 ॥

562

ತ್ಯಜಿಸು ತ್ಯಜಿಸು ತ್ಯಜಿಸುವಡೆ ಕಾಯ ವಾಚ ಮನವೆಂಬ
ತ್ರಿಕರಣರೂಪಿ ಮಾಯಿಕವ ತ್ಯಜಿಸು ವಾಸನೆಯ ತ್ಯಜಿಸು
ಅಹಂಕಾರವ ತ್ಯಜಿಸು ತ್ಯಜಿಸಲು ಬಹು ದುಸ್ತರ ಬಹು ಸುಲಭ
ಅರುವು ವುಳ್ಳವಂಗೆ ಸಹಜ ಸಾಧ್ಯ ಮರವುಳ್ಳಂಗೆ ಬಹು ದುಸ್ತರ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 16 ॥

563

ನಿರ್ಮಳ ನಿಜಾತ್ಮವು ಮಿಥ್ಯಾಮಯ ವಿಕಾರವಾಗದು
ಅನುಪಮವು ಉಪಮೆಯುಳ್ಳದ್ದಾಗದು
ಅವಿಲಕ್ಷ್ಯ ವಿಲಕ್ಷ್ಯವಾಗದು
ಸರ್ವಸಮವಾದ ಘನ ನುಡಿದು ಹೇಳುವದದೆಂತು
ನಿರಂಜನ ಪ್ರಭು ನಾಗೇಶ್ವರಾ ॥ 17 ॥

564

ತೋರದಡಗದ ಘನವು ತೋರಿದುದದೆಂತೊ
ತೋರಿಬರುವ ವಿಷಯ ರೂಪ ಜಗವಾಗಲಿ
ತೋರಿಬರುವ ಪರಮಾರ್ಥವಾಗಲಿ ಸತ್ಯವೆ
ಅಲ್ಲಲ್ಲ ಕೇವಲ ಚಿನ್ಮಯ ಒಂದೆ ಸತ್ಯ
ಸರ್ವಸಮರಸವಾಗದ ತನ್ನಂ ಬಿಟ್ಟು ಅನ್ಯವಲ್ಲ ನೋಡಾ
ನಿರಂಜನ ಪ್ರಭು ನಾಗೇಶ್ವರಾ ॥ 18 ॥



ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು. ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು. ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು. ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು. ಜಾತಿ ಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು. ಅವು ಪೂಜೆಗೆ, ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು.

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟುಕೊಂಡು ಶರಣರ ವಚನಗಳನ್ನು ತೆಗೆದುಕೊಂಡು ಅವುಗಳಿಗೆ ತಮ್ಮದೆ ಆದ ಸೂತ್ರ ರೂಪದ ವ್ಯಾಖ್ಯಾನವನ್ನು ಬರೆದರು. ಇವು ಮನುಕುಲವನ್ನು ಮಹಾ ಮನುಕುಲದತ್ತ ತೆಗೆದುಕೊಂಡು ಹೋಗುವುದರಲ್ಲಿ ಸಂದೇಹವೇ ಇಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ. ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ. ಗುರುಗಳಾದರೂ ಅಷ್ಟೆ. ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ಬಸವರಾಜ ಸ್ವಾಮಿ

ಸಂಪಾದಕ